## 3. ವಿತ್ತೀಯ ಕಾರ್ಯಕಲಾಪಗಳು

**ಶ್ರೀ ವಿ. ಸೋಮಣ್ಣ (ಗೋವಿಂದರಾಜನಗರ):** ಸನ್ಮಾನ್ಯ ಅಧ್ಯಕ್ಷರೆ, ತಾವು ಕೂಡ ಸಾಕಷ್ಟು ಬಾರಿ ಇಲ್ಲಿಗೆ ಆರಿಸಿ ಬಂದಿದ್ದೀರಿ. ತಾವು ವಿರೋಧಪಕ್ಷದ ನಾಯಕರಾಗಿದ್ದೀರಿ, ಸಚಿವರಾಗಿ ಕೆಲಸವನ್ನು ಮಾಡಿದ್ದೀರಿ. ನಾವುಗಳು ಸಹ ನಿಮ್ಮ ಜೊತೆಯಲ್ಲಿಯೇ ಬಂದಿದ್ದೇವೆ. ನಮಗೆ ಮಾತನಾಡುವುದಕ್ಕೆ ಸಾಕಷ್ಟು ಅವಕಾಶಗಳು ಇವೆ ಎಂದು ನಾವು ಭಾವಿಸಿಕೊಂಡಿದ್ದೇವೆ. ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳು. 2008-09ರ ಈ ಆಯವ್ಯಯವನ್ನು ರಾಜ್ಯದ ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವರಾಗಿರುವಂತಹ ಸನ್ಮಾನ್ಯ ಶ್ರೀ ಬಿ. ಎಸ್. ಯಡಿಯೂರಪ್ಪನವರು ತಮ್ಮದೆ ಆದಂತಹ ಅನುಭವವನ್ನು ಹಂಚಿಕೊಂಡಿದ್ದಾರೆಂಬ ದೃಷ್ಟಿಯನ್ನು ನಾವು ಪುಸ್ತಕದಲ್ಲಿ ನೋಡಿದ್ದೇವೆ. ವಿಶೇಷವಾದ ಕಾಳಜಿಯನ್ನು ಉಳ್ಳವರಾಗಿ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗಾಗಿ ಏನಾದರೂ ಮಾಡಬೇಕೆಂದು ಹೇಳಿ 5 ವರ್ಷಕ್ಕೆ ಎಷ್ಟು ಹಣವನ್ನು ನಾವು ಖರ್ಚು ಮಾಡಿದರೂ ಕೂಡ ಇಷ್ಟು ಕೆಲಸಗಳನ್ನು ಪೂರೈಸುವುದಕ್ಕಾಗುವುದಿಲ್ಲವೋ, ಅವೆಲ್ಲವನ್ನು ಇಲ್ಲಿ ಅಳವಡಿಸುವಂತಹ ಕೆಲಸವನ್ನು ಮೊದಲನೇ ಆಯವ್ಯಯದಲ್ಲಿ ಮಾಡಿರುವಂತಹದ್ದು, ಅವರ ವಿವೇಚನೆ, ಅವರ ಇಚ್ಛಾಶಕ್ತಿ, ವಿಶೇಷವಾಗಿ ರಾಜ್ಯದ ಒಬ್ಬ ಮುಖ್ಯಮಂತ್ರಿಯಾಗಿ ಈ ರಾಜ್ಯಕ್ಕೆ ತನ್ನದೆ ಆದಂತಹ ಕೊಡುಗೆಯನ್ನು ಕೊಡಬೇಕೆಂದು ಇಚ್ಛೆಪಟ್ಟು ಮಾಡಿದ್ದರೆ ನಮಗೇನು ಬೇಸರಿಗೆ ಏನು ಇಲ್ಲ. ಆದರೆ ಇವೆಲ್ಲವನ್ನೂ ಕೂಡ ಪೂರೈಸುವಂತಹ ಕೆಲಸವನ್ನು ಕೇವಲ 7-8 ತಿಂಗಳುಗಳಲ್ಲಿ ಮಾಡುವಂತಹದ್ದಕ್ಕೆ ಸಾಧ್ಯತೆ ಇದೆಯೇ? ಎನ್ನುವಂತಹ ಅನುಮಾನ ಈ ಸದನದಲ್ಲಿ ನಾನೂ ಕೂಡ 4 ಭಾರಿ ಶಾಸಕನಾಗಿ ಬಂದಿದ್ದರಿಂದ ಇದನ್ನು ವ್ಯಕ್ತಪಡಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ. ವಿಶೇಷವಾಗಿ 2006-07, 2007-08, 2008-09 ಈ ಮೂರ ಆಯವ್ಯಯವನ್ನು ಕೂಡ ಸನ್ಮಾನ್ಯ ಮುಖ್ಯಮಂತ್ರಿಗಳು ಅಂದಿನ ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು ಆಗಿ 2006-07, 2007-08 ರಲ್ಲಿ ಮಾಡಿದ್ದಾರೆ ಮತ್ತೆ 2008-09 ಈ ಮೂರು ಆಯವ್ಯಯವನ್ನು ಮಂಡನೆ ಮಾಡಿರುವಂತಹವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾರೆ. ಇವರು ಮುಖ್ಯಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ರೇವಣ್ಣನವರು ಹೊರಟು ಹೋದರು ಎಂದು ಕಾಣಿಸುತ್ತದೆ. ಯಾವ ಯಾವ ರೀತಿಯಾಗಿ ಬೆಳವಣಿಗೆಯಾಗಿದೆ. ಏನೇನು ಆಗಿವೆ ಇವೆಲ್ಲವುಗಳು ಜನಜನಿತವಾಗಿ ರಾಜ್ಯದ ಜನರಿಗೆ

ಗೊತ್ತಿರುವಂಥಹ ವಿಚಾರವಾಗಿದೆ. ನಾನು ಇದನ್ನು ನನ್ನದೆ ಆದಂತಹ ದೃಷ್ಟಿಕೋನದಲ್ಲಿ ಕಣ್ಣನ್ನು ಹಾಯಿಸಿದಾಗ ಕೆಲವಾರು ವಿಚಾರಗಳು ರಾಜ್ಯದ ಪೂರಕವಾಗಿದ್ದರೂ ಕೂಡ ಈ ಪೂರಕವಾದಂತಹ ವ್ಯವಸ್ಥೆಗೆ ಬೇಕಾಗಿರುವಂತಹ ಹಣಕಾಸನ್ನು ಒದಗಿಸುವಂತಹದ್ದಕ್ಕೆ ರಾಜ್ಯ ಸರ್ಕಾರವಾಗಲಿ, ಇನ್ನಿತರೆ ಸಂಸ್ಥೆಗಳಾಗಲಿ, ಅದಕ್ಕೆ ಕಾಲಮಿತಿಯಲ್ಲಿ ಈ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದಕ್ಕೆ ಸಾಧ್ಯತೆ ಇದೆಯೇ ಎನ್ನುವುದನ್ನು ಇವತ್ತು ನಾವು ಚಿಂತನೆಯನ್ನು ಮಾಡಬೇಕಾಗಿದೆ. ಈ ಚಿಂತನೆಯ ಉದ್ದೇಶ ಇವತ್ತು ಏನು ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಸುಮಾರು 56 ಸಾವಿರ ಗ್ರಾಮಗಳು ಏನಿವೆ, ಈ ಎಲ್ಲಾ ಗ್ರಾಮಗಳಿಗೂ ಕೂಡ ಮೂಲಭೂತ ಸೌಕರ್ಯಗಳು, ವಸತಿ, ಕುಡಿಯುವ ನೀರು, ಶೌಚಾಲಯ, ರಸ್ತೆ ಮತ್ತು ವಿದ್ಯುತ್, ಆರೋಗ್ಯ ಹಾಗೂ ಶೈಕ್ಷಣಿಕ ಸೇವೆಗಳನ್ನು ಒದಗಿಸುವಂತಹದ್ದು. 56 ಸಾವಿರ ಗ್ರಾಮಗಳು ಏನಿವೆ, ಈ ಗ್ರಾಮಗಳಲ್ಲಿ ವಿಶೇಷವಾಗಿ ಎಲ್ಲವನ್ನು ಮಾಡುವುದಕ್ಕೆ ಆಗದೇ ಇದ್ದರೂ ಕೂಡ ಒಂದೊಂದು ಕ್ಷೇತ್ರಕ್ಕೆ 224 ಕ್ಷೇತ್ರಗಳಲ್ಲಿ ಕನಿಷ್ಟ 20–20 ಹಳ್ಳಿಗಳನ್ನು ತೆಗೆದುಕೊಂಡು ಒಂದು 10 ಸಾವಿರ ಗ್ರಾಮಗಳಿಗೆ ಇಂತಹ ಸವಲತ್ತುಗಳನ್ನು ಕೊಟ್ಟಿದ್ದೇ ಆದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯದ ಇತಿಹಾಸದಲ್ಲಿ ಉಳಿದುಕೊಳ್ಳುತ್ತಾರೆ. ಅಂತಹ ಕೆಲಸವನ್ನು ಮಾಡುವಂತಹ ಚಿಂತನೆಯನ್ನು ಅವರು ಮಾಡಬೇಕೆಂಬ ಮನವಿಯನ್ನು ನಾನು ತಮ್ಮ ಮೂಲಕವಾಗಿ ಮಾಡುವುದಕ್ಕೆ ಇಚ್ಚಿಸಪಡುತ್ತೇನೆ. ಇವೆಲ್ಲವೂ ಕೂಡ ಕಷ್ಟಸಾಧ್ಯವಾದ ಕೆಲಸವಾಗಿದೆ. ಏತಕ್ಕೆಂದರೆ, ನಾನು ಮೊನ್ನೆ 15 ದಿನಗಳ ಹಿಂದೆ ನಮ್ಮ ಹಳ್ಳಿಗೆ ಹೋಗಿದ್ದೆ. ಅಲ್ಲಿ 4–5 ಹಳ್ಳಿಗಳಿಗೆ ಹೋದಾದ, ಹಳ್ಳಿಗಳಲ್ಲಿರುವಂತಹ ಬೋರವೆಲ್‌ಗಳಲ್ಲಿ ಸಾಕಷ್ಟು ಬೋರವೆಲ್‌ಗಳು ಕೆಟ್ಟುಹೋಗಿವೆ. ಮತ್ತೇ ಸಾಕಷ್ಟು ಬೋರವೆಲ್‌ಗಳಲ್ಲಿ ground water table ಗಳು ಕೆಳಗಡೆ ಹೋಗಿ ಇವತ್ತು ನೀರೇ ಇಲ್ಲ.

ಸಾಮಾನ್ಯ ಜನರ ಬವಣೆ ಯಾವ ರೀತಿಯಾಗಿದೆ ಎಂದರೆ, ಒಂದು ಕಡೆ ವಿದ್ಯುಚ್ಛಕ್ತಿ ಇಲ್ಲ. ಮತ್ತೊಂದು ಕಡೆ underground table ಗಳು ಕೆಳಗಡೆ ಹೋಗಿದೆ. ಮತ್ತೊಂದು ಕಡೆ ಬೋರ್‌ವೆಲ್‌ಗಳು ರಿಪೇರಿ ಇಲ್ಲದೆ ಬಹುತೇಕ ನೋವನ್ನು ಅನುಭವಿಸುತ್ತಿರುವಂತಹ ಪರಿಸ್ಥಿತಿ, ನಮ್ಮ ಹಾಗೆ ಹಳ್ಳಿಗಾಡಿನಲ್ಲಿ ಬಂದಿರುವಂತಹ ಸನ್ಮಾನ್ಯ ಯಡಿಯೂರಪ್ಪನವರಿಗೂ ಸಹ ಗೊತ್ತಿದೆ. ಇದರಲ್ಲಿ 56 ಸಾವಿರ ಗ್ರಾಮಗಳು ಏನಿವೆ. ಇದನ್ನು ಸರ್ವಾಂಗೀಣ ಅಭಿವೃದ್ಧಿಗೆ ತರಬೇಕೆಂಬ ಬಗ್ಗೆ ಅವರ ಚಿಂತನೆ ಏನು ಇದೆ. ಈ

ಚಿಂತನೆಯ ಬಗ್ಗೆ ನನಗೆ ಸ್ವಾಗತವಿದೆ. ಅದಕ್ಕೆ ನಾನು ಅಭಿನಂದಿಸುತ್ತೇನೆ. ಆದರೆ ಎಲ್ಲವನ್ನು ಕೂಡ ಏಕಕಾಲದಲ್ಲಿ ಕೈಗೆತ್ತಿಕೊಳ್ಳುವಂತಹದ್ದು ಕಷ್ಟಸಾಧ್ಯವಾದಂತಹ ಕೆಲಸವಾಗಿದೆ. ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಯಾವ ಯಾವ ತಾಲ್ಲೂಕುಗಳಲ್ಲಿ, ಯಾವ ಯಾವ ಗ್ರಾಮಗಳಲ್ಲಿ, ಬೋರ್‌ವೆಲ್‌ಗಳು ಕೆಟ್ಟುಹೋಗಿವೆ, underground water table ಕೆಳಗಡೆ ಹೋಗಿವೆ, ಎಲ್ಲಿ ವಿದ್ಯುತ್ ಬವಣೆಯನ್ನು ನೀಗಿಸುವಂತಹ ಪರಿಸ್ಥಿತಿ ಇಲ್ಲ, ಇದಕ್ಕೆ ತಾವು ಹೆಚ್ಚಿನ ಆದ್ಯತೆಯನ್ನು ಕೊಟ್ಟು ಕನಿಷ್ಠ ಒಂದೊಂದು ಗ್ರಾಮದಲ್ಲಿ 5–10 ಬೋರ್‌ವೆಲ್‌ಗಳು ಇರುವಂತಹ ದೊಡ್ಡದಾದಂತಹ ಗ್ರಾಮಗಳಲ್ಲೂ ಕೂಡ ನೀರಿನ ತೊಂದರೆಯ ಬಗ್ಗೆ ಹೇಳತೀರದಾಗಿದೆ. ಅದನ್ನು ನೀಗಿಸುವಂತಹ ಕೆಲಸಕ್ಕೆ ಸರ್ಕಾರ ಮುಂದಾಗಬೇಕೆಂದು ನಾನು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತಿದ್ದೇನೆ. ಇವತ್ತು ಕೃಷಿಯಲ್ಲಿ 10 ಹೆಚ್‌ಪಿ ಪವರ್ ಇರತಕ್ಕಂತಹವರಿಗೆ ನಾವು ಪುಕ್ಕಟೆ ವಿದ್ಯುತ್‌ನ್ನು ಕೊಡುತ್ತೇವೆನ್ನುವಂತಹ ಮಾತನ್ನು ಹೇಳಿದ್ದಾರೆ. ಅದಕ್ಕಾಗಿ 2,050 ಕೋಟಿ ರೂಪಾಯಿಗಳನ್ನು ಸರ್ಕಾರ ಭರಿಸುತ್ತದೆ ಎಂಬ ಅವರ ದೃಢವಾದ ನಿರ್ಧಾರವನ್ನು ಎಲ್ಲೋ ಒಂದು ಕಡೆಯಲ್ಲಿ ಮೆಚ್ಚುವಂತಹದ್ದು ಆಗಿದೆ. ಆದರೆ ವಿದ್ಯುಚ್ಛಕ್ತಿಯ ತೊಂದರೆ ಒಂದು ಕಡೆಯಾದರೆ ಮತ್ತೊಂದು ಕಡೆ ರೈತರಿಗೆ 10 ಹೆಚ್ ಪಿ ಪವರ್‌ನ್ನು ಕೊಡುವಂತಹದ್ದು ಸ್ವಾಗತವಾಗಿದ್ದರೂ, ಶ್ಲಾಘನೀಯವಾಗಿದ್ದರೂ ಕೂಡ ಇದರ ಸಾಧ್ಯಸಾಧ್ಯತೆಗಳು ಏನು? ಇದರಿಂದ ಎಲ್ಲೋ ಒಂದು ಕಡೆಯಲ್ಲಿ ಉಳ್ಳವರೂ ಕೂಡ ಈ ಅವಕಾಶವನ್ನು ಪಡೆಯುವಂತಹದಕ್ಕೆ ಏನಾದರೂ ಕ್ರಮಗಳನ್ನು ತೆಗೆದುಕೊಳ್ಳುವಂತಹ ಚಿಂತನೆ ಇದೆಯೇ? ನನ್ನದು 10 ಹೆಚ್.ಪಿ.ದು 4 ಬೋರ್‌ವೆಲ್‌ಗಳು ಇವೆ. ನಾನು ಇನ್‌ಕಂಟ್ಯಾಕ್ಸ್‌ನ್ನು ಪೇ ಮಾಡುತ್ತಿದ್ದೇನೆ. ನಾನ್ಯಾಕೆ ಕಟ್ಟಬೇಕು, ನಾನ್ಯಾಕೆ ಕಟ್ಟಬಾರದು. ಆದ್ದರಿಂದ ಸಾಮಾನ್ಯ ರೈತರಿಗೆ ಇದನ್ನು ಅಳವಡಿಸಿ ಯಾರ‍್ಯಾರು ಶ್ರೀಮಂತ ವರ್ಗದವರು ಇದ್ದಾರೆ, ಯಾರು ಇದರಲ್ಲಿ ಉತ್ಪತ್ತಿಯನ್ನು ಪಡೆಯುತ್ತಿದ್ದಾರೆ, ಮತ್ತೆ ಎಲ್ಲೋ ಒಂದು ಕಡೆಯಲ್ಲಿ ಕೆಲವರು ಫಾರಂಗಳನ್ನು ಮಾಡಿಕೊಂಡು, ಆ ಫಾರಂಗಳಲ್ಲಿರುವಂತಹವರು ವಿದ್ಯುಚ್ಛಕ್ತಿಯನ್ನು ಪುಕ್ಕಟೆಯಾಗಿ ಪಡೆಯುವಂತಹ ವ್ಯವಸ್ಥೆ ಏನು ಇದೆ, ಇದರ ಅವಶ್ಯಕತೆ ಇಲ್ಲ. ಆದ್ದರಿಂದ ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡುತ್ತೇನೆ, ಶ್ರೀಮಂತ ವರ್ಗಕ್ಕೆ ಈ ಪುಕ್ಕಟೆ ವಿದ್ಯುತನ್ನು ಕೊಡುವುದನ್ನು ತಾವು ನಿಲ್ಲಿಸಬೇಕು. ಶಾಶ್ವತವಾಗಿ ಒಂದು ದಿನಕ್ಕೆ 5 ಗಂಟೆಯಾದರೂ ಕೂಡ ಸರಿಯಾದ ಉತ್ತಮವಾದಂತಹ ವಿದ್ಯುತನ್ನು ನೀಡುವಂತಹ ಚಿಂತನೆಯನ್ನು ಸರ್ಕಾರ ಮಾಡಬೇಕೆಂಬ ಮನವಿಯನ್ನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಸಾಕಷ್ಟು

ವಿಚಾರಗಳನ್ನು ಎಲ್ಲರೂ ಕೂಡ ಮಾತನಾಡಿದ್ದಾರೆ. ಎಲ್ಲವನ್ನು ಮಾತನಾಡುವಂತಹ ವ್ಯವಸ್ಥೆ ನನಗೆ ಇಲ್ಲದೆ ಇದ್ದರೂ ಕೂಡ ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು ಆಗಿರುವಂತಹ ಯಡಿಯೂರಪ್ಪ ಸಾಹೇಬರು ಹಾಲು ಉತ್ಪಾದಕರಿಗೆ 2.00 ರೂಪಾಯಿ ಸಬ್ಸಿಡಿಯನ್ನು ಕೊಟ್ಟಿದ್ದಾರೆ. ಇದು ಸ್ವಾಗತಾರ್ಹವಾದ ವಿಚಾರವಾಗಿದೆ. ಆದರೆ ಬಹುತೇಕ ಸೊಸೈಟಿಗಳಿಗೆ ಮಾತ್ರ ಇದು ಅನ್ವಯವಾಗುತ್ತದೆ. ಬಹುತೇಕ ಖಾಸಗಿ ಸಂಸ್ಥೆಗಳನ್ನು ಹುಟ್ಟುಹಾಕಿಕೊಂಡು ಹಳ್ಳಿಗಾಡಿನಲ್ಲಿ 2-3 ಪಕ್ಷಗಳು ಇರುವುದರ ಬಗ್ಗೆ ತಮಗೂ ಕೂಡ ಗೊತ್ತಿದೆ. ಒಂದು ಸೊಸೈಟಿಯನ್ನು ಮಾಡಿದರೆ ಅದರಲ್ಲಿ ಎಲ್ಲರೂ ಕೂಡ ಮೆಂಬರ್ ಆಗಿರುವುದಿಲ್ಲ. ಆದರೆ ಇದರಲ್ಲಿ ಕೆಲವರಿಗೆ ಲಾಭ ಬರುತ್ತದೆ. ಮತ್ತೆ ಕೆಲವರಿಗೆ ಬರುವುದಿಲ್ಲ. ಆದರೆ ಖಾಸಗಿ ಸಂಸ್ಥೆಗಳನ್ನು ಕೂಡ ದೃಷ್ಟಿಮಾಡಿಕೊಂಡು ಯಾರ್ಯಾರು ನಡೆಸುತ್ತಿದ್ದಾರೆ ಅಂತಹವರಿಗೂ ಕೂಡ 2.00 ರೂಪಾಯಿ ಒಂದು ಲೀಟರ್ ಹಾಲನ್ನು ನೀಡುವಂತಹದ್ದಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕೆನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

**ಶ್ರೀ ಕರಡಿ ಸಂಗಣ್ಣ ಅಮರಪ್ಪ:** ಮಾನ್ಯ ಅಧ್ಯಕ್ಷರೆ, ಈಗ ಹಾಲಿನ ದರ 2.00 ರೂಪಾಯಿ ಕೊಡುವಂತಹದ್ದು ರೈತರಿಗೆ ಎನ್ನುವಂತಹ ವಿಷಯ ಸ್ವಾಗತಾರ್ಹವಾದಂತಹ ಕೆಲಸ ಮಾಡಿದ್ದಾರೆ. ಅದಕ್ಕೆ ನಾವೆಲ್ಲರೂ ಶ್ಲಾಘನೀಯ ಎಂಬ ಮಾತನ್ನು ಹೇಳುತ್ತೇವೆ. ಅದಕ್ಕೆ ನಾವು ಅಭಿನಂದಿಸುತ್ತೇವೆ. ಆದರೆ ಅಲ್ಲಿ ಸ್ಟೋರ್ ಆಗುವಂತಹ ಏನು ಹಾಲು ಇದೆಯಲ್ಲಾ ಅದನ್ನು ಕೆಎಂಎಫ್ ನವರು ಅದನ್ನು ಚಿಲ್ಲಿ ಸೆಂಟರ್ ಮೂಲಕ ಅದಕ್ಕೇನಾದರೂ ನೆರವನ್ನು ಒದಗಿಸುವಂತಹ ಕೆಲಸಗಳು ಸರ್ಕಾರದಿಂದ ಆಗಬೇಕಾಗಿದೆ. ಬರೀ ಒಂದು ಕಡೆ ಅದನ್ನು ನಾವು ರೈತರಿಗೆ ಪ್ರೋತ್ಸಾಹಧನವನ್ನು ಕೊಡುವಂತಹದ್ದನ್ನು ಸ್ವಾಗತ ಮಾಡುತ್ತೇವೆ. ಆದರೆ ಏನು ಸ್ಟೋರ್ ಆಗುವಂತಹ ಹಾಲಿನ ಈಗ ಚಿಲ್ಲಿ ಸೆಂಟರ್ ಮಾಡುವಂತಹದ್ದಕ್ಕೆ ಸರ್ಕಾರ ನೆರವನ್ನು ಕೊಟ್ಟರೆ ಕೆಎಂಎಫ್ ಕೂಡ ಬದುಕುತ್ತದೆ. ಇಲ್ಲದೆ ಹೋದರೆ ಅದು ತೊಂದರೆಯನ್ನು ಅನುಭವಿಸುತ್ತದೆ.

**ಶ್ರೀ ಬಿ.ಎನ್. ಬಚ್ಚೇಗೌಡ:** (ಕಾರ್ಮಿಕ ಕಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೆ, ಈಗ ಕೆಎಂಎಫ್ ಮೂಲಕ ರಾಜ್ಯದಲ್ಲಿ 34 ಲಕ್ಷ ಲೀಟರ್ ನಷ್ಟು ಹಾಲು ಶೇಖರಣೆಯಾಗುತ್ತದೆ. ಇವರಿಗೆ ವಿರುದ್ಧವಾಗಿ ನಮ್ಮ ಕೆಎಂಎಫ್, ನಮ್ಮ 13 ಯೂನಿಯನ್ಸ್ ಇದೆ, ಅಲ್ಲಿ procurement ಅಷ್ಟು ಇದೆ, ಎಷ್ಟು ಹಾಲು ಬಂದರೂ ಕೂಡ ವಿತರಣೆಯಾಗುತ್ತದೆ

ಹಾಗೂ ಸಂಸ್ಕರಣೆಯಾಗುತ್ತದೆ. ಅದಕ್ಕೆ ನಾವು ಅವಕಾಶಗಳನ್ನು ಮಾಡಿಕೊಟ್ಟಿದ್ದೇವೆ. ತಾವು ಖಾಸಗಿಯವರಿಗೆ ಸಂಬಂಧಿಸಿದಂತೆ ಏನು ಹೇಳುತ್ತಿದ್ದೀರಿ, ಅದಕ್ಕೆ ಆ ಸಂಘದಲ್ಲಿ ಲೆಕ್ಕಾಚಾರ ಇದೆ. ಹೆರಿಟೇಜ್ ಬರುತ್ತದೆ. ದೊಡ್ಲ ಬರುತ್ತದೆ, ಗುಡ್ ಮಾರ್ನಿಂಗ್ ಬರುತ್ತದೆ, ಹೀಗೆ ಹತ್ತಾರು ಹಾಲಿನ ಸಂಸ್ಥೆಗಳಿವೆ. ಅವರಿಗೋಸ್ಕರ 2 ರೂ. ಕೊಡುವುದಕ್ಕೆ, ನಮ್ಮ ಸರ್ಕಾರದಲ್ಲಿ ಆ ಲೆಕ್ಕಾಚಾರವನ್ನು ಇಡುವುದಕ್ಕಾಗುವುದಿಲ್ಲ. ಅವರು competitive ಆಗಿ ನಮ್ಮ ವಿರುದ್ಧವಾಗಿ ಗ್ರಾಮಗಳಲ್ಲಿ ಶೇಖರಣೆ ಮಾಡುತ್ತಾರೆ. ಆ ರೀತಿಯ ಶೇಖರಣೆಯನ್ನು ನಾವು ಖಂಡಿಸಬೇಕು. ಇವತ್ತು ಅವರು 2 ರೂ. ಕೊಡಿ ಎಂದು ಏಕೆ ಕೇಳುತ್ತಾರೆಂದರೆ, ರೈತರು ನಮಗೆ ಹೆಚ್ಚು ಹಾಲು ಕೊಡುತ್ತಾರೆ, ಆದರೆ, ಅವರಿಗೆ ಅಲ್ಲಿ ಕೊಡುವುದಿಲ್ಲವೆಂಬ ಉದ್ದೇಶದಿಂದ ಹೇಳುತ್ತಾರೆ. ಅದಕ್ಕೋಸ್ಕರ, ತಾವು ಈ ರೀತಿಯಾಗಿ ಇದಕ್ಕೆ ಪ್ರೋತ್ಸಾಹ ಕೊಡಬಾರದು.

**ಶ್ರೀ ವಿ. ಸೋಮಣ್ಣ:** ನನ್ನ ಭಾವನೆ ಏನೆಂದರೆ, ಅದು ಇದ್ದಾಗ ಇಂತಹುದೆಲ್ಲವನ್ನೂ ಬ್ಯಾನ್ ಮಾಡಿ, ಏನಾಗುತ್ತದೆಂದರೆ, ಸಾಮಾನ್ಯ ಜನರು ಪರ್ಚೇಸ್ ಮಾಡುವವರು ತಮಗೆ ಗೊತ್ತಿದೆ. ಇದನ್ನು ಕೆಎಂಎಫ್ ನಲ್ಲಿರುವ ಸಂಘ–ಸಂಸ್ಥೆಗಳು ಮಾಡಿರುವುದು, ಇದರ ಬಗ್ಗೆ ಸಂತೋಷಪಡಬೇಕು. ಆದರೆ, ಖಾಸಗಿ ಸಂಸ್ಥೆಗಳು ಕೂಡ ಹಾಲನ್ನು ರೈತರಿಗೆ, ಬಡವರಿಗೆ, ಸಾಮಾನ್ಯರಿಗೆ ಕೊಡುವುದು. ಅದು ಸಂಪೂರ್ಣ ನಿಜ. ಹೆರಿಟೇಜ್ ನವರು ಇದ್ದಾರೆ, ಅದೇ ರೀತಿ ಬೇರೆ ಬೇರೆಯವರೂ ಇದ್ದಾರೆ. ಇವರಲ್ಲಿಯೂ ಕೂಡ "ಇದು ನಮಗೂ ಅನ್ವಯವಾದರೆ, ನಮ್ಮಲ್ಲೂ ವ್ಯಾಪಾರ ಜಾಸ್ತಿಯಾಗುತ್ತದೆ. ಆಗ ಕೆಎಂಎಫ್‌ಗೆ ಹೋಗುವ ಅವಶ್ಯಕತೆ ಇಲ್ಲ" ಎನ್ನುವ ಭಾವನೆ ಇದೆ. ಇದು ನಿಜ. ಆದರೆ, ಅವರೂ ಕೂಡ ಮಾಡುತ್ತಿದ್ದಾರೆ. ಮಾಡುವಾಗ ಅದನ್ನು ಸಂಪೂರ್ಣವಾಗಿ ನಿಷೇಧ ಮಾಡುವುದೊಳ್ಳೆಯದು. ಇಲ್ಲವೆಂದರೆ, ಏನು ಮಾಡುತ್ತಾರೆಂದರೆ, ರೈತರ ಹಾಲನ್ನು ಪರ್ಚೇಸ್ ಮಾಡುವುದಕ್ಕೆ ಬೇರೆಯವರು ಇಲ್ಲವೆಂದು ಇದರ ಹೊಡೆತ ಗ್ರಾಹಕರ ಮೇಲೆ ಬೀಳುತ್ತದೆ. ಆದುದರಿಂದ, ಇದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ.

ಇದರ ಜೊತೆಗೆ, ಇವತ್ತು ಸುಮಾರು 36,000 ಕೆರೆಗಳನ್ನು ಜೀರ್ಣೋದ್ಧಾರ ಮಾಡುವ ಸಂಕಲ್ಪವೊಂದನ್ನು ಸರ್ಕಾರ ಮಾಡಿದೆ. ಈ ಸಂಕಲ್ಪ ಏನೇ ಇದ್ದರೂ ಸನ್ಮಾನ್ಯ ಶ್ರೀ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳು ಆಗಿದ್ದಾಗ ಕೆರೆಗಳಲ್ಲಿ ಹೂಳು ತೆಗೆಯುವ ಕಾರ್ಯಕ್ರಮ ಹಮ್ಮಿಕೊಂಡು ಕೆಲವು ಕಡೆ ಅದರಲ್ಲಿ ಸಫಲರಾಗಿದ್ದರೆ, ಮತ್ತೆ ಕೆಲವು ಕಡೆ

ವಿಫಲರಾಗಿದ್ದರು. ಆದರೆ, ಇದರ ಹಣಕಾಸು ವ್ಯವಸ್ಥೆಯ ಜವಾಬ್ದಾರಿಯನ್ನು ಮಾತ್ರ ಯಾರೂ ಹೊತ್ತುಕೊಳ್ಳುವವರಿಲ್ಲ. ಇದೊಂದು ವಿನೂತನವಾದ ಒಳ್ಳೆಯ ಕಾರ್ಯಕ್ರಮವಾಗಿದೆ. ಈ ಕೆರೆಗಳನ್ನು ನಾವು ಅಭಿವೃದ್ಧಿಪಡಿಸುತ್ತೇವೆ. ಎನ್ನುವ ಮಟ್ಟದಿಂದ ಸರ್ಕಾರದ ಬೊಕ್ಕಸದ ಹಣ ಕೆಲವೇ ಕೆಲವು ವ್ಯಕ್ತಿಗಳ ಜೇಬಿಗೆ ಹೋಗುವ ನಿದರ್ಶನಗಳು ಕೂಡ ಸಾಕಷ್ಟು ಇರುವುದರಿಂದ ಇದನ್ನು ಸೂಕ್ಷ್ಮವಾಗಿ ಯಾರು ತೆಗೆದುಕೊಳ್ಳುತ್ತಾರೋ, ಅಂತಹ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿ ಮಾಡುವುದು ಮತ್ತು ಇದರ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮ ಇದಾಗಿದೆ. 36,000 ಕೆರೆಗಳಲ್ಲಿ ಕೆಲವು ಕೆರೆಗಳಾದರೂ ಕೂಡ ನಾವು ಕೊಡುವ ಹಣವನ್ನು ವ್ಯಯ ಮಾಡಿದಲ್ಲಿ ಸದುಪಯೋಗವಾಗುತ್ತದೆ. ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನಹರಿಸಬೇಕೆಂದು ತಮ್ಮ ಮೂಲಕ ನಾನು ವಿನಂತಿಸಿಕೊಳ್ಳುತ್ತೇನೆ.

ಇವತ್ತು 90,000 ಗ್ರಾಮ ಪಂಚಾಯಿತಿ ಸದಸ್ಯರಿಗೆ ಮಾಸಿಕ ಗೌರವ ಧನ ನೀಡುತ್ತಿರುವುದು ಒಳ್ಳೆಯ ಬೆಳವಣಿಗೆ. ಈ ಬೆಳವಣಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕನಿಷ್ಠ ಪಕ್ಷ ಕೊನೇ ಹಂತದಿಂದ ಏನಾದರೂ ಮಾಡಿ ಕೆಲವು ಸಾಮಾನ್ಯ ಕೆಲಸ-ಕಾರ್ಯಗಳಿಗೆ ಚಾಲನೆ ಕೊಟ್ಟಾಗ ಸರ್ಕಾರದಿಂದ ನಿಮಗೂ ಕೂಡ ಗೌರವ ಸಂಭಾವನೆ ಬರುತ್ತಿದೆ ಎನ್ನುವ ಒಂದು ಜಾಗೃತಿ ಕಾರ್ಯಕ್ರಮವನ್ನು ಸರ್ಕಾರ ಮಾಡುವುದರ ಮುಖಾಂತರ ಇದಕ್ಕೆ ಏನಾದರೊಂದು ಕಾಯಕಲ್ಪ ಕೊಡುವುದು ಸಮಂಜಸವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

1993-94ರಲ್ಲಿ ಆರಂಭವಾದ ಖಾಸಗಿ ಪ್ರೌಢಶಾಲೆಗಳನ್ನು ಅನುದಾನಕ್ಕೊಳಪಡಿಸುವ ಮೂಲಕ ಒಂದು ಉತ್ತಮ ಕೆಲಸ ಮಾಡಿದ್ದೀರಿ. ಇದನ್ನು ಮಾಡುವಾಗ ಏನು ಮಾಡಿದ್ದೀರೆಂದರೆ, 1993-94 ಎಂದು cut of date ಮಾಡಿದ್ದೀರಿ. cut of date ಏನಾಗಿದೆ ಎಂದರೆ, ಇವತ್ತು ಇಡೀ ರಾಜ್ಯದಲ್ಲಿರುವ 14-15 ಶಾಲೆಗಳಿಗೆ ಮಾತ್ರ ಇದು ಅನ್ವಯಿಸುವುದಿಲ್ಲ. ದಯಮಾಡಿ cut of date ಅನ್ನು 31.5.94ಕ್ಕೆ ಒಂದು ತಿಂಗಳ ಕಾಲ ಅದನ್ನು ವಿಸ್ತರಿಸಿದ್ದಲ್ಲಿ ಉಳಿದಿರುವ ಅನುದಾನ ಪಡೆಯುತ್ತಿರುವ ಇಡೀ ರಾಜ್ಯದಲ್ಲಿರುವ 35-36 ಶಿಕ್ಷಣ ಸಂಸ್ಥೆಗಳಿಗೆ ಇದರಿಂದ ಅನುಕೂಲವಾಗುತ್ತದೆ. ದಯಮಾಡಿ ಇಡೀ ತುಮಕೂರು ಜಿಲ್ಲೆಯಲ್ಲಿ ಒಂದೇ ಶಾಲೆಗೆ ಈ ರೀತಿಯಾದ ತೊಂದರೆ ಇದೆ, ಬೆಂಗಳೂರು ನಗರದಲ್ಲಿ 13 ಶಾಲೆಗಳಿಗೆ ಈ ತೊಂದರೆ ಇದೆ. ಇಡೀ ರಾಜ್ಯದಲ್ಲಿ 34-35 ಶಾಲೆಗಳಿಗೆ

ತೊಂದರೆ ಇದೆ. ಆದುದರಿಂದ, 30 ದಿನವೆಂದು ಸರ್ಕಾರದ ಏನು ದಿನಾಂಕ ಇದೆ, ಅದನ್ನು 30 ದಿನಗಳಿಗೆ ವಿಸ್ತರಿಸಬೇಕೆಂದು ನಾನು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

(ಈ ಹಂತದಲ್ಲಿ ಹಿರಿಯ ಸದಸ್ಯರಾದ ಶೀ ಚಂದ್ರಕಾಂತ ಬೆಲ್ಲದ್ ರವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಇನ್ನು ಸರ್ವ ಶಿಕ್ಷಾ ಅಭಿಯಾನ. ಇದೊಂದು ವಿನೂತನ ಕಾರ್ಯಕ್ರಮವಾಗಿದೆ. ರಾಜ್ಯದಲ್ಲಿ 958 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಸರ್ವ ಶಿಕ್ಷಾ ಅಭಿಯಾನದಲ್ಲಿ ಸನ್ಮಾನ್ಯ ಶ್ರೀನಿವಾಸ ಪ್ರಸಾದ್ ರವರು ನಿನ್ನೆ ಮಾತನಾಡುತ್ತಾ, ಇದರಲ್ಲಿ ಯಾವ್ಯಾವ ರೀತಿ ಗೋಲ್ ಮಾಲ್ ಅಗುತ್ತದೆಂದು ಹೇಳಿದರು. ಇದು ಕೇವಲ ಯಡಿಯೂರಪ್ಪ ಸಾಹೇಬರು ಬಂದ ತಕ್ಷಣ ಶುರುವಾದದ್ದಲ್ಲ. ಹಿಂದಿನಿಂದಲೂ ಸರ್ವ ಶಿಕ್ಷಾ ಅಭಿಯಾನ ಯಾವಾಗ ಬಂತೋ, ಅಲ್ಲಿಂದ ಇಲ್ಲಿಯವರೆಗೂ ಕೆಲವು ಮೆಟೀರಿಯಲ್ಸ್ ಕೊಂಡುಕೊಳ್ಳತಕ್ಕವರು, ಪ್ರಿಂಟ್ ಮಾಡಿಸುವುದರಲ್ಲಿ ಎಲ್ಲಿಯೋ ಒಂದು ಕಡೆ ನೂರಾರು ಕೋಟಿ ರೂಪಾಯಿಗಳು ಇವತ್ತು ಏನು ಬರುತ್ತಿದೆ, ಇದು ಯಾರ ಕಣ್ಣಿಗೂ ಬೀಳುತ್ತಿಲ್ಲ. ಈ ಸರ್ವ ಶಿಕ್ಷಾ ಅಭಿಯಾನಕ್ಕೆ ಒಂದು ಇಲಾಖೆ ಇದೆ. ಒಬ್ಬ ಡಿಡಿಪಿಐ, ಮತ್ತೊಬ್ಬರು ಡೈರೆಕ್ಟರ್ ಇರುತ್ತಾರೆ. ಹೊರಗಡೆ ಇರುವ ಅಧಿಕಾರಿಗಳು ಮಾತ್ರ ಶಿಕ್ಷಣ ಇಲಾಖೆಯಲ್ಲಿ ಎಲ್ಲರ ಗಮನಕ್ಕೂ ಬಂದಿರುತ್ತಾರೆ ವಿನಾ ಇತರರು ಯಾರ ಗಮನಕ್ಕೂ ಬಂದಿರುವುದಿಲ್ಲ. ಆದುದರಿಂದ ದಯಮಾಡಿ ಸರ್ವ ಶಿಕ್ಷಾ ಅಭಿಯಾನದಲ್ಲಿ ಬರುವ ಹಣ ಏನಿದೆ, ಇದು ಸರಿಯಾಗಿ, ಸಮರ್ಪಕವಾಗಿ ವಿನಿಯೋಗವಾಗುತ್ತಿದೆಯೇ ಇಲ್ಲವೇ ಎಂಬುದನ್ನು ಸರ್ಕಾರ ಚಿಂತನೆ ಮಾಡಿ ಅದನ್ನು ಮಾನಿಟರ್ ಮಾಡುವ ಕೆಲಸ ಮಾಡುವುದು ಉತ್ತಮವಾದ ಬೆಳವಣಿಗೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇವತ್ತು ಸರ್ವ ಶಿಕ್ಷಾ ಅಭಿಯಾನದಲ್ಲಿ ಶಾಲಾ ಕಟ್ಟಡಗಳಿಗೆ ಹಣ ಕೊಡುತ್ತಾರೆ. ಆದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇದೆ. ಅಲ್ಲಿ ಚುನಾಯಿತ ಶಾಸಕರು ಇದ್ದಾರೆ, ಲೋಕಸಭಾ ಸದಸ್ಯರೂ ಇದ್ದಾರೆ. ಇದನ್ನು ಜಿಲ್ಲಾ ಪಂಚಾಯತ್ ವ್ಯಾಪ್ತಿಗೊಳಪಡಿಸಿ ನಮ್ಮ ಸರ್ಕಾರಿ ಶಾಲೆಗಳೇನಿವೆ, ನಗರ ಪ್ರದೇಶಗಳಲ್ಲಿರುವ ಸರ್ಕಾರಿ ಶಾಲೆಗಳಿಗೆ ನಮಗ್ಯಾರಿಗೂ ಕೂಡ ನಮಗೆ ಅಷ್ಟು ರೂಮು ಕೊಡಿ, ಇಷ್ಟು ರೂಮು ಕೊಡಿ ಎಂದು ಕೇಳುವ ಅಧಿಕಾರವಿಲ್ಲ. ಇದರ ಬಗ್ಗೆ ಸರ್ಕಾರಕ್ಕೆ ಈಗಾಗಲೇ ಅನೇಕ ಬಾರಿ ಪತ್ರ ಬರೆದಿದ್ದೇನೆ. ಸದನದಲ್ಲೂ ಚರ್ಚೆ ಮಾಡಿದ್ದೇವೆ. ನಾನು ತಮ್ಮ ಮೂಲಕ ಸರ್ಕಾರವನ್ನು

ಒತ್ತಾಯ ಮಾಡುತ್ತೇನೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಶಾಲಾ ಕಟ್ಟಡವನ್ನು ನಿರ್ವಹಿಸುವುದು, ಹೊಸ ಕಟ್ಟಡಗಳನ್ನು ನಿರ್ಮಿಸುವುದು, ಮತ್ತು ಅವರಿಗೆ ಸಂಬಳ ಕೊಡುವ ಕೆಲಸವೇನಿದೆ, ಇದನ್ನು ಜಿಲ್ಲಾ ಪಂಚಾಯತ್‌ನವರು ಮಾಡುತ್ತಾರೆ. ಬೆಂಗಳೂರು ಜಿಲ್ಲಾ ಪಂಚಾಯತ್ ಸಿಇಓಗೆ ಇವತ್ತು ಏನಾಗಿದೆ, ಜಿಲ್ಲಾ ಪಂಚಾಯತಿಗಳ ಸದಸ್ಯರು ಇಲ್ಲಿರುವುದಿಲ್ಲ. ಮಹಾನಗರ ಪಾಲಿಕೆ ಸದಸ್ಯರು ಅಲ್ಲಿ ಸದಸ್ಯರಲ್ಲ. ಶಾಸಕರಾದ ನಾವು ಕೂಡ ಅಲ್ಲಿ ಸದಸ್ಯರಲ್ಲ. ಆದರೆ, ಇದನ್ನು ನಿರ್ವಹಣೆ ಮಾಡುವ ಜಿಲ್ಲಾ ಪಂಚಾಯಿತಿ ವ್ಯಾಪ್ತಿಗೆ ಬರುವ ನಗರ, ಜಿಲ್ಲೆಗಳೇನಿವೆ, ದಯಮಾಡಿ ಇದರಿಂದ ತೆಗೆದು ಹಾಕಿ ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಶಾಲೆಗಳೇನಿವೆ, ಅದರ ನಿರ್ವಹಣೆ ಏನಿದೆ, ಕಟ್ಟಡಗಳನ್ನು ಕಟ್ಟತಕ್ಕಂಥಾದ್ದು ಏನಿದೆ, ಈ ಹಣದ ಜೊತೆಗೆ ದಯಮಾಡಿ ಸಂಬಳವನ್ನೂ ಸೇರಿಸಿ ಇದನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೊಳಪಡಿಸುವ ಕೆಲಸವನ್ನು ಸರ್ಕಾರ ಮಾಡಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಇವತ್ತು ಹಾಸ್ಟೆಲ್‌ಗಳಲ್ಲಿ 450 ರಿಂದ 650 ರೂಪಾಯಿಗಳಿಗೆ ನಿಗದಿಪಡಿಸಿದ್ದೀರಿ. ಇದು ಒಳ್ಳೆಯದು. ಆದರೆ, ಬಡವರ ಮಕ್ಕಳು ಯಾರು ಬರುತ್ತಾರೆ, ನನ್ನ ಕ್ಷೇತ್ರದಲ್ಲಿ 4 ಹಾಸ್ಟೆಲ್‌ಗಳಿವೆ. ಬಿ.ಜಿ. ಹಾಸ್ಟೆಲ್ ಇದೆ, ಹೈಸ್ಕೂಲಿನ ಹಾಸ್ಟೆಲ್ ಇದೆ, ಇನ್ನು ಬೇರೆ ಬೇರೆ ಹಾಸ್ಟೆಲ್‌ಗಳಿದ್ದು, ಒಟ್ಟು ನಾಲ್ಕು ಹಾಸ್ಟೆಲ್‌ಗಳು ನನ್ನ ಮತ ಕ್ಷೇತ್ರದಲ್ಲಿದೆ. ಈ ಹಾಸ್ಟೆಲ್ ಗಳು, ಅಲ್ಲಿನ ಕಾರ್ಯಭಾರ, ಇತ್ಯಾದಿ ಬದಲಾವಣೆಗಳನ್ನು ನಾವು ಕಂಡಿದೆವು. ಇದು ಇನ್ನೂ ಕೂಡ ಸರಿಯಾಗಿ ಆಗಿಲ್ಲ. ಸರ್ಕಾರ ಒಬ್ಬ ಯುವಕನಿಗೆ, ಒಬ್ಬ ವಿದ್ಯಾರ್ಥಿಗೆ 650 ರೂ. ಹಣ ಕೊಡುತ್ತದೆಂದರೆ, ವಸತಿ ಸೌಲಭ್ಯ ಕೂಡ ಕಲ್ಪಿಸುತ್ತದೆಂದರೆ, ಇದು ನಿಜವಾಗಿಯೂ ಮೆಚ್ಚತಕ್ಕಂಥಾದ್ದು. ಇದು ಮಕ್ಕಳ ಊಟಕ್ಕೋಸ್ಕರ ಕೊಡುವ ಹಣವಾದ್ದರಿಂದ, ಆ ಹಣ ಮಕ್ಕಳ ಊಟಕ್ಕೋಸ್ಕರ ಸದುಪಯೋಗವಾಗುತ್ತಿದೆಯೇ? ಇಲ್ಲವೇ ಸೂಪರ್ ವೈಸರ್‌ಗೆ ಹೋಗುತ್ತಿದೆಯೇ? ಪರ್ಚೇಸ್ ಮಾಡುವವರಿಗೆ ಹೋಗುತ್ತಿದೆಯೇ? ಮೊದಲಿನಿಂದಲೂ ಇದು ಅವಿರತವಾಗಿ ನಡೆದುಕೊಂಡು ಬಂದಿದೆ. ಇದಕ್ಕೆ ಕಡಿವಾಣ ಹಾಕುವ ಒಂದು ಪ್ರಯತ್ನ ಆಗಬೇಕಾಗುತ್ತದೆ. ಹಣವನ್ನು ಕೇವಲ ಮಕ್ಕಳ ಹೆಸರಿನಲ್ಲಿ ಕೊಡುವುದು ದೊಡ್ಡದಲ್ಲ. ಆ ಹಣ ಮಕ್ಕಳಿಗೆ ಸರಿಯಾಗಿ ವಿನಿಯೋಗವಾಗುತ್ತಿದೆಯೇ? ಇಲ್ಲವೇ? ಎಂಬುದನ್ನು ಚಿಂತನೆ ಮಾಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

ಇವತ್ತು Old Age Pension ಇದೆ. ಇದನ್ನು 100 ರೂನಿಂದ 200, ನಂತರ 400 ರೂ. ಆಗಿ ಇದಕ್ಕೊಂದು Smart Card ಮಾಡಬೇಕೆಂಬ ವಿನೂತನ ಕಾರ್ಯಕ್ರಮವನ್ನು ಸರ್ಕಾರ ಕೊಟ್ಟಿದೆ. ಇದು ನಿಜವಾಗಿಯೂ ಮೆಚ್ಚತಕ್ಕಂಥಾದ್ದು, ಆದರೆ, ಏನಾಗಿದೆ ಎಂದರೆ, ಸನ್ಮಾನ್ಯ ಸಭಾಧ್ಯಕ್ಷರೆ, Old Age Pension ಅನ್ನು ನೀಡುವವರು ಪೋಸ್ಟಮನ್. ಇದರ ಬಗ್ಗೆ ತಮ್ಮ ಗಮನಕ್ಕೆ ತರುತ್ತೇನೆ. ನಮಗೂ ಕೂಡ ಅನುಭವ ಇದೆ. ಆತ 4,5,6,8 ತಿಂಗಳ Old Age Pension ಕೊಡುವುದಿಲ್ಲ. ಪೋಸ್ಟ್‌ಮನ್ ಏನು ಮಾಡುತ್ತಾನೆಂದರೆ, ಕಾರಜೋಳ್‌ರವರೆ, ಎಲ್ಲರನ್ನೂ ಒಂದು ಕಡೆ ಕೂಡಿ ಹಾಕಿಟ್ಟುಕೊಳ್ಳುತ್ತಾನೆ. ಆತ ಒಂದು ತರಹ ಮಹಾರಾಜ ಇದ್ದಂತೆ. ಏನು ಮಾಡುತ್ತಾನೆಂದರೆ, ಎಲ್ಲರ ಕೈಗಳಿಂದಲೂ ಹೆಬ್ಬೆಟ್ಟು ಒತ್ತಿಸಿಕೊಳ್ಳುತ್ತಾನೆ. ಆತ ಇಬ್ಬರನ್ನು ಅಸಿಸ್ಟೆಂಟ್ ಎಂದು ಇಟ್ಟುಕೊಳ್ಳುತ್ತಾನೆ. Old Age Pension 5 ತಿಂಗಳು, 6 ತಿಂಗಳಿನದು ಇದ್ದರೆ, ಅತ 2 ತಿಂಗಳು, 3 ತಿಂಗಳಿನದು ಮಾತ್ರ ಕೊಡುತ್ತಾನೆ. ಬಾಕಿ ಹಣವನ್ನು ತನ್ನ ಕಿಸೆಗೆ ಒಟ್ಟುಕೊಂಡು ಹೋಗುತ್ತಿರುತ್ತಾನೆ. ಒಂದು ಸಲ ನಾನೇ ಸ್ವತ: ಅಂತಹವನನ್ನು ಹಿಡಿದು ಪೊಲೀಸ್ ಸ್ಟೇಷನ್‌ಗೆ ಕೊಟ್ಟರೆ, ಪೊಲೀಸಿನವರು, "ಇದು ನಿಮಗ್ಯಾಕೆ ಹೋಗಿ ಸರ್, ಕೇಸ್ ರಿಜಿಸ್ಟರ್ ಮಾಡುತ್ತೇವೆ" ಎಂದರು. ನಾನು ಮತ್ತೆ ಮೂರು ದಿನವಾದ ಬಳಿಕ ಕೇಳಿದರೆ, "ಇಲ್ಲ ಸರ್, ದಮ್ಮಯ್ಯ ಎಂದ., ಇನ್ನು ಮೇಲೆ ಎಲ್ಲರಿಗೂ ಕೊಡುತ್ತೇನೆಂದ, ನಾವು ಕಳುಹಿಸಿಬಿಡಿ ಎಂದು ಹೇಳಿದೆವು" ಎಂದರು. ಇದು Tax Payer ದುಡ್ಡು. ಬಡವರಿಗೆ, ಯಾರು ಕೊನೆಯ ಹಂತದಲ್ಲಿರುತ್ತಾರೋ, ಅವರಿಗೆ ಕೊಡುವುದರಲ್ಲೂ ಕೂಡ ಎಲ್ಲಿಯೋ ಒಂದು ಕಡೆ ಈ ರೀತಿಯಾದ ಅವ್ಯವಸ್ಥೆಯಾಗುತ್ತದೆ. ಇದರ ಬಗ್ಗೆ ತಕ್ಷಣವೇ ಪೋಸ್ಟ್ ಮಾಸ್ಟರ್ ಜನರಲ್ ರವರಿಗೆ ಪತ್ರ ಬರೆದಾಗ, ಅವರು ಸಂಬಂಧಪಟ್ಟ ಸೂಪರಿಂಟೆಂಡೆಂಟ್ ಅವರನ್ನು ಕಳುಹಿಸಿಕೊಟ್ಟರು. ಟವರಿಗೆ ಆಗಿದ್ದನ್ನೆಲ್ಲಾ ಹೇಳಿ, ಪ್ರೂವ್ ಮಾಡಿದೆ. ಅತ ಏನು ಮಾಡಿದ ಎಂದರೆ, ನನ್ನ ಕ್ಷೇತ್ರ ಬಿಟ್ಟು ಇನ್ನೆಲ್ಲಿ ಜಾಸ್ತಿ ಬರುತ್ತದೋ, ಅಲ್ಲಿಗೆ ಅವನನ್ನು ಪೋಸ್ಟ್ ಮಾಸ್ಟರ್ ಸ್ಥಳಾಂತರಿಸಿದರು! ಆದುದರಿಂದ ಸ್ಮಾರ್ಟ್‌ಕಾರ್ಡ್ ಎಂದು ಏನು ಮಾಡಿದ್ದೀರಿ ದಯಮಾಡಿ ಬಡವರು ಯಾರಿದ್ದಾರೆ ಅವರಿಗೆ ಸರ್ಕಾರವೇನು ಬಳುವಳಿಯಾಗಿ ಕೊಡತಕ್ಕ ಹಣವೇನಿದೆ ಅದು ದಯಮಾಡಿ ಯಾವುದೇ ರೀತಿಯಲ್ಲಿ ಇಂಥ ಸಣ್ಣಪುಟ್ಟ ಚಿಲ್ಲರೆ ಕೆಲಸಗಳು ಆಗದಂತೆ ನೋಡಿಕೊಳ್ಳತಕ್ಕದ್ದಕ್ಕೆ ನಿಗಾವಹಿಸಲು ತಹಶೀಲ್ದಾರರು, ರೆವಿನ್ಯೂ ಇನ್ಸ್‌ಪೆಕ್ಟರ್, ಮಹಾನಗರ ವ್ಯಾಪ್ತಿಯಲ್ಲಿ ಬರತಕ್ಕ ಅಧಿಕಾರಿಗಳಲ್ಲಿ ಸಮನ್ವಯ ಕಾಪಾಡತಕ್ಕ ಕೆಲಸವನ್ನು ಸ್ಥಳೀಯ ಅಧಿಕಾರಿಗಳು ಮಾಡಬೇಕಾದ್ದನ್ನು ಮಾಡತಕ್ಕದ್ದು ಉತ್ತಮವಾದದ್ದು. ಇದನ್ನು

ಮಾಡಬೇಕೆಂದು ತಮ್ಮ ಮೂಲಕ ನಾನು ವಿನಂತಿ ಮಾಡುತ್ತೇನೆ. ಇದೇ ರೀತಿ ಇವತ್ತು ಸರ್ಕಾರ ಮತ್ತೊಂದು ವಿನೂತನ ಕಾರ್ಯಕ್ರಮವನ್ನು ಕೊಟ್ಟಿದೆ. ಅಂಗವೈಫಲ್ಯವಿರುವ ಮಕ್ಕಳಿಗೆ ಮಾಸಿಕ ಒಂದು ಸಾವಿರ ರೂಪಾಯಿ ಕೊಡತಕ್ಕ ಕಾರ್ಯಕ್ರಮ. ಇದು ಮೆಚ್ಚತಕ್ಕದ್ದು. ಇದರ ಜೊತೆಗೆ ಬುದ್ಧಿಮಾಂದ್ಯ ಮಕ್ಕಳೂ ಸಾಕಷ್ಟು ಇದ್ದಾರೆ. ನಮ್ಮಲ್ಲಿ ಎರಡು ಬುದ್ಧಿಮಾಂದ್ಯ ಮಕ್ಕಳ ಶಾಲೆಗಳನ್ನು ಸಂಘ ಸಂಸ್ಥೆಗಳ ಪರವಾಗಿ ನನ್ನ ಕ್ಷೇತ್ರದಲ್ಲಿ ನಡೆಸುತ್ತಿದ್ದೇವೆ. ಒಬ್ಬಳು ತಾಯಿಗೆ 3-4 ಮಕ್ಕಳಿದ್ದರೆ ಅದರಲ್ಲಿ ಒಂದು ಮಗು ಇಲ್ಲವೆ ಎರಡು ಮಗು ಬುದ್ಧಿಮಾಂದ್ಯವಾಗಿರುತ್ತದೆ. ಅವರು ಕುಟುಂಬ ನಿರ್ವಾಹಣೆ ಮಾಡುವುದೇ ದೊಡ್ಡ ಕೆಲವಾಗಿರುತ್ತದೆ. ಆದ್ದರಿಂದ ಅಂಗವೈಫಲ್ಯ ಮಕ್ಕಳ ಜೊತೆಗೆ ಬುದ್ಧಿಮಾಂದ್ಯ ಮಕ್ಕಳನ್ನು ಸೇರಿಸತಕ್ಕ ಕೆಲಸವನ್ನು ದಯಮಾಡಿ ಸರ್ಕಾರ ಮಾಡಿದರೆ ನಿಮಗೆ ಒಳ್ಳೆಯದಾಗುತ್ತದೆ. ಸರ್ಕಾರ ಆ ಕೆಲಸವನ್ನು ಮಾಡುತ್ತದೆಂದು ನಾನು ಭಾವಿಸುತ್ತೇನೆ.

ಆಶ್ರಯ ಯೋಜನೆ ವಿನೂತನ ಯೋಜನೆ. ಇದು ಎಲ್ಲೋ ಒಂದು ಕಡೆ ಇತ್ತೀಚಿನ ದಿನಗಳಲ್ಲಿ ಕುಂಟಿತವಾಗಿದೆ. ನನಗನ್ನಿಸುತ್ತದೆ ಯಾರ್‍ಯಾರು ಎಷ್ಟೆಷ್ಟು ಮನೆಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದರೊ, ಮನೆಗಳನ್ನು ಕೊಡುತ್ತೇವೆಂದು ಹೇಳಿದ್ದರೊ ಅವೆಲ್ಲಾ ಕೇವಲ ಪುಸ್ತಕದಲ್ಲಿದೆ. ಇವತ್ತು ಇದರಲ್ಲಿ 30 ರಿಂದ 40 ಸಾವಿರಕ್ಕೆ ಜಾಸ್ತಿ ಮಾಡುತ್ತೇವೆಂದು ಹೇಳಿದ್ದಾರೆ. 40 ಸಾವಿರಕ್ಕೆ ಜಾಸ್ತಿ ಮಾಡಿ. ಜಾಗವನ್ನೇ ಇನ್ನು ಖರೀದಿ ಮಾಡಿಲ್ಲ. ಆದರೆ ಲಕ್ಷಾಂತರ ಮನೆಗಳನ್ನು ಮಾಡುತ್ತೇವೆಂದು ಹೇಳುತ್ತಾರೆ. ಇದು ಸಾಧ್ಯವೇ? ಈಗ ಪ್ರಾರಂಭ ಮಾಡಿರುವ ಕೆಲಸಗಳ ಗತಿಯೇನು?

**ಶ್ರೀ ಹೆಚ್.ಎಸ್. ಮಹದೇವಪ್ರಸಾದ್:** ಮಾನ್ಯ ಸೋಮಣ್ಣನವರು ಬಹಳ ಗಂಭೀರವಾಗಿ ಚರ್ಚೆ ಮಾಡುತ್ತಿದ್ದಾರೆ. ಆದರೆ ಅದನ್ನು ಕೇಳಿಸಿಕೊಳ್ಳಲು ಸರ್ಕಾರದ ಪರವಾಗಿ ಯಾರೂ ಇಲ್ಲ. ಸರ್ಕಾರದ ಪರವಾಗಿ ಅದನ್ನು ಗಮನಿಸುತ್ತಿರುವವರು ಯಾರು ಇಲ್ಲ.

**ಚೇರ್ಮನ್:** ಮಾನ್ಯ ಬೊಮ್ಮಾಯಿಯವರು ಅದನ್ನು ತೆಗೆದುಕೊಳ್ಳುತ್ತಿದ್ದಾರೆ.

**ಶ್ರೀ ಹೆಚ್ ಎಸ್. ಮಹದೇವಪ್ರಸಾದ್:** ಅವರು ಏನು ಹೇಳಿದರು ಒಂದು ಎರಡು ಮಾತನ್ನು ತಿಳಿಸಿ.

**ಶ್ರೀ ಬಸವರಾಜ್ ಎಸ್ ಬೊಮ್ಮಾಯಿ:** ಅವರ ಕ್ಷೇತ್ರದಲ್ಲಿ ಸಂಘ ಸಂಸ್ಥೆಯವರು ಎರಡು ಬುದ್ಧಿಮಾಂದ್ಯ ಮಕ್ಕಳ ಶಾಲೆಯನ್ನು ತೆರೆದಿದ್ದಾರೆ ಎಂದು ಬರೆದುಕೊಂಡಿದ್ದೇನೆ.

**ಶ್ರೀ ನೆ.ಲ. ನರೇಂದ್ರಬಾಬು:** ಅಮೂಲ್ಯವಾದ ಸಲಹೆಗಳನ್ನು ಕೊಡುವಾಗ ಸಂಬಂಧಪಟ್ಟ ಸಚಿವರು ಇರುತ್ತಾರೆಂದು ನಾವು ಮಾತನಾಡುತ್ತೇವೆ. ಯಾರೂ ಇಲ್ಲದಿದ್ದರೆ ಈ ಸದನದ ಘನತೆಗೆ ಕುಂದಾಗುತ್ತದೆ.

**ಶ್ರೀ ಬಸವರಾಜ್ ಎಸ್. ಬೊಮ್ಮಾಯಿ:** ಸ್ವಾಮಿ ಬರೆದುಕೊಳ್ಳುತ್ತಿದ್ದೇವೆ.

**ಶ್ರೀ ವಿ. ಸೋಮಣ್ಣ:** ಬೆಂಗಳೂರು ನಗರಕ್ಕಂತೂ ಆಶ್ರಯ ಮನೆಗಳ ಗಂಧವೇ ಗೊತ್ತಿಲ್ಲ. ಸಾಮಾನ್ಯ ಜನರು ಜಾಗವನ್ನು ಕೊಡತಕ್ಕದ್ದು ಕಷ್ಟದ ಕೆಲಸ. ಸರ್ಕಾರದ ಬೆಲೆ ಇವತ್ತು ಸಾಮಾನ್ಯರಿಗೆ ಮುಟ್ಟುವುದಿಲ್ಲ. ಆದ್ದರಿಂದ ತಾವು ಹಿಂದುಮುಂದೆ ನೋಡದೆ ಹತ್ತು ಲಕ್ಷ ಮನೆಗಳನ್ನು ಕಟ್ಟುತ್ತೇವೆ ಎಂದರೆ ಅದು ಸಾಧ್ಯವಿಲ್ಲ. ತಾವು ಏನೂ ಮಾಡಬೇಕಾಗಿಲ್ಲ. ಮನೆ ಕಟ್ಟಲು 40 ಸಾವಿರ ರೂಪಾಯಿಗಳನ್ನು ಏನು ಮಾಡಿದ್ದೀರಿ, ಅಧಿಕಾರಿಗಳು ಯಾರು ಇದ್ದಾರೆ ಇಂಥ ಇಲಾಖೆಯಲ್ಲಿ ಕೆಲಸ ಮಾಡುವವರು ಅವರಿಗೆ ಹೃದಯ ಶ್ರೀಮಂತಿಕೆ ಬೇಕು. ಬಡವರಿಗೆ ಮನೆಕಟ್ಟಿಕೊಡುತ್ತೇವೆ ಎಂಬ ಭಾವನೆ ಬೇಕು. ಈ ಭಾವನೆ ಇಲ್ಲದಿದ್ದರೆ ನೀವು ಎಷ್ಟೇ ಮಾಡಿದರು ಸಹ ಅವರು ಮಾಡುವ ಕೆಲಸವನ್ನೇ ಮಾಡಿಕೊಂಡು ಹೋದರೆ ಆ ಮನೆಗಳು ಎರಡು ಮೂರು ವರ್ಷಕ್ಕೆ ಇರುವುದಿಲ್ಲ. ಆದ್ದರಿಂದ ಈ ಆಶ್ರಯ ಯೋಜನೆ ಏನಿದೆ ಇದರಲ್ಲಿ ಬೆಂಗಳೂರಿಗೆ ಏನಾದರೂ ಮಾಡಬೇಕೆಂದಿದ್ದರೆ, ನಾನು ಬೆಂಗಳೂರಿನ ಸಚಿವನಾಗಿದ್ದಾಗ ನಾನು ಅಶೋಕ್ ರವರು ಸಾಕಷ್ಟು ಚಿಂತನೆ ಮಾಡಿದ್ದೇವೆ. ನಾವು ಎಲ್ಲೂ ಆಶ್ರಯ ಮನೆಗಳನ್ನು ಕೊಡಲು ಆಗಲಿಲ್ಲ. ಆದ್ದರಿಂದ ಇದರ ಬಗ್ಗೆ ದಯವಿಟ್ಟು ಚಿಂತನೆ ಮಾಡಿ ನಗರ ಪ್ರದೇಶದಲ್ಲಿರತಕ್ಕವರಿಗೂ ಈ ವ್ಯವಸ್ಥೆಯ ಅಡಿಯಲ್ಲಿ ತರುವ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ಮಾನ್ಯ ಯಡಿಯೂರಪ್ಪನವರು ಎರಡು ಮೂರು ವಿಚಾರಗಳನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ವಿಶೇಷವಾಗಿ ರೈಲ್ವೇ ಇಲಾಖೆ. ಶಿವಮೊಗ್ಗ ತಾಳಗುಪ್ಪ ರೈಲ್ವೇ ಮಾರ್ಗ ಗೇಜ್ ಪರಿವರ್ತನೆಗೆ ನೂರು ಕೋಟಿ ರೂಪಾಯಿ. ಬೀದರ್–ಗುಲ್ಬರ್ಗಾ ಹೊಸ ರೈಲು ಮಾರ್ಗ ನಿರ್ಮಾಣಕ್ಕೆ 20 ಕೋಟಿ, ಸೊಲ್ಲಾಪುರ–ಬಾಗಲಕೋಟೆ–ಗದಗ್ ರೈಲು ಮಾರ್ಗಕ್ಕೆ 138 ಕೋಟಿ, ಬೆಂಗಳೂರು–ಮೈಸೂರು ಜೋಡಿ ರೈಲು ಮಾರ್ಗಕ್ಕೆ 30 ಕೋಟಿ. ನಾನು ತಮ್ಮ ಗಮನಕ್ಕೆ ತರುತ್ತೇನೆ, 25 ವರ್ಷಗಳಿಂದ ನಾನು ಬೆಂಗಳೂರು ನಗರ ಪಾಲಿಕೆಯ ಸದಸ್ಯನಾಗಿ, ಶಾಸಕನಾಗಿ, ಸಚಿವನಾಗಿ, ನಗರದ ಸಚಿವನಾಗಿ ಕೆಲಸ ಮಾಡಿದ್ದೇನೆ. ಮಾನ್ಯ ಬಸವರಾಜ್ ಬೊಮ್ಮಾಯಿಯವರು ಬರೆದುಕೊಳ್ಳುವುದಾದರೆ ಬಾರಿ ಒಳ್ಳೆಯದು. ರೈಲ್ವೆ

ಇಲಾಖೆ ಏನಿದೆ ಇದಕ್ಕೆ ಯಾವುದೇ ಲಂಗುಲಗಾಮು ಇಲ್ಲ. ರಾಜ್ಯ ಸರ್ಕಾರದ ಯಾವುದೇ ಆದೇಶ, ಮನವಿಯನ್ನು, ಮಹಾನಗರ ಪಾಲಿಕೆಯ ಮನವಿಯನ್ನು ಅವರು ಲೆಕ್ಕಕ್ಕೆ ಇಟ್ಟುಕೊಂಡಿಲ್ಲ. ಕರ್ನಾಟಕ ರಾಜ್ಯದಿಂದ ರೈಲ್ವೆ ಇಲಾಖೆಗೆ ಕೊಟ್ಟಿರು ಹಣ ಎಷ್ಟು? ದರದಲ್ಲಿ ನಮ್ಮ ರಾಜ್ಯ ಸರ್ಕಾರದ ಕಾಂಟಿಬ್ರೂಷನ್ ಮತ್ತು ಕೇಂದ್ರ ಸರ್ಕಾರದ ಕಾಂಟಿಬ್ರೂಷನ್ ಏನಿದೆ ಅದರ ಮಾಹಿತಿ ನಮ್ಮ ಅಧಿಕಾರಿಗಳ ಹತ್ತಿರೆ ಇದೆಯೇ ದಯಮಾಡಿ ಪರಿಶೀಲನೆ ಮಾಡಿ. ಏತಕ್ಕಾಗಿ ಇದನ್ನು ಹೇಳುತ್ತಿದ್ದೇನೆಂದರೆ, ಬಜೆಟ್‌ನಲ್ಲಿ ಮೊದಲ ಬಾರಿಗೆ ಈ ರೀತಿ ಯೋಜನೆಗಳನ್ನು ಮಾನ್ಯ ಮುಖ್ಯಮಂತ್ರಿಯವರು ಪ್ರಕಟ ಮಾಡಿದ್ದಾರೆ. ಯೋಜನೆಗಳು ಯೋಜನೆಗಳಾಗಿಯೇ ಕೇವಲ ಪುಸ್ತಕದಲ್ಲಿ ಇರುವುದು ಬೇಡ. ಈ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ಮುಖ್ಯ ಕಾರ್ಯದರ್ಶಿಯವರನ್ನು ವಿನಂತಿ ಮಾಡುತ್ತೇನೆ, ರೈಲ್ವೇಯವರು ಸಣ್ಣ ಪುಟ್ಟ ಅಧಿಕಾರಿಗಳನ್ನು ಲೆಕ್ಕಕ್ಕೆ ಇಟ್ಟುಕೊಳ್ಳುವುದಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ನನ್ನ ಕ್ಷೇತ್ರದಲ್ಲಿ ಬೆಂಗಳೂರು-ಮೈಸೂರು ನಗರದ ಮಧ್ಯದಲ್ಲಿ ನಾಯಂಡಹಳ್ಳಿ ಎಂಬ ರೈಲು ನಿಲ್ದಾಣ ಇದೆ. ಆ ನಿಲ್ದಾಣವನ್ನು ಹೊರತುಪಡಿಸಿದರೆ ನಾವು ಸಿಟಿಗೇ ಬಂದು ಇಳಿಯಬೇಕು. ಆ ನಿಲ್ದಾಣವನ್ನು ಅಭಿವೃದ್ಧಿಪಡಿಸಿ ಎಂದು ಹತ್ತು ವರ್ಷದಿಂದ ಹೇಳುತ್ತಿದ್ದೇವೆ. ಅಲ್ಲಿ ಒಂದು Railway under bridge ಅನ್ನು ಮಾಡುವುದಕ್ಕೆ 3 ಕೋಟಿ ರೂಪಾಯಿಗಳನ್ನು ನಾವು ಕೊಟ್ಟು 8 ವರ್ಷಗಳಾಯಿತು. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 16-17 Railwy under bridge ನ್ನು ಮಾಡಿ ಎಂದು ಹಣವನ್ನು ಕೊಟ್ಟರೆ ಅವರು ಇವತ್ತಿನವರೆಗೂ ಮಾಡಿಲ್ಲ. ಮೊನ್ನೆ ನಾನು ತುಂಬಾ ಗಲಾಟೆ ಮಾಡಿ ಯಾರೋ deputy Chief Engineer ನ್ನು ಕರೆದುಕೊಂಡು ಹೋಗಿ ಸ್ಥಳ ಪರಿಶೀಲನೆ ಮಾಡಿದರೆ ಅವರು ಆವತ್ತು ಅಂದಾಜು ಮಾಡಿದಾಗ 5 ಕೋಟಿ ಇತ್ತು ಆದರೆ ಇವತ್ತು 18 ಕೋಟಿ ಆಗುತ್ತದೆ. ಇದನ್ನು ಕರ್ನಾಟಕ ಸರ್ಕಾರ ಕೊಟ್ಟರೆ ಮಾತ್ರ ಮಾಡುತ್ತೇವೆಂದು ಹೇಳುತ್ತಾರೆ. ಇವರಿಗೆ ಯಾವುದೇ ನಿಗದಿತ ಕಾಲಮಿತಿ ಇಲ್ಲ. ಇವರ ಬಗ್ಗೆ ನಮ್ಮ ಅಧಿಕಾರಿಗಳು ಹೋಗಿ ಚಕಾರ ಎತ್ತುವಂತೆ ಇಲ್ಲ. ಇವರಿಗೆ ಕರ್ನಾಟಕ ಸರ್ಕಾರದಿಂದಾಗಲಿ, ಸ್ಥಳೀಯ ಸಂಸ್ಥೆಗಳಿಂದ ಬರತಕ್ಕ ಹಣವೇನಿದೆ ಇದಕ್ಕೆ ಯಾವುದೇ ಲೆಕ್ಕ ಇಟ್ಟುಕೊಂಡು ಇವರೊಂದಿಗೆ ಪದೇ ಪದೇ ಕುಳಿತು ಚರ್ಚೆ ಮಾಡಿ ಆ ಯೋಜನೆಯನ್ನು ನಿಗದಿಯಾದ ಸಮಯದಲ್ಲಿ ಮುಗಿಸಬೇಕೆಂಬ ಇಚ್ಚಾ ಶಕ್ತಿ ಇಲ್ಲ. ರೈಲ್ವೇ ಇಲಾಖೆಯವರು ಮಾನ್ಯ ಯಡಿಯೂರಪ್ಪನವರು ಏನು ಮೂರು ಯೋಜನೆಗಳ ಬಗ್ಗೆ ಹೇಳಿದ್ದಾರೆ ಅದನ್ನು ಐದು ವರ್ಷಗಳಲ್ಲಿ ಮುಗಿಸಿದರೆ ನಾನು ಅವರನ್ನು ಸಾರ್ವಜನಿಕವಾಗಿ ಅಭಿನಂದಿಸುತ್ತೇನೆ.

ಮುಖ್ಯಮಂತ್ರಿಯವರು, ರಾಜ್ಯದ ಮುಖ್ಯ ಕಾರ್ಯದರ್ಶಿಯವರು ಹೇಳಿದರೂ ಕೇಳುವುದಿಲ್ಲ. ಅವರು ಯಾವುದೇ ಮಾತನ್ನು ಕೇಳುವುದಿಲ್ಲ. ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿರುವ ಈ ರೈಲ್ವೇ ಅಧಿಕಾರಿಗಳೇನಿದ್ದಾರೆ ಇವರನ್ನು ತಹಬದಿಗೆ ತಂದು ಆ ಯೋಜನೆಗಳನ್ನು ಕೈಗೆತ್ತಿಕೊಳ್ಳತಕ್ಕ ದೊಡ್ಡ ಕೆಲವನ್ನು ಸರ್ಕಾರ ಮಾಡಬೇಕಾಗಿದೆ. ಇಲ್ಲಿಯವರೆಗೆ ಎಷ್ಟೆಷ್ಟು ಹಣವನ್ನು ಕೊಟ್ಟಿದ್ದಾರೆ. ಯಾವ್ಯಾವ ಯೋಜನೆಗಳು ಪೂರ್ಣವಾಗಿದೆ, ರಾಜ್ಯ ಸರ್ಕಾರದ ಪಾಲು, ಸ್ಥಳೀಯ ಸಂಸ್ಥೆಗಳ ಮತ್ತು ರೈಲ್ವೇಯವರ ಪಾಲೇನು ಎನ್ನುವ ಲೆಕ್ಕವನ್ನು ಸರ್ಕಾರ ತರಿಸಿಕೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

**ಶ್ರೀ ಬಸವರಾಜ್ ಎಸ್. ಬೊಮ್ಮಾಯಿ:** ಮಾನ್ಯ ಅಧ್ಯಕ್ಷರೆ, ಸೋಮಣ್ಣನವರ ಇಂಜಿನ್ ಬಹಳ ವೇಗವಾಗಿ ಹೋಗುತ್ತದೆ ಸ್ವಲ್ಪ ರೆಸ್ಟ್ ಕೊಡೋಣ! ಆದ್ದರಿಂದ ಕೆಲವು ಮಾಹಿತಿ ಹೇಳಬಯಸುತ್ತೇನೆ. ಅವರೇನು ರೈಲ್ವೇ ಬಗ್ಗೆ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ ಅದು ನೂರರಷ್ಟು ಸತ್ಯ. ಬೆಂಗಳೂರು ಮಾತ್ರವಲ್ಲ ಕರ್ನಾಟಕದ ಬಗ್ಗೆ ಒಟ್ಟಾರೆ ರೈಲ್ವೇಯವರು ಮೊದಲಿನಿಂದಲೂ ನಿರ್ಲಕ್ಷ ಮಾಡಿಕೊಂಡು ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ ಮೊನ್ನೆ ಮುಖ್ಯಮಂತ್ರಿಯವರು ಸರ್ವಪಕ್ಷದ ನಿಯೋಗ ಹೋದಾಗ ಅಲ್ಲಿರುವಂಥ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚೆಯಾದಾಗ, ಮುಖ್ಯಮಂತ್ರಿಯವರು ಒಂದು ಚಿಂತನೆಯನ್ನು ಮಾಡುತ್ತಿದ್ದಾರೆ. ಏನು ಇಲ್ಲಿಂದ ಪ್ರಪೋಸಲ್ ಹೋಗುತ್ತಿದೆ ಅದಕ್ಕೆ ಸರಿಯಾಗಿ ಪುರಸ್ಕಾರ ಸಿಗದೇ ಇರುವುದರಿಂದ ರೈಲ್ವೇಯ important Board Member ಯಾರಿದ್ದಾರೆ especially Finance and Technical members ಯಾರಿದ್ದಾರೆ ಅವರುಗಳನ್ನು ಬೆಂಗಳೂರಿಗೇ ಆಹ್ವಾನಿಸಿ ನಮ್ಮ ಕರ್ನಾಟಕದ ರೈಲ್ವೇ ಪ್ರಾಜೆಕ್ಟ್ಸ್ ಏನಿದೆ requirements ಏನಿದೆ, ಇಡೀ ರಾಷ್ಟ್ರದಲ್ಲಿ ಅತೀ ಹೆಚ್ಚಿನ ರೈಲ್ವೇಗೆ ಇನ್‌ಪ್ರಾಸ್ಟ್ರಕ್ಚರ್ State government contribution ಯಾವುದು ಇದೆಯೆಂದರೆ ಅದು ಕರ್ನಾಟಕದ್ದು ಇದೆ. ಈ ಸಲವು ಬಜೆಟ್ ನಲ್ಲಿ ಅದಕ್ಕೆ ಹೆಚ್ಚಿನ ದುಡ್ಡನ್ನು ಇಟ್ಟಿದ್ದಾರೆ.

**ಶ್ರೀ ಬಸವರಾಜ ಬೊಮ್ಮಾಯಿ(ಮುಂದು):-** ಈ ಸಾರಿಯ ಬಜೆಟ್‌ನಲ್ಲಿ ಅದಕ್ಕೆ ಹೆಚ್ಚಿನ ದುಡ್ಡನ್ನು ಇಟ್ಟಿದ್ದಾರೆ. ಅದಕ್ಕೆ ತಕ್ಕ ಹಾಗೆ ಅವರ projects ಅನ್ನು ಕೂಡಲೇ ಮಾಡುವ ಸಲುವಾಗಿ ಬೆಂಗಳೂರಿನಲ್ಲಿಯೇ ಸಭೆಯೊಂದನ್ನು ಕರೆಯಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಆಲೋಚನೆಯನ್ನು ಮಾಡಿದ್ದಾರೆ. ಅದಷ್ಟು ಬೇಗನೇ ಆ ಒಂದು ಕಾರ್ಯವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ವಿ. ಸೋಮಣ್ಣ:– ಮಾನ್ಯ ಅಧ್ಯಕ್ಷರೆ, ನಮ್ಮ ಸ್ನೇಹಿತರಾದ ಕೃಷ್ಣಯ್ಯ ಶೆಟ್ಟಿಯವರು ಮುಜರಾಯಿ ಇಲಾಖೆಯ ಸಚಿವರಾಗಿದ್ದಾರೆ. ಆ ಇಲಾಖೆಗೆ ಸೇರಿದ ಸಾಕಷ್ಟು ಆಸ್ತಿಗಳಿವೆ. ಇತ್ತೀಚೆಗೆ ಅವುಗಳನ್ನು ಪರಭಾರೆ ಮಾಡಬೇಕೆನ್ನುವ ಕೂಗು ಬಂದಿದೆ. ಅದರ ಬಗ್ಗೆ ನಾನು ಪತ್ರಿಕೆಗಳಲ್ಲೂ ಸಹ ಓದಿದೆ. ಯಾವುದೇ ಕಾರಣಕ್ಕೂ ಅವರು ಎಷ್ಟೇ ದೊಡ್ಡವರಾದರೂ ಕೂಡ ದೇವಸ್ಥಾನದ ಆಸ್ತಿಗಳನ್ನು ಲೀಸ್ ಕೊಡುವುದಾಗಲಿ, ಮಾರಾಟ ಮಾಡುವುದಾಗಲಿ ಬೇಡ. ಇಲ್ಲಿಯವರೆಗೂ ಏನೇನಾಗಿದೆ, ಅದನ್ನು ಬಿಡಿ. ಇನ್ನು ಮುಂದೆ ಆ ರೀತಿಯ ಯಾವುದೇ ತರಹದ ಯೋಜನೆಗಳು ಸರ್ಕಾರದ ಮುಂದೆ ಪ್ರಸ್ತಾಪವಾಗುವುದು ಬೇಡ. Wakf Boardನ ವ್ಯಾಪ್ತಿಯಲ್ಲಿರುವ ಆಸ್ತಿಗಳ ಬಗ್ಗೆಯೂ ಕೂಡ ಅದೇ ರೀತಿ ನಿಲುವನ್ನು ತೆಗೆದುಕೊಳ್ಳಬೇಕು. ಕೆಲವು ಕಡೆ ಅರ್ಚಕರಿಗೆ ದೇವಸ್ಥಾನಗಳನ್ನು ನಿರ್ವಹಣೆ ಮಾಡತಕ್ಕಂಥ ಸಂದರ್ಭದಲ್ಲಿ ಕೆಲವು ಕಮಿಟಿಗಳನ್ನು ಮಾಡಲಾಗಿದೆ, ಆ ಕಮಿಟಿಯನ್ನು ಎಲ್ಲೋ ಒಂದು ಕಡೆ ಪಕ್ಷಾತೀತವಾಗಿ ಮಾಡತಕ್ಕದ್ದು ಸಮಂಜಸವಾಗಿದೆ. ಅದನ್ನು ಕೇವಲ ಒಂದೇ ಪಕ್ಷಕ್ಕೆ ಯಾರೂ ಕೂಡ ಸೀಮಿತಗೊಳಿಸಬಾರದು. ಯಾವುದೇ ಪಕ್ಷದ ಸರ್ಕಾರ ಬರಲಿ, ಯಾರು ಅದರ ಕೆಲಸವನ್ನು ನಿರ್ವಹಣೆ ಮಾಡುತ್ತಾರೋ, ಅಂತಹ ಇಚ್ಛಾಶಕ್ತಿ ಯಾರಿಗೆ ಇರುತ್ತದೋ, ಅವರನ್ನೇ ನೇಮಿಸತಕ್ಕಂಥಹ ಮುಂದಾಲೋಚನೆಯನ್ನು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮೆಲ್ಲರ ಕಣ್ಮಣಿಯಾಗಿದ್ದಂತಹ ದಿವಂಗತ ಡಾ: ರಾಜ್‌ಕುಮಾರ್‌ರವರ ಸ್ಮಾರಕಕ್ಕೆ 5 ಕೋಟಿ ರೂ.ಗಳನ್ನು ಇಟ್ಟಿದ್ದಾರೆ. ನನಗನಿಸುತ್ತದೆ, ಅಷ್ಟೊತ್ತಿಗೆ ಅದೆಲ್ಲಾ ಮುಗಿದು ಇವತ್ತು ಅದರ ಪ್ರಸ್ತಾಪವೇ ಆಗಬೇಕಾದಂತಹ ಅವಶ್ಯಕತೆ ಇರಲಿಲ್ಲ. ಸಾರ್ವಜನಿಕವಾಗಿ ಇಲ್ಲಿಯವರೆಗೆ ಮುಗಿಯಬೇಕಾಗಿತ್ತು. ಅದ್ಯಾಕೋ ಏನೋ ಗೊತ್ತಿಲ್ಲ, ಸರ್ಕಾರಗಳು ಘೋಷಣೆಗಳನ್ನು ಮಾಡಿಕೊಂಡು ಬರುತ್ತಿದೆಯೇ ವಿನಃ ಆ ಘೋಷಣೆಗಳು ಕಾರ್ಯರೂಪಕ್ಕೆ ಬರುತ್ತಿಲ್ಲ. ಸನ್ಮಾನ್ಯ ಮಹದೇವಪ್ರಸಾದ್ ಸಾಹೇಬರು ಇಲ್ಲೇ ಇದ್ದಾರೆ. ಅವರು ರಾಜ್‌ಕುಮಾರ್‌ರವರ ಸಮಾಧಿಯ ಹತ್ತಿರವೇ ಹೋಗಿ ಹೇಳಿ ಬಂದರು, ಏನೂ ಆಗಲಿಲ್ಲ. ಇನ್ನೂ ಕೂಡ ಏನೂ ಆಗುವಂತಹ ಕೆಲಸ ಆಗುವುದು ಬೇಡ. ದಯಮಾಡಿ ಇದಕ್ಕೊಂದು ರೂಪ ಕೊಟ್ಟು ಕನ್ನಡದ ಒಬ್ಬ ಪ್ರತಿಭಾವಂತ, ಮೇರು ನಟ, ಕರ್ನಾಟಕ ರತ್ನ ರಾಜ್‌ಕುಮಾರ್‌ರವರು ಏನು ಇವತ್ತು ನಮ್ಮನ್ನು ಅಗಲಿದ್ದಾರೆ, ಅವರ ಚಿಂತನೆಗಳಿಗೆ ಒತ್ತನ್ನು ಕೊಡಬೇಕು. ಆ ರೀತಿ ಪದೇ ಪದೇ ಹೇಳುವುದು ಬೇಡ. ಅದು ಮತ್ತೆ ಪುನಾರವರ್ತನೆ ಆಗದಂತೆ ಈ ಕಾರ್ಯವನ್ನು ಮುಗಿಸಿ. ತಕ್ಷಣವೇ ಅದನ್ನು ಕೈಗೆತ್ತಿಕೊಳ್ಳುವಂತಹ ಕೆಲಸವನ್ನು ಪ್ರಾರಂಭ ಮಾಡಬೇಕೆಂಬ ಒತ್ತಾಯವನ್ನು ನಾನು ಸರ್ಕಾರಕ್ಕೆ ಮಾಡುತ್ತಿದ್ದೇನೆ. ಮಾನ್ಯ

ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು, ಈ ರಾಷ್ಟ್ರದ, ವಿಶ್ವದ ಒಬ್ಬ ಮಹಾನ್ ಒಬ್ಬ ಹಿರಿಯ ಚೇತನರ ಪುತ್ರರಾಗಿದ್ದವರು. ಪರಿಸರದ ಬಗ್ಗೆ ಹೆಚ್ಚಿನ ಕಾಳಜಿಯನ್ನು ಉಳ್ಳವರು. ಅಂತಹ ಒಬ್ಬ ಮಹನೀಯ ಯಾವುದೇ ಸ್ಮಾರಕಗಳನ್ನಾಗಲಿ, ಮತ್ತೊಂದಾಗಲಿ ಮಾಡತಕ್ಕಂತಹವರು ಅಲ್ಲ. ಅವರು ರಾಷ್ಟ್ರದ ಪರಿಸರ ಜಾಗೃತಿಯಲ್ಲಿ ತನ್ನನ್ನು ತಾನು ತೊಡಗಿಸಿಕೊಂಡವರು. ಅವರ ಹೆಸರಿನ ಸಂಶೋಧನಾ ಕೇಂದ್ರಕ್ಕೆ ಇವತ್ತು 1 ಕೋಟಿ ರೂ.ಗಳನ್ನು ಇಟ್ಟಿದ್ದೀರಿ. ಈಗಾಗಲೇ ಮೂಡಿಗೆರೆ ತಾಲ್ಲೂಕಿನಲ್ಲಿ ಪರಿಸರದ ಬಗ್ಗೆ ಒಳ್ಳೆಯ ಜಾಗೃತಿಯನ್ನು ಮೂಡಿಸುವಂಥ ಕೆಲಸವನ್ನು ಮಾಡುವುದಕ್ಕೆ ಜಾಗ ಕೇಳಿದ್ದಾರೆ, ದಯಮಾಡಿ ಅದನ್ನು ಕೊಡತಕ್ಕಂಥದ್ದು ಆಗಬೇಕು. ಅಲ್ಲಿ ಬಹುತೇಕ ಮಕ್ಕಳು Ph.D. ಮಾಡಬೇಕೆನ್ನುವ ಅವರ ಕಲ್ಪನೆ ಏನಿದೆ, ಅದಕ್ಕೆ ಚಾಲನೆಯನ್ನು ಕೊಡಬೇಕೆಂದು ಸರ್ಕಾರವನ್ನು ಇವತ್ತು ನಾನು ಒತ್ತಾಯ ಮಾಡುತ್ತೇನೆ. ಅರಣ್ಯದಲ್ಲಿ ಸಾಕಷ್ಟು ಒತ್ತನ್ನು ಕೊಡತಕ್ಕ ಕೆಲಸ ಮಾಡಿದ್ದಾರೆ. ಹೆಚ್ಚಿಗೆ ಗಂಧದ ಮರಗಳನ್ನು ಬೆಳೆಸಲು ನಾವು ನೂತನ ಯೋಜನೆಯನ್ನು ಕೈಗೊಳ್ಳುತ್ತೇವೆ ಎಂದು ಹೇಳಿದ್ದಾರೆ. ಗಂಧದ ಮರಗಳನ್ನು ಬೆಳೆಸಲು ನಾವು ನೂತನ ಯೋಜನೆಯನ್ನು ಕೈಗೊಳ್ಳುತ್ತೇವೆ ಎಂದು ಹೇಳಿದ್ದಾರೆ. ಗಂಧದ ಮರ ಬೆಳೆಸುವುದು ಇರಲಿ, ಇರುವ ಗಂಧದ ಮರಗಳನ್ನು ರಾತ್ರೋರಾತ್ರಿ ಹೊಡೆದುಕೊಂಡು ಹೋಗುತ್ತಿದ್ದಾರೆ. ಈ ಅರಣ್ಯ ಇಲಾಖೆ ಕರ್ನಾಟಕ ರಾಜ್ಯದಲ್ಲಿ ಕೆಲಸ ಮಾಡುತ್ತಿದೆಯೋ, ಇಲ್ಲವೋ ಎನ್ನುವಂತಹ ಅನುಮಾನ ಬಂದಿದೆ. ಬೇರೆ ಬೇರೆ ರಾಷ್ಟ್ರಗಳಿಗೆ ಹೋದರೆ ಆಗತಕ್ಕಂಥ ಭಾವನೆ ನಮ್ಮಲ್ಲಿ ಆಗುತ್ತಿತ್ತು, ಈಗ ಆಗುತ್ತಿಲ್ಲ. ಕರ್ನಾಟಕದ ಇತಿಹಾಸದಲ್ಲಿ ಇದ್ದಂಥ ಅರಣ್ಯಗಳು ಇವತ್ತು ಯಾವ ರೀತಿಯಾಗಿವೆ ಎಂಬುದನ್ನು ನೋಡಿದರೆ ನಿಮಗೆ ಅದು ಗೊತ್ತಾಗುತ್ತದೆ. ಇವರು ಮಾಡುವುದು ಏನು? ಯಾರೋ ಬಡವರು ಅಲ್ಲೇನೋ ಒಂಚೂರು ಒತ್ತುವರಿ ಮಾಡಿಕೊಂಡು ಸ್ವಲ್ಪ ಜಾಗದಲ್ಲೇ ಜೀವನ ಮಾಡುತ್ತಿದ್ದರೆ, ಅವರನ್ನು ಓಡಿಸುವುದಷ್ಟೇ ಅವರಿಗೆ ಗೊತ್ತಿರುವುದು. ಇವರು ಯಾವುದೇ ಅರಣ್ಯಕ್ಕೆ ಗಂಧದ ಮರಗಳನ್ನು ಬೆಳೆಸುವ ಕೆಲಸ ಮಾಡುವುದಿಲ್ಲ. 'ಗಂಧದ ಮರಗಳನ್ನು ಬೆಳೆಸಿ' ಎಂದು ಹಣಕಾಸಿನ ಸಚಿವರಾದ ಸನ್ಮಾನ್ಯ ಮುಖ್ಯಮಂತ್ರಿಗಳು ಹಣ ಕೊಟ್ಟ ತಕ್ಷಣ, ಆ ಗಂಧದ ಮರಗಳ ಹೆಸರಿನಲ್ಲಿ ಏನಾಗುತ್ತದೋ ಗೊತ್ತಿಲ್ಲ. world bank ಕರ್ನಾಟಕದ Forest ಅನ್ನು ಅಭಿವೃದ್ಧಿ ಪಡಿಸಿ ಎಂದು 600 ಕೋಟಿ ರೂ. ಗಳನ್ನು ಕೊಟ್ಟರು. ಆದರೆ Forest Department ನವರು Chief Conservative Building, DFO Building ಕಟ್ಟಿದರು. ಯಾವ DFO ಗಳು ವ್ಯಾನ್‌ನಲ್ಲಿ ಓಡಾಡುತ್ತಿದ್ದರೋ, ಅವರೆಲ್ಲರಿಗೂ ಕೂಡ ಒಳ್ಳೊಳ್ಳೆಯ ವಾಹನಗಳನ್ನು

ಖರೀದಿಸಿದರು. ಇಂತಹ ಕೆಲಸ ಮಾಡತಕ್ಕದ್ದರ ಜೊತೆಯಲ್ಲಿ ಗಂಧದ ಹೆಸರು ಹೇಳಿಕೊಂಡು ಕೊಡುವುದಕ್ಕಿಂತ ಹೆಚ್ಚಾಗಿ Forest ಈ ಇಲಾಖೆ ಏನಿದೆ,...

**ಛೇರ್ಮನ್:-** DC Compound ನಲ್ಲಿ ಇದ್ದಂತಹ ಗಂಧದ ಮರಗಳು ಹೋಗಿವೆ ಮತ್ತು Forest ಇಲಾಖೆಯ Compound ನಲ್ಲಿದ್ದ ಗಂಧದ ಮರಗಳೂ ಸಹ ಹೋಗಿವೆ.

**ಶ್ರೀ ವಿ. ಸೋಮಣ್ಣ:-** ಪೊಲೀಸ್ ಸ್ಟೇಷನ್‌ನಲ್ಲಿ ಇದ್ದಂತಹ ಮರಗಳೂ ಕೂಡ ಹೋಗಿವೆ.

**ಛೇರ್ಮನ್:-** ಮೊನ್ನೆ ನಮ್ಮ Compound ನಲ್ಲಿ ಇದ್ದದ್ದೂ ಕೂಡ ಹೋಗಿವೆ.

**ಡಾ: ಹೆಚ್.ಸಿ. ಮಹದೇವಪ್ಪ:-** ಗಂಧದ ಮರ ಪೊಲೀಸ್ ಸ್ಟೇಷನ್‌ನಲ್ಲಿ ಕಳುವಾಗಿದೆ, ಮಂತ್ರಿಗಳ ಮನೆಯಲ್ಲಿ ಕಳುವಾಗುತ್ತಿದೆ, Forest officeನಲ್ಲಿ ಕಳುವಾಗಿದೆ. ಇವರೆಲ್ಲರ ಬಗ್ಗೆ ವಿಶೇಷ ನಿಗಾ ಇಡಬೇಕಾದಂತಹ ಅಗತ್ಯವಿದೆ. Forest ಏಕೆ ಕಡಿಮೆಯಾಗುತ್ತಿದೆ ಎಂದರೆ, ಇವರೆಲ್ಲರ ಮನೆಯಲ್ಲಿ ಕಳುವಾಗುತ್ತಿದೆ ಇವರ ಬಗ್ಗೆ ವಿಶೇಷ ನಿಗಾ ಇಡುವುದು ಸೂಕ್ತ.

**ಶ್ರೀ ವಿ. ಸೋಮಣ್ಣ:-** ಅದಕ್ಕಾಗಿ ಇವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ನಾನು ಅನೇಕ ಬಾರಿ ಹೇಳಿದ್ದೇನೆ. ನಾನು ಒಂದು ಸಾರಿ ಆಂಧ್ರಪ್ರದೇಶ ಶ್ರೀಶೈಲಂ ದೇವಸ್ಥಾನಕ್ಕೆ ಹೋಗಿದ್ದೆ. ಅಲ್ಲಿಯ ಸರ್ಕಾರ ಮಳೆ ಬೀಳುತ್ತಿರುವ ಸಂದರ್ಭದಲ್ಲಿ ಹೆಲಿಕಾಪ್ಟರ್ ಮೂಲಕ Forestನಲ್ಲಿ ಬೀಜಗಳನ್ನು ಬಿತ್ತನೆ ಮಾಡಿಸುತ್ತಿದ್ದರು. ನಾನು ತಕ್ಷಣವೇ ಬಂದು ಆ ಬಗ್ಗೆ ನಮ್ಮ Forest ಇಲಾಖೆಯವರಿಗೆ ಹೇಳಿದೆ. ಅವರು ನನ್ನ ಮಾತು ಕೇಳಿ ನಕ್ಕುಬಿಟ್ಟರು. ಆ ರೀತಿ ನಮ್ಮಲ್ಲೂ ಬಿತ್ತನೆ ಮಾಡಬೇಕು. ಬಹುತೇಕ ಅರಣ್ಯ ಇಲಾಖೆಯಲ್ಲಿ ಅರಣ್ಯವನ್ನು ಕಾಯತಕ್ಕ ಜನರೇನಿದ್ದಾರೆ, ಅವರು ಅರಣ್ಯ ಭಕ್ಷಕರಾಗಿದ್ದಾರೆ ಎನ್ನುವಂತಹ ಉದಾಹರಣೆಗಳು ಅನೇಕ ಕಡೆ ಕಂಡು ಬಂದಿವೆ. ಆದರೆ ಸಿಬ್ಬಂದಿ ಕೊರತೆಯೂ ಸಹ ಕಾಡುತ್ತಿದೆ. Forest guard ಇಲ್ಲ...

**ಶ್ರೀ ಬಿ. ರಮಾನಾಥ ರೈ:-** ನೀವು ಅರಣ್ಯ ಇಲಾಖೆ ಬಗ್ಗೆ ಹೇಳುತ್ತಿರುವುದು ಅರಣ್ಯರೋದನವಾಗಿದೆ.

**ಶ್ರೀ ವಿ. ಸೋಮಣ್ಣ:-** ಇಲ್ಲ, ನಾನು ಮಾತನಾಡುತ್ತಿರುವುದನ್ನು ಕೇಳುತ್ತಿದ್ದಾರೆ.

**ಶ್ರೀ ಆರ್. ಅಶೋಕ್:-** ನಾವು ಆ ಬಗ್ಗೆ ಕೇಳುತ್ತಿದ್ದೇವೆ ಮತ್ತು ನೋಟ್ ಸಹ ಮಾಡಿಕೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರು ಅವರು ಶ್ರೀಶೈಲಂಗೆ ಹೋಗಿ ಆ ದೃಶ್ಯವನ್ನು ನೋಡಿ ಬಂದ ಮೇಲೆ ಅಂದಿನ ಧರ್ಮಸಿಂಗ್‌ರವರ ಸರ್ಕಾರಕ್ಕೆ ಹೇಳಿದರೂ ಕೂಡ ಏನೂ ಮಾಡಲಿಲ್ಲ ಎಂದು ಅವರು ಹೇಳುತ್ತಿದ್ದಾರೆ.

**ಶ್ರೀ ವಿ. ಸೋಮಣ್ಣ:-** ಎಲ್ಲಾ ಸರ್ಕಾರಗಳೂ ಹಾಗೆಯೇ ಆಗುವುದು ಬೇಡ. ನೀವೇನೋ ಮಾಡುತ್ತೇವೆಂದೂ ಹೇಳುತ್ತಿದ್ದೀರಲ್ಲಾ, ಅದಕ್ಕೆ ಮಾಡಿ ಎಂದು ಹೇಳುತ್ತಿದ್ದೇನೆ. ನೀವು ಮಾಡುವುದಿಲ್ಲ ಎನ್ನುವುದಾದರೆ, ನಾವೇನು ಮಾಡಲಿಕ್ಕಾಗುತ್ತದೆ? ಅದರ ಜೊತೆಯಲ್ಲಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಕನಿಷ್ಠ ಬಂಡೀಪುರ, ನಾಗರಹೊಳೆ, ಆಗುಂಬೆ ಮುಂತಾದ ಯಾವುವು ಪ್ರತಿಷ್ಠಿತ ಅರಣ್ಯ ಪ್ರದೇಶಗಳಿವೆ, ಅಲ್ಲಿಗಾದರೂ ವಾಚರ್‌ಗಳು, ವಾರ್ಡ್‌ಗಳು, Forest guard ಗಳನ್ನು ನೇಮಕ ಮಾಡತಕ್ಕಂತಹ ಪ್ರಕ್ರಿಯೆಯನ್ನು ತಕ್ಷಣ ಪ್ರಾರಂಭ ಮಾಡಬೇಕೆಂದು ನಾನು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ಕರ್ನಾಟಕ ರಾಜ್ಯದ ರಾಜಧಾನಿ ಆಗಿರತಕ್ಕ ಬೆಂಗಳೂರಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಒತ್ತು ಕೊಡಬೇಕು. ಇವತ್ತು ಬೆಂಗಳೂರಿನಲ್ಲಿ ಮಾಡಬೇಕಾಗಿರುವ ಕೆಲಸ ಇನ್ನೂ ಸಾಕಷ್ಟಿದೆ. ಹೊಟ್ಟೆ ಹಸಿಯುತ್ತಿದೆ ಎಂದು ನಮ್ಮ ರೈತರವರು ಇಲ್ಲಿ ಒದ್ದಾಡುತ್ತಿದ್ದಾರೆ.

**ಶ್ರೀ ಆರ್. ಅಶೋಕ್:-** ಬಜೆಟ್ ಚೆನ್ನಾಗಿದೆ ಎಂದು ಹೇಳಿ ಮುಗಿಸಿಬಿಡಿ.

**ಶ್ರೀ ವಿ. ಸೋಮಣ್ಣ:-** ಬಜೆಟ್ ಚೆನ್ನಾಗಿದೆ ಎಂದು ನಾನು ಹೇಳುವುದಕ್ಕಿಂತ ಜನ ಹೇಳಬೇಕಾಗುತ್ತದೆ. ಜನ ಹೇಳಬೇಕೆಂದು ನೀವೇನು ಆ ರೀತಿ ಹಣವನ್ನು ಒದಗಿಸಿದ್ದೀರಿ, ಇದು ಏನೇನು ಸಾಲದು. ನಿಮ್ಮ PWD ಮತ್ತು ಇಂಧನ ಇಲಾಖೆ ಮತ್ತು ಇನ್ನಿತರ ಇಲಾಖೆಗಳೇನಿವೆ, ಅಲ್ಲಿ spill-over works ಎಷ್ಟಿದೆ? on-going works ಎಷ್ಟಿದೆ? sanction ಮಾಡಿರತಕ್ಕವು ಎಷ್ಟು? ಇನ್ನೂ sanction ಆಗಿ ಬರುತ್ತಿರುವುದೆಷ್ಟು? ಇದಕ್ಕೆ ಈ ಬಜೆಟ್‌ನಲ್ಲಿ ಇರತಕ್ಕ ಹಣ ಖರ್ಚಾಗುತ್ತದೆ. ಮುಂದಿನ ಯೋಜನೆಗಳಿಗೆ ನಿಮ್ಮ ಹತ್ತಿರ ಹಣವಿಲ್ಲ. ಹಳೆಯದು ಆಗಿರತಕ್ಕ ಕೆಲಸಗಳೇನು ನಿಂತು ಹೋಗಿವೆ, ಅದಕ್ಕೇ ನೀವು ಹಣ ಒದಗಿಸುದಕ್ಕಾಗುತ್ತಿಲ್ಲ. ಇದರ ಜೊತೆಯಲ್ಲಿ ಇವತ್ತೇನು ನೀವು ಹೇಳಿದ್ದೀರಿ, ಒಂದು ಮಾದರಿ ಕರ್ನಾಟಕವನ್ನು ಮಾಡುತ್ತೇವೆ, ಉದಾರೀಕರಣ ವ್ಯವಸ್ಥೆಯಲ್ಲಿ ನಾವು ಎಲ್ಲವನ್ನೂ ಕೂಡ ಮಾಡುತ್ತೇವೆ ಎನ್ನತಕ್ಕಂಥ ಕಲ್ಪನೆ ಇದೆ, ಆ ಕಲ್ಪನೆಗೆ ಬೇಕಾಗಿರತಕ್ಕಂಥ ಹಣಕಾಸಿನ ಮುಗ್ಗಟ್ಟನ್ನು ತಾವು ಸರಿದೂಗಿಸಿಕೊಳ್ಳಬೇಕಾಗುತ್ತದೆ. ಆಬಗ್ಗೆ ಯಾವ ರೀತಿ ಸರ್ಕಾರ

ಚಿಂತನೆ ಮಾಡುತ್ತದೋ, ಅದನ್ನು ನೋಡೋಣ. ಸನ್ಮಾನ್ಯ ಸಾರಿಗೆ ಸಚಿವರಾದ ಅಶೋಕ್‌ರವರು ಇಲ್ಲಿದ್ದಾರೆ. ನನ್ನ ಅವರ ಬಾಂಧವ್ಯ ಬಹಳ ಹಳೆಯದು. ನಾನು ಮತ್ತು ಅವರು 25 ವರ್ಷಗಳಷ್ಟು ಹಳೆಯ ಸ್ನೇಹಿತರು. ಬೆಂಗಳೂರು ನಗರದಲ್ಲಿ ಜನಸಂದಣಿಯ ಒತ್ತಡದಿಂದ ಸಾರಿಗೆ ಕೂಡ ಹೆಚ್ಚಾಗಿದೆ. 26 ಲಕ್ಷ ವಾಹನಗಳು ಬೆಂಗಳೂರು ನಗರದಲ್ಲಿ ಏಕಕಾಲದಲ್ಲಿ ಸಂಚಾರ ಮಾಡುತ್ತಿವೆ. ಈ ಸಂಚಾರ ಮಾಡುವುದಕ್ಕೆ ಇರತಕ್ಕದ್ದು ಒಂದೇ ಒಂದು ಸುಭಾಷ್ ನಗರ Bus stand ಬೆಂಗಳೂರು ನಗರದಲ್ಲಿ ನಾಲ್ಕಾರು ಕಡೆಗಳಲ್ಲಿ ಒಳ್ಳೊಳ್ಳೆಯ hi-tech Bus stand ಗಳನ್ನು ಮಾಡಬೇಕೆಂದು ನಾವೆಲ್ಲರೂ ಕೂಡ ದಿವಂಗತ ಜೆ.ಹೆಚ್. ಪಟೇಲ್‌ರ ಕಾಲದಿಂದಲೂ ಹೇಳಿದೆವು. ನನ್ನ ಕ್ಷೇತ್ರದ ಮೈಸೂರು ರಸ್ತೆಯಲ್ಲಿ ಮಾತ್ರ ಒಂದೇ ಒಂದು ಹೈಟೆಕ್ ಬಸ್ ಸ್ಟ್ಯಾಂಡ್ ಆರಂಭಿಸಲಾಗಿದೆ. ಸನ್ಮಾನ್ಯ ಅಶೋಕ್‌ರವರು 4 ಕಡೆಗಳಲ್ಲಿ ಮಾಡುತ್ತೇನೆಂದು ಹೇಳಿದ್ದಾರೆ. ಆ 4 ಕಡೆ ಮಾಡತಕ್ಕಂಥ ನಿಮ್ಮ ಪ್ರಯತ್ನ ದಯಮಾಡಿ ಸಾಗಲಿ. ಅದರಲ್ಲಿ ತಾವು ಯಶಸ್ವಿಯಾಗಿ ಮಾಡಲಿ.

**ಶ್ರೀ ಆರ್. ಅಶೋಕ್**: 10 ಕಡೆ ಮಾಡುತ್ತೇವೆಂದು ಹೇಳಿದ್ದೇವೆ.

**ಶ್ರೀ ವಿ. ಸೋಮಣ್ಣ:-** ಅಷ್ಟೂ ಕಡೆ ಯಶಸ್ವಿಯಾಗಿ ಆಗಲಿ. ಸಮ್ಮಿಶ್ರ ಸರ್ಕಾರ ಇದ್ದಾಗ ನನ್ನ ಕ್ಷೇತ್ರದಲ್ಲಿ 56 ಕೋಟಿ ರೂ., ಗಳ ಕಾಮಗಾರಿಯೊಂದಕ್ಕೆ foundation ಹಾಕಿದರು. ಆಗ ಮಾನ್ಯ ಅಶೋಕ್‌ರವರೇ ಬೆಂಗಳೂರು ನಗರದ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರು. ಚಲುವರಾಯಸ್ವಾಮಿಯವರು ಸಾರಿಗೆ ಸಚಿವರಾಗಿದ್ದರು.

**ಶ್ರೀ ವಿ. ಸೋಮಣ್ಣ** (ಗೋವಿಂದರಾಜ ನಗರ) (ಮುಂದು): ಅವರಿಗೂ ಹೇಳಿದೆ, ಸ್ವಾಮಿ ಇನ್ನು 3-4 ತಿಂಗಳಲ್ಲಿ ಹೋಗುತ್ತೀರಿ ನೀವು ಎಲ್ಲಿ ಮಾಡುವುದಕ್ಕಾಗುತ್ತದೆಂದು ಕೇಳಿದೆ, ಇಲ್ಲ 8 ದಿವಸದಲ್ಲಿ ಕೆಲಸ ಆರಂಭ ಮಾಡಲು ಆದೇಶ ಮಾಡಿದ್ದೇನೆಂದು ಅವತ್ತು ಇವರು ಬರಲಿಲ್ಲ. ಏಕೆ ನೀವು ಬರಲಿಲ್ಲವೆಂದರೆ, ಇಲ್ಲ ನಾವು ಮಾಡಕ್ಕಾಗುವುದಿಲ್ಲ ಅದಕ್ಕೆ ನಾನು ಬರಲಿಲ್ಲವೆನ್ನುವ ಮಾತನ್ನು ಕೂಡ ಹೇಳಿದರು. ನಾನು ವಿನಂತಿ ಮಾಡುವುದೇನೆಂದರೆ, ಇಲ್ಲಿಯವರೆಗೆ ಹಾಕಿರುವ ನಿಮ್ಮ ಪೌಂಡೇಷನ್ ಕಲ್ಲುಗಳೇನಿವೆ, ಅವನ್ನು ದಯಮಾಡಿ ತಾವು ಒಂದು ಸಾರಿ ಪರಿಶೀಲನೆ ಮಾಡಿ, ನನ್ನ ಕ್ಷೇತ್ರದ್ದು 56 ಕೋಟಿ ರೂಪಾಯಿದಿದೆ, ಅದಕ್ಕೆ ಚಾಲನೆಯನ್ನು ಕೊಟ್ಟು ಅದರ ಜೊತೆಯಲ್ಲಿ ಇನ್ನೊಂದಿಷ್ಟು ಮಾಡುವುದು. ಇನ್ನು ಈ ವಾಹನತಟ್ಟನೆ, ವಾಯುಮಾಲಿನ್ಯ ಬಗ್ಗೆ ಹೇಳುವುದಾದರೆ, ಇವತ್ತೇನೆ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಯಾರಾದರೂ ಕೆಲಸ ಮಾಡುತ್ತಿದ್ದಾರೋ ಸತ್ತುಹೋಗಿದ್ದಾರೋ ಗೊತ್ತಿಲ್ಲ.

ಆ ಮಂಡಳಿ ಇರುವುದೆ ಕೇವಲ ಹಣಗಳಿಕೆಗೆ ಮಾತ್ರವಿರುವುದು. ಅವರು ತೊಂದರೆ ಕೊಡುವುದು ಯಾರಿಗೆ ಗೊತ್ತೆ, ಯಾರಾದರು ಒಬ್ಬ ಮಧ್ಯಮ ವರ್ಗದವರನ್ನು ಕಾರ್ ತೆಗೆದುಕೊಂಡರೆ, ಕಾರ್ಖಾನೆಯನ್ನು ಆರಂಭ ಮಾಡಿದರೆ ಅವನಿಗೆ ನೋಟೀಸ್ ಕೊಡುತ್ತಾರೆ, ತಾವು ನೋಡಿರಬಹುದು, ದೊಡ್ಡ ದೊಡ್ಡವರಿಗೆ ಕೊಡುವುದಿಲ್ಲ. ಇವತ್ತು ಆ ಸಂಪೂರ್ಣವಾದ ಇಲಾಖೆಯನ್ನು ವಹಿಸಿಕೊಂಡಿರುವುವವರ ಬಗ್ಗೆ ರಿವ್ಯೂ ಮಾಡಿ, ಆ ಇಲಾಖೆಗೆ ಏನಾದರೂ ಸ್ವಲ್ಪ ಕಾಯಕಲ್ಪ ಕೊಡದೆ ಹೋದರೆ, ದಯಮಾಡಿ ಆ ಇಲಾಖೆಯನ್ನು ತೆಗೆದು ಹಾಕಿ ಜನರು ರಾಜರೋಷವಾಗಿರುವುದಾಗಲಿ. ಈ ಭ್ರಷ್ಟಾಚಾರದ ಮತ್ತೊಂದು ಮುಖ ಈ ಮಾಲಿನ್ಯ ನಿಯಂತ್ರಣ ಮಂಡಳಿ. ಇದಕ್ಕೆ ಏನಾದರೂ ಒಂದು ರೂಪವನ್ನು ಕೊಡಬೇಕೆನ್ನುವ ಮಾತನ್ನು ಹೇಳುತ್ತೇನೆ. ಬೆಂಗಳೂರು ನಗರದಲ್ಲಿ 26 ಲಕ್ಷ ವಾಹನಗಳಿವೆ, ನಾನು ಸಾರಿಗೆ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಇಷ್ಟೆಲ್ಲಾ ವಾಹನಗಳಿವೆ. ಅದೇ ರಸ್ತೆಗಳಿವೆ. ಇನ್ನು ಆಟೋಗಳಿವೆ ಲೈಸೆನ್ಸ್ ಕೊಡುವುದನ್ನು ನಾನು ಬೇಡವೆನ್ನುವುದಿಲ್ಲ ಆದರೆ ಆ ವಾಹನಗಳನ್ನು ಎಲ್ಲಿ ಓಡಿಸುತ್ತೀರಾ? ಇದನ್ನು ಯಾವರೀತಿಯಾಗಿ ತಹಬಂದಿಗೆ ತರುತ್ತೀ? ಈ ನಗರ ಅಂತರರಾಷ್ಟ್ರೀಯ ಮಟ್ಟಕ್ಕೆ ಹೋಗುತ್ತಿದೆ, ಈ ನಗರದ ಸರ್ವಾಗೀಂಣ ಅಭಿವೃದ್ಧಿ ಒಂದು ಕಡೆ ಎನ್ನುತ್ತೇವೆ, ಆದರೆ ಸರ್ವಾಂಗೀಣ ಅಭಿವೃದ್ಧಿಯನ್ನು ಮಾಡುವಾಗ ಕೆಲಸ ಕಾರ್ಯಗಳಿಗೆ ಮೂಲಭೂತವಾಗಿ ಬೇಕಾಗಿರುವ ಬಗ್ಗೆ ಯಾವ ರೀತಿಯಾಗಿ ಚಿಂತನೆಯನ್ನು ಮಾಡಿದ್ದೀರಿ, ಈ ಚಿಂತನೆಯ ಉದ್ದೇಶವೇನು? ಇದಕ್ಕೆ ತಾವೇನಾದರೂ ಗಮನಹರಿಸಿದ್ದೀರಾ? ಇದರ ಬಗ್ಗೆ ತಮ್ಮ ಚಿಂತನೆ ಏನು? 26 ಲಕ್ಷ ವಾಹನಗಳಿರುವಾಗ ಮತ್ತೆ ನೀವು ಮತ್ತಷ್ಟು ವಾಹನಗಳಿಗೆ ಲೈಸೆನ್ಸ್ ನೀಡುವುದರ ಜೊತೆಗೆ ಇದಕ್ಕೆ ಬೇಕಾಗಿರುವ ಮೂಲಭೂತ ಸೌಕರ್ಯ ಯಾವರೀತಿಯಾಗಿ ಬೇಕೆನ್ನುವ ನಿಮ್ಮ ಕಲ್ಪನೆಗೆ ಏನಾದರೂ ಚಾಲನೆಯನ್ನು ಕೊಟ್ಟು ಇದಕ್ಕೆ ಏನಾದರು ಕಾರ್ಯಕ್ರಮಗಳನ್ನು ಪ್ರಾರಂಭ ಮಾಡುತ್ತಿರಾ? ಆರ್ ಟಿ ಓ ನಲ್ಲಿ ರಿಜಿಸ್ಟ್ರೇಷನ್ ಆಗುವ ವಾಹನಗಳಿಂದ ಹಿಡಿದು ಬೆಂಗಳೂರು ನಗರದ ವಾಹನಗಳ ದಟ್ಟಣೆಯನ್ನು ನೋಡಿದಾಗ, ಇನ್ನು ಕೇವಲ 2–3 ವರ್ಷಗಳಲ್ಲಿ ಇದು ಏನಾಗಬಹುದು, ಇದರ ಪರಿಸ್ಥಿತಿ ಏನು, ಈ ಬಗ್ಗೆ ನಾವು ಯಾರಾದರು ಯೋಚನೆಯನ್ನು ಮಾಡಿದ್ದೀವಾ? ಆ ಬಗ್ಗೆ ತಾವು ದಯಮಾಡಿ ಚಿಂತನೆ ಮಾಡಬೇಕೆಂದು ಹೇಳುತ್ತೇನೆ. ಇವತ್ತು ಪ್ರಶ್ನೋತ್ತರ ವೇಳೆಯಲ್ಲಿ ಮಾತನಾಡುವಾಗ ಮಾನ್ಯ ಆರೋಗ್ಯ ಸಚಿವರು ನಾನು ಎಲ್ಲಾ ಆಸ್ಪತ್ರೆಗಳಿಗೆ ಬರುತ್ತೇನೆಂದರು. ಬೆಂಗಳೂರು ನಗರದಲ್ಲಿ ಯಾವುದಾದರೂ ದೊಡ್ಡ ಟ್ರ್ಯಾಜಿಡಿ ನಡೆದರೆ ಒಂದು ಸಾವಿರ ರೋಗಿಗಳನ್ನು ಒಂದು ಕಡೆ ಇಟ್ಟುಕೊಳ್ಳತಕ್ಕಂಥ ಪರಿಸ್ಥಿತಿ ಇಲ್ಲ. ವಿಕ್ಟೋರಿಯ

ಆಸ್ಪತ್ರೆಯಲ್ಲಿರುವ ಬರ್ನಿಂಗ್ ವಾರ್ಡ್‌ಅನ್ನು ಹೋಗಿ ತಾವು ನೋಡಬೇಕು. ಅಲ್ಲಿ ಯಾರು ಸಾಮಾನ್ಯರು ಇರುವುದಕ್ಕಾಗುವುದಿಲ್ಲ, 25–30% ಬರ್ನ್ ಆಗಿರುವವರು ಕೂಡ ಅವರು ಮತ್ತೆ ಜೀವಂತವಾಗಿ ವಾಪಸ್ ಬರುತ್ತೇವೆನ್ನುವ ಭರವಸೆ ಇಲ್ಲ. ಕರ್ನಾಟಕ ರಾಜ್ಯದ ರಾಜಧಾನಿಯಲ್ಲಿ ಈ ಬರ್ನಿಂಗ್‌ಗೆ ಕೇವಲ ಮೂರೇ ಮೂರು ಆಸ್ಪತ್ರೆಗಳಿಗೆ ಚಿಕಿತ್ಸೆ ಇರುವುದು. ಈ ಬಗ್ಗೆ ನಾವು ಯಾವರೀತಿಯಾಗಿ ಚಿಂತನೆ ಮಾಡಬೇಕಾಗಿದೆ? ಒಂದು ಆರೋಗ್ಯ ಇನ್ನೊಂದು ಕಡೆ ಜನಸಂದಣಿ ಮತ್ತೊಂದು ರಾಜ್ಯದ ರಾಜಧಾನಿಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕೆಂಬುವ ನಿಮ್ಮ ಕಲ್ಪನೆ. ಈ ಕಲ್ಪನೆಯಲ್ಲಿ ಬಹಳ ಪ್ರಮುಖವಾದುದು ಕುಡಿಯುವ ನೀರು, ಒಳಚರಂಡಿ, ರಸ್ತೆ, ಬೀದಿ ದೀಪ ಮತ್ತು ಆರೋಗ್ಯ. ಆರೋಗ್ಯವನ್ನು ನೋಡುವಾಗ ನಮ್ಮ ಹತ್ತಿರ ಎಲ್ಲಿದೆ? Mortury ಗಳಿಗೆ ಹೋದರೆ, ಒಂದು ದಿವಸಕ್ಕೆ 4–5 ಮಾರ್ಚರಿ ಮಾಡಬಹುದು, ಕೇವಲ ವಿಕ್ಟೋರಿಯ, ಬೋರಿಂಗ್, ಕೆ.ಸಿ.ಜನರಲ್ ಆಸ್ಪತ್ರೆಗಳಲ್ಲಿ ಮಾಡುತ್ತಿದ್ದಾರೆ, ಬೇರೆ ಬೇರೆ ಆಸ್ಪತ್ರೆಗಳಲ್ಲಿ ಇವತ್ತು ಮಾಡುತ್ತಿಲ್ಲ. ಜನರು ಎಲ್ಲೋ ಒಂದು ಕಡೆ ನೋವಿನ ಅನಾನುಕೂಲತೆಯಲ್ಲಿದ್ದಾರೆ, ದಯಮಾಡಿ ತಾವು ಈ ಬಗ್ಗೆ ಚಿಂತನೆಯನ್ನು ಮಾಡಬೇಕೆನ್ನುವ ಮಾತನ್ನು ಹೇಳುತ್ತೇನೆ. ಇದಕ್ಕೆ ನಿಮ್ಮದು ಯಾವ ರೀತಿಯ ಕಾಯಕಲ್ಪ? ಬೆಂಗಳೂರನ್ನು ಸರ್ವಾಂಗೀಣ ಅಭಿವೃದ್ಧಿಯಲ್ಲಿ ಎಲ್ಲಿ ಕೊಂಡೊಯ್ಯುವುದಕ್ಕೆ ಸಾಧ್ಯವಿದೆ, ನೀವು ಕೊಂಡುಯ್ಯಬೇಕಾದರೆ ಏನೇನು ಮಾನದಂಡಗಳನ್ನು ಅನುಸರಿಸಬೇಕು, ಈ ಮಾನದಂಡವನ್ನು ಮಾಡುವುದಕ್ಕೆ ನಿಮ್ಮಲ್ಲಿ ಚಿಂತನೆ ಇದೆಯಾ, ಅದರ ಪರಿಕಲ್ಪನೆ ಏನೆಂಬುದನ್ನು ತಿಳಿಸಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಬೆಂಗಳೂರು ನಗರ ಬಹಳ ದೊಡ್ಡದಾಗಿ ಬೆಳೆಯುತ್ತಿರುವ ನಗರವಾಗಿದೆ. ವಿಶ್ವದ ಜನರ ಭಾವನೆಗಳಿಗೆ ಸ್ಪಂದಿಸುವ ನಗರವಾಗಿದೆ. ಆದರೆ ಬೆಂಗಳೂರು ನಗರದ ಸರ್ವಾಂಗೀಣ ಅಭಿವೃದ್ಧಿಗೆ 1800 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ, ಇದನ್ನು ಅಭಿವೃದ್ಧಿಪಡಿಸಲು 30,000 ಕೋಟಿ ರೂಪಾಯಿಗಳು ಬೇಕೆಂದು ಹೇಳುತ್ತಿದ್ದಾರೆ. ನಾನಾದರು ಸರ್ಕಾರವನ್ನು ಕೇಳಬಯಸುವುದೇನೆಂದರೆ, 1800 ಕೋಟಿ ರೂಪಾಯಿಗಳಂತೆ ತೆಗೆದುಕೊಂಡು ಹೋದರೆ ಬೆಂಗಳೂರು ನಗರ ಅಭಿವೃದ್ಧಿ 18–20 ವರ್ಷಗಳಾದರು ಆಗುವುದಿಲ್ಲ. ಎರಡು ತಿಂಗಳಲ್ಲಿ ಬಂದು ಎಲ್ಲವನ್ನು ಮಾಡಿ ಎನ್ನುವ ಭಾವನೆ ಕೂಡ ನನ್ನದಲ್ಲ. ಎಲ್ಲೋ ಒಂದು ಕಡೆ ಈ ನಗರದಲ್ಲಿರುವ ಮೂಲಭೂತ ಸೌಕರ್ಯವನ್ನು ಯಾವ ರೀತಿಯಾಗಿ ಬದಲಾವಣೆ ಮಾಡಬೇಕು, ಅದರ ಭಾವನೆಗಳೇನು, ಅದಕ್ಕೆ ಯಾವ ರೀತಿಯಾಗಿ ಸ್ಪಂದಿಸಬೇಕೆನ್ನುವ ಚಿಂತನೆಯನ್ನು ತಾವು ಮಾಡಬೇಕಾಗುತ್ತದೆ.

ಈ ನಗರದ ಸರ್ವಾಂಗೀಣ ಅಭಿವೃದ್ಧಿ ಮಾಡಬೇಕಾದರೆ, ನಾಲ್ಕಾರು ವಿಚಾರಗಳನ್ನು ನಾವು ಗಮನಿಸಬೇಕಾಗುತ್ತದೆ. ಬೆಂಗಳೂರು ನಗರಕ್ಕೆ ಮುಖ್ಯವಾಗಿರುವುದು BBMP,BDA,BWSSB,BMRDA,KDYFCI,BMTC, ಕೊಳಚೆ ನಿರ್ಮೂಲನ ಮಂಡಳಿ ಮತ್ತು BESCOM ಈ ಐದಾರು ಇಲಾಖೆಗಳನ್ನು ಒಂದೇ ಕೊಡೆಯ ಅಡಿಯಲ್ಲಿ ತರುತ್ತೇವೆನ್ನುವ ಮಾತನ್ನು ಮುಖ್ಯಮಂತ್ರಿಗಳು ಹೇಳಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಒಂದು ಮಾತನ್ನು ಹೇಳಿದ್ದಾರೆ, ಅದೇನೆಂದರೆ, ಬೆಂಗಳೂರು ನಗರ ಭಾರತದ ನಂಬರ್ ಒನ್ ನಗರವಾಗುವುದರ ಜೊತೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಹಾನಗರವಾಗುವ ಶಕ್ತಿ ಇದೆ. ಅದನ್ನು ಸಾಧ್ಯವಾಗಿಸಲು ನಾವು ಹೊಸ ಹೊಸ ಮಾದರಿ ಯೋಜನೆಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಮೂಲಭೂತ ಸೌಕರ್ಯಗಳನ್ನು ಉತ್ತಮಪಡಿಸಬೇಕಾಗಿದೆ, ಸಾಮಾನ್ಯ ಸೌಕರ್ಯಗಳನ್ನು ಹೆಚ್ಚಿಸಬೇಕಾಗಿದೆ ಮತ್ತು ಉತ್ತಮ ಗುಣಮಟ್ಟದ ನಗರ ಜೀವನಕ್ಕೆ ಬೇಕಾದ ವಾತಾವರಣವನ್ನು ನಿರ್ಮಿಸಿ, ಒಟ್ಟಿನಲ್ಲಿ ಬೆಂಗಳೂರನ್ನು ಪುನರ್ ನಿರ್ಮಿಸಬೇಕಾಗಿದೆ. ಪುನರ್ ನಿರ್ಮಿಸಬೇಕೆಂಬುವ ಇಚ್ಛಾಶಕ್ತಿ ನಿಮಗಿದ್ದರೆ ಈ 5–6 ಇಲಾಖೆಗಳೇನಿವೆ ಇವನ್ನು ಒಟ್ಟಿಗೆ ತರುತ್ತೀರಿ. ಒಟ್ಟಿಗೆ ತಂದು ಆ ಇಲಾಖೆಗಳನ್ನು ತಾವು ಏನಾದರು ಕಂಟ್ರೋಲ್‌ಗೆ ತರುವ ತಮ್ಮ ಕಲ್ಪನೆ ಇದ್ರೆ ಮಾತ್ರ ಇದಾಗುತ್ತದೆ ವಿನಹ ಇಲ್ಲದಿದ್ದರೆ ಮಾಡುವುದಕ್ಕೆ ಸಾಧ್ಯವಿಲ್ಲ. [ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು] ಇವತ್ತು ನಮ್ಮ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆಸ್ತಿ ತೆರಿಗೆಗಳನ್ನು ನೋಂದಣಿ ಮಾಡುವುದಕ್ಕೆ ಹೊರಟು3–4 ವರ್ಷಗಳಾಯಿತು. 3 ವರ್ಷಗಳಿಂದ ಆಸ್ತಿ ತೆರಿಗೆಯನ್ನು ನೋಂದಣಿ ಮಾಡಲಿಲ್ಲ. ಸನ್ಮಾನ್ಯ ಶಿವಕುಮಾರ್ ಅವರು ಸಚಿವರಾಗಿದ್ದಾಗ ಮೌಖಿಕವಾಗಿ ಒಂದು ಆದೇಶವನ್ನು ಕೊಟ್ಟರು, ಅದೇನೆಂದರೆ, ರೆವಿನ್ಯೂ ಪ್ಯಾಕೆಟ್‌ನಲ್ಲಿರುವುದಕ್ಕೆ ಖಾತೆಗಳನ್ನು ಮಾಡಬೇಡಿ. ಇದರಿಂದ ರಿಜಿಸ್ಟ್ರೇಷನ್ ನಿಂತು ಹೋಯಿತು, ಅವರು ಮಾಡಿದ ಉದ್ದೇಶವೇನಿದೆ ಎಂದರೆ, ಕಾನೂನಿನ ಅಡಿಯಲ್ಲಿ ತನ್ನಿ ಎನ್ನುವ ಉದ್ದೇಶದಿಂದ ಮಾಡಿದರು. ಆದರೆ ಆ ಕಾನೂನು ಏನಿದೆ ಎಂದರೆ, ನಾನೆ ಸ್ವತಃ ಸಚಿವನಾಗಿದ್ದ ಸಂದರ್ಭದಲ್ಲಿ 38ಸಿ ಅನ್ನು ಮಾಡಿ ಯಾರ್ಯಾರು 25,30,40 ವರ್ಷಗಳಿಂದ ವಾಸ ಮಾಡುತ್ತಿದ್ದರೊ ಅವರೆಲ್ಲರಿಗೂ ಕೂಡ ಖಾತೆ ಕಂದಾಯಗಳನ್ನು ಮಾಡುವ ವ್ಯವಸ್ಥೆಯನ್ನು ತಂದೆವು. ಸನ್ಮಾನ್ಯ ದೇವೇಗೌಡರು ರಾಜ್ಯದ ಮುಖ್ಯಮಂತ್ರಿಗಳಾದಾಗ, ಸನ್ಮಾನ್ಯ ದಿ: ಪಟೇಲರು ಮುಖ್ಯಮಂತ್ರಿಗಳಾಗಿದ್ದಾಗ ನಾವು 50–100 ರೂಪಾಯಿಗಳ ಬೆಟರ್ಮೆಂಟ್ ಚಾರ್ಜ್‌ಅನ್ನು ಮಾಡಿ ಲಕ್ಷಾಂತರ ಮನೆಗಳಿಗೆ ಖಾತೆಗಳನ್ನು ಮಾಡಿದೆವು. ಅದಾದ ಮೇಲೆ ಅದು ಇವತ್ತಿನವರೆವಿಗೂ ನಿಂತು

ಹೋಗಿದೆ. 38ಸಿ ಅನ್ನು ಜಾರಿಗೆ ತನ್ನಿ ಎಂದು ನಾನು ಸನ್ಮಾನ್ಯ ಧರ್ಮಸಿಂಗ್ ಅವರಿಗೂ ಹೇಳಿದೆ, ತದನಂತರ ಬಂದ ಕುಮಾರ ಸ್ವಾಮಿಯವರಿಗೂ ಹೇಳಿದೆ, ಬೆಂಗಳೂರು ನಗರ ಸಚಿವರಾಗಿದ್ದ ಶ್ರೀ ಅಶೋಕ್ ಅವರಿಗೂ ಹೇಳಿದೆ. ರಾಷ್ಟ್ರಪತಿಗಳಿಂದ ಅಂಗೀಕಾರವಾದ ಈ ಬಿಲ್ ಅನ್ನು ಜಾರಿಗೆ ತರದೆ ಎಲ್ಲೋ ಒಂದು ಕಡೆ ನಿಲ್ಲಿಸಿ. ಬೆಂಗಳೂರು ನಗರವಲ್ಲ. ಪಟ್ಟಣ ಪ್ರದೇಶಗಳಲ್ಲಿರುವ ಈ ಅಕ್ರಮ ಕಟ್ಟಡಗಳ ನಿರ್ಮಾಣವೇನಿದೆ ಇವರಿಗೆಲ್ಲಾ ಮೋಕ್ಷ ಕೊಡಿ ಎಂದು ಹೇಳಿದೆ. ಅದನ್ನು ಇವತ್ತಿನವರೆವಿಗೂ ಜಾರಿಗೆ ತಂದಿಲ್ಲ, ತರುತ್ತಿಲ್ಲ, ಅದೊಂದನ್ನು ತಂದರೆ, 30,000 ಕೋಟಿ ರೂಪಾಯಿಗಳ ನಿಮ್ಮ ಯೋಜನೆ ಏನಿದೆ ಇದನ್ನು ನೀವು ಕೇವಲ 3-4 ವರ್ಷಗಳಲ್ಲಿ ಪೂರೈಸುವಂಥ ಚಿಂತನೆಯನ್ನು ಮಾಡಬೇಕಾಗುತ್ತದೆ. ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡುವುದೇನೆಂದರೆ, ಕೇವಲ ನೀವು ಪುಸ್ತಕದಲ್ಲಿ ಎಲ್ಲವನ್ನು ಮಾಡುತ್ತೇವೆಂದು ಹೇಳಿ ಏನನ್ನೂ ಮಾಡದೆ ಹೋದರೆ ಅದೆ ಹಳೆಯ ಕತೆಯಾಗುವುದು ಬೇಡ, ಮತ್ತೆ ಎಲ್ಲೊ ಒಂದು ಕಡೆ ಪುನರಾವರ್ತನೆಯಾಗುವ ವ್ಯವಸ್ಥೆ ಬೇಡ. ನಿಮಗೆ ಏನಾದರು ಒತ್ತನ್ನು ಕೊಡುತ್ತೇವೆನ್ನುವ ಭಾವನೆ ಇದ್ದರೆ, ಆ ಒತ್ತನ್ನು ನೀಡುವ ಕೆಲಸವನ್ನು ತಾವು ಮಾಡಬೇಕೆಂದು ಹೇಳುತ್ತೇನೆ. ಜೀವರಾಜ್ ಅವರೆ ಇವತ್ತು ಬೆಂಗಳೂರು ನಗರದಲ್ಲಿ ಯಾರು 30X40 ಸೈಟನ್ನು ಯಾರು ಖರೀದಿ ಮಾಡಲು ಬರುತ್ತಿಲ್ಲ. 40X60 ಖರೀದಿಗೆ ಬರುತ್ತಿಲ್ಲ. ಯದ್ವಾತದ್ವಾ ಸ್ಟ್ಯಾಂಪ್ ವ್ಯಾಲ್ಯೂವನ್ನು ಒಂದೇ ಸಾರಿ 5 ಲಕ್ಷವಿದ್ದ ಸೈಟಿಗೆ 50 ಲಕ್ಷ ಜಾಸ್ತಿ ಮಾಡಿದರು. ಇದರಲ್ಲಿ ಯಾವ ರೀತಿಯಾಗಿ ಗಿಮಿಕ್ ಮಾಡಿದರೆಂದರೆ, ಇದರ ಆಡಳಿತವನ್ನು ಮಾಡುತ್ತೇವೆನ್ನುವ ವ್ಯವಸ್ಥೆ ಇದ್ದಂಥ ಸಂದರ್ಭದಲ್ಲಿ ಸಬ್-ರಿಜಿಸ್ಟ್ರಾರ್ ಅವರ ಕಚೇರಿಯಲ್ಲಿ ಈ ಆದೇಶ ಹೊರಬೀಳುವ 15 ದಿವಸಗಳ ಮುಂಚೆ ಒಂದು ವರ್ಷಕ್ಕೆ ಆಗುವಷ್ಟು ರಿಜಿಸ್ಟ್ರೇಷನ್ಸ್ ಆಗಿವೆ. ಬಡವರದು ಏನಾಗಿದೆ, 40X60ರ 50 ಲಕ್ಷ ರೂಪಾಯಿಗಳ ಒಂದು ಸೈಟನ್ನು ರಿಜಿಸ್ಟ್ರೇನ್ ಮಾಡಿಸಿಕೊಳ್ಳಬೇಕಾದರೆ, 22 ಲಕ್ಷ ರೂ. Indirect tax ಕಟ್ಟಬೇಕು. stamp value ಕೂಡ ಯದ್ವಾ ತದ್ವಾ ಮಾಡಿ ಬೆಂಗಳೂರು ನಗರ ಒಂದರಲ್ಲಿ ಸರ್ಕಾರಕ್ಕೆ ಬರಬೇಕಾದ ಕನಿಷ್ಟ ಒಂದೂವರೆ ಸಾವಿರ ಕೋಟಿ ರೂಪಾಯಿ ಇವತ್ತು ಬರದೆ ಇರುವಂತಹ ಸ್ಥಿತಿಯನ್ನು ನಿರ್ಮಾಣ ಮಾಡಿದ್ದೀರಿ. ಒಂದು ಒಂದೂವರೆ ಸಾವಿರ ರೂ. ಗೆ ಮಾರ್ಕೆಟ್ ವ್ಯಾಲ್ಯೂ ಸಿಗುತ್ತದೆ. ಇವರ Government value 3,000 ಇದೆ. ಯಾರಾದರೂ purchase ಮಾಡುತ್ತಿದ್ದಾರಾ? ರಿಜಿಸ್ಟ್ರೇಷನ್ ಮಾಡಿಸುತ್ತಿದ್ದಾರಾ? ಎಲ್ಲಾ ಗೊತ್ತಿದ್ದು ನೀವೇಕೆ ಸುಮ್ಮನೆ ಕುಳಿತಿದ್ದೀರಿ? ಇದನ್ನು ಏಕೆ ಮಾಡುವುದಕ್ಕೆ ಹೋಗಬಾರದು?

ಎಲ್ಲೋ ಒಂದು ಕಡೆ 30X40 ಒಂದು ಸೈಟ್ ತೆಗೆದುಕೊಂಡವನು ಶ್ರೀಮಂತನಾ? 30X40 ಸೈಟ್‌ಗೆ ಏನು ರೇಟ್ ಇತ್ತು ಎಂದು ನೀವು ತೆಗೆದು ನೋಡಿ. ಯಾವುದೋ ಜಯಮಹಲ್‌ನಲ್ಲಿಯೋ ಅಥವಾ ಇಂದಿರಾನಗರದಲ್ಲಿರೋ ರೇಟನ್ನು ತೆಗೆದುಕೊಂಡು ಹೊಗಿ ಮೂಡ್ಲುಪಾಳ್ಯ ಅಮರಜ್ಯೋತಿ ನಗರ ಬೇರೆ ಬೇರೆ ಭಾಗಗಳಲ್ಲಿರತಕ್ಕಂತಹ ಸಾಮಾನ್ಯರಿಗೆ ನೀವು ಹೊರ ಹಾಕಿದರೆ, ಎಲ್ಲಿಂದ ಸಾಧ್ಯವಿದೆ? ನೀವು ಏನು valuation fix ಮಾಡಿದ್ದೀರಿ ಅದು ಯಾವುದು ಕೊಟ್ಟಿರಿ ಗೊತ್ತಿಲ್ಲ. ಆ ಮಾಹಿತಿಯನ್ನು ತರಿಸಿ ಸಾಮಾನ್ಯರಿಗೆ ಆಗುವ 30X40 ರ ಸೈಟ್ ರಿಜಿಸ್ಟ್ರೇಷನ್ ಮಾಡಿದರೆ immediately ಮಾರನೇ ದಿನವೇ IT ಯವರು ಅವರ ಮನೆಗೆ ಹೋಗುತ್ತಾರೆ. 30x40ರಲ್ಲಿ ಮನೆ ಕಟ್ಟುವವನು ದೊಡ್ಡ ಕೋಟ್ಯಾಧಿಪತಿಯಾ? ಶ್ರೀಮಂತನಾ? ಆದರೆ ಈ ದರವನ್ನು ಜಾಸ್ತಿ ಮಾಡುವುದಕ್ಕಿಂತ ಮುಂಚಿತವಾಗಿ ಒಂದು ವರ್ಗ ವ್ಯವಸ್ಥಿತವಾಗಿ ಏನೆಲ್ಲಾ ರಿಜಿಸ್ಟ್ರೇಷನ್ ಮಾಡಿಸಿಕೊಂಡರು ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕಂತಹ ವಿಚಾರ. ಆದ್ದರಿಂದ ದಯಮಾಡಿ ಅದರ ಬಗ್ಗೆ ತಕ್ಷಣವೇ ಒಂದು ಕ್ರಮ ತೆಗೆದುಕೊಳ್ಳುವ ಕೆಲಸ ಆಗಬೇಕಾಗಿದೆ. ಬೆಂಗಳೂರು ನಗರ 240 ಚ.ಕಿ.ಮಿ. ನಿಂದ ಮಾಡಿದರು. ನಾವು ವಿಧಾನಸೌಧದ ಮೂರನೇ ಮಹಡಿಯಲ್ಲಿ ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ಕುಮಾರಸ್ವಾಮಿಯವರು ಇದ್ದರು. ಮಾನ್ಯ ಅಶೋಕ್‌ರವರು ಇದ್ದರು, ನಾವು ಬೆಂಗಳೂರು ನಗರದ ಶಾಸಕರು ಗಂಟೆಗಟ್ಟಲೆ ಕುಳಿತುಕೊಂಡು ನಾವು ವಿನಂತಿ ಮಾಡಿದೆವು. ಇದನ್ನು ಮಾಡುವುದಕ್ಕೆ ಮುಂಚೆ ಪೂರ್ವಭಾವಿಯಾಗಿ ಯೋಚನೆ ಮಾಡಿ, ಇದರ ಸಾದ್ಯಾಸಾದ್ಯತೆಗಳ ಬಗ್ಗೆ ಚಿಂತನೆ ಮಾಡಿ ಎಂದರೆ ಏನೂ ಮಾಡುವುದಕ್ಕೆ ಆಗದೆ ಅಕ್ರಮ ಸಕ್ರಮ ಮಾಡುತ್ತೇನೆಂದು ಹೇಳಿ ಬೆಳಗಾಂ ಅಧಿವೇಶನದಲ್ಲಿ ತೀರ್ಮಾನ ಮಾಡಿ, ಅಕ್ರಮವೂ ಇಲ್ಲ ಸಕ್ರಮವೂ ಇಲ್ಲ. ಅದಕ್ಕೆ ಸರಿಯಾದ ತಳ ಬುಡ ಇಲ್ಲ, ಅಪ್ಪ ಯಾರು, ಮಗ ಯಾರು, ತಂದೆ ಯಾರು ಮತ್ತು ತಾಯಿ ಯಾರು ಅನ್ನುವ ದೃಷ್ಟಿಕೋನ ಇಲ್ಲದೆ ಒಂದು ಕಾಯಿದೆಯನ್ನು ಮಾಡಿ ಇಡೀ ಬೆಂಗಳೂರು ನಗರದ ಜನರಿಗೆ ಒಂದು ರೀತಿಯ ಕಪ್ಪು ಚುಕ್ಕೆಯ ವ್ಯವಸ್ಥೆಯನ್ನು ತಂದರು. ಇವತ್ತು ಸಾರ್ವಜನಿಕರು ಸಾವಿರಾರು ಕೋಟಿ ರೂಪಾಯಿ ದುಡ್ಡು ಕಟ್ಟುವುದಕ್ಕೆ ತಯಾರಾಗಿದ್ದಾರೆ. ಆದರೆ ಅದನ್ನು ಪಡೆಯತಕ್ಕಂತಹ ವ್ಯವಸ್ಥೆ ಇಲ್ಲ. ಒಂದು ಉಪ ಸಮಿತಿಯನ್ನು ಮಾಡಿದ್ದಾರೆ. ಸನ್ಮಾನ್ಯ ಅಶೋಕ್ ರವರು ತಕ್ಷಣವೇ ಅದನ್ನು ಆದೇಶ ಮಾಡಿ ಅದನ್ನು ಮಾಡಬೇಕಾಗುತ್ತದೆ. ಇದು ಒಂದು. ಇನ್ನೊಂದು ಸನ್ಮಾನ್ಯ ಅಧ್ಯಕ್ಷರೆ,

**ಶ್ರೀ ಅಶೋಕ್:** ಸನ್ಮಾನ್ಯ ಡಿ.ಕೆ. ಶಿವಕುಮಾರ್ ರವರೇ ಅದನ್ನು ಮಾಡಿದ್ದು. ಮೂಲತಃ ಅದು ಮಂಡನೆ ಆಗಿದ್ದು 2002ರಲ್ಲಿ.

**ಶ್ರೀ ವಿ. ಸೋಮಣ್ಣ:** ನಾನು ಅಶೋಕ್ ರವರಿಗೆ ಹೇಳಲಿಲ್ಲ. ಸರ್ಕಾರದ ಸಚಿವರಿಗೆ ಹೇಳಿದೆ. ಸನ್ಮಾನ್ಯ ಡಿ.ಕೆ ಶಿವಕುಮಾರ್ ರವರ ಕಾಲದಲ್ಲಿ ಬಂದಿದೆಯೋ ಯಾರ ಕಾಲದಲ್ಲಿ ಬಂದಿದೆಯೋ ನನಗೆ ಗೊತ್ತಿಲ್ಲ.

**ಶ್ರೀ ಆರ್. ದಿನೇಶ್ ಗುಂಡೂರಾವ್:** ಕ್ಯಾಬಿನೆಟ್‌ನಲ್ಲಿ ಒಬ್ಬರು ಸಚಿವರು ಏನು ರೆಕಮಂಡೇಷನ್ ಮಾಡಿದರು ಅದನ್ನು ಮಾಡಿದ್ದರೆ ಚೆನ್ನಾಗಿತ್ತು. ಅದನ್ನು ಮಾಡಲಿಲ್ಲ. ನೀವು ತಂದಿರುವುದು ನೋಡಿದರೆ ಯಾರೂ ಕೂಡ ಅದನ್ನು implement ಮಾಡುವುದಕ್ಕೆ ಸಾಧ್ಯವಿಲ್ಲ.

**ಶ್ರೀ ವಿ. ಸೋಮಣ್ಣ:** ಮಾನ್ಯ ಅಧ್ಯಕ್ಷರೆ, ಒಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು, ಇದು, 60ರಿಂದ 70 ಲಕ್ಷ ಜನರಿಗೆ ಅನ್ವಯವಾಗತಕ್ಕಂತಹ ಒಂದು ಕಾಯಿದೆ. ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ, ಸನ್ಮಾನ್ಯ ಅಶೋಕ್ ರವರು ನಮ್ಮಷ್ಟೇ ಅನುಭವಸ್ಥರು. ನಮ್ಮಷ್ಟೇ ಬೆಂಗಳೂರು ನಗರದ ಬಗ್ಗೆ ಗೌರವ ಇರತಕ್ಕಂತಹವರು. ದಯವಿಟ್ಟು ಅದನ್ನು withdraw ಮಾಡುವುದು ದೊಡ್ಡದಲ್ಲ. ಅದನ್ನು withdraw ಮಾಡಿ.CVS ಪದ್ಧತಿ ಬಂದಿದೆ. Capital Value System ಇದು ಎಷ್ಟು ಜನರಿಗೆ ಗೊತ್ತಿದೆ. ಯಾರೋ ಅಧಿಕಾರಿಗಳು ಪುಸ್ತಕದ ಬದನೆಕಾಯಿ ಕೊಟ್ಟರು ಎಂದು ಅದನ್ನು ಸ್ವೀಕಾರ ಮಾಡಿದರೆ ನಾವು ಏನು ಮಾಡುವುದು? ಅದಕ್ಕೋಸ್ಕರ ಆ Capital Value System ಏನಿದೆ, Capital Value Systemನ ಅವಶ್ಯಕತೆ ಇಲ್ಲ. SAS ಎಂದು ಏನು ಮಾಡಿದ್ದಾರೆ, ಅದಕ್ಕೆ ಏನಾದರೂ ಮಾಡಿ strengthening ಮಾಡಿ. ಯಾವುದೇ ಕಾಯಿದೆ ಮಾಡುವಾಗ ಸಾಮಾನ್ಯರ ದೃಷ್ಟಿಕೋನದಲ್ಲಿ ಅದನ್ನು ಮೆಚ್ಚುವಂತೆ ಮಾಡಬೇಕು. ಸರ್ಕಾರ ಹರಿಯುವ ನೀರಾಗಬೇಕು. ಸರ್ಕಾರ ನಿಂತ ನೀರಾಗಬಾರದು. ಸರ್ಕಾರದ ದೃಷ್ಟಿಕೋನದಲ್ಲಿ ಸಾಮಾನ್ಯರು ಬಡವರು ಯಾವುದು ತುಳಿತಕ್ಕೆ ಒಳಪಟ್ಟಂತಹ ವ್ಯವಸ್ಥೆಗಳಿವೆ ಆ ವ್ಯವಸ್ಥೆಗೆ ಪೂರಕವಾದ ಒಂದು ಕಾಯಿದೆಯನ್ನು ತರಬೇಕಾಗುತ್ತದೆ. ಆ ನಿಟ್ಟಿನಲ್ಲಿ ಸರ್ಕಾರ ಗಂಭಿರವಾಗಿ ಚಿಂತನೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಿ, ಬೆಂಗಳೂರು ನಗರದಲ್ಲಿ 400 ಕೊಳಚೆ ಪ್ರದೇಶಗಳಿವೆ. ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರು ಮಾತನಾಡುತ್ತಾ ಹೇಳಿದರು, ಕೊಳಚೆ ಪ್ರದೇಶಗಳಲ್ಲಿರತಕ್ಕಂತಹವರು ಇನ್ನು ಎಷ್ಟು ವರ್ಷಗಳ ಕಾಲ ಇರಬೇಕೆಂದು ಹೇಳಿದರು.

ನಿಜ ಮಾನ್ಯ ಸಭಾಧ್ಯಕ್ಷರೆ, ಬನ್ನಿ ನನ್ನ ಕ್ಷೇತ್ರ 4–5 ಕೊಳಚೆ ಪ್ರದೇಶಗಳಿಗೆ ಕರೆದುಕೊಂಡು ಹೋಗುತ್ತೇನೆ. ಅವರಿಗೆ ಏನೇನು ಬೇಕು ಆ ಮೂಲಭೂತ ಸೌಕರ್ಯಗಳನ್ನು ಕೊಟ್ಟಿದ್ದೇವೆ. ಅವರಿಂದ ತೆರಿಗೆಯನ್ನು ಕೂಡ ಕಟ್ಟಿಸುತ್ತಿದ್ದೇವೆ. ಕುಡಿಯುವ ನೀರನ್ನೂ ಕೊಟ್ಟಿದ್ದೇವೆ. ಬೆಂಗಳೂರು ನಗರದ ಎಲ್ಲಾ ಶಾಸಕರಿಗೂ ಕೂಡ ಅದರ ಬಗ್ಗೆ ಕಲ್ಪನೆ ಇದೆ. ಆದರೆ ಪ್ರೈವೇಟ್‌ನಲ್ಲಿ ಇರತಕ್ಕಂಥದ್ದಕ್ಕೆ ಒಂದು ಕಾಯಿದೆಯನ್ನು ಮಾಡಬೇಕೆಂದು ಹೇಳುತ್ತಾ, ನಾವು ಏನೆಲ್ಲಾ ಪ್ರಯತ್ನ ಮಾಡಿದಿವಿ ಅದನ್ನು ಮಾಡುವುದಕ್ಕಾಗಲಿಲ್ಲ. ಮೊನ್ನೆ ಕೃಷ್ಣಯ್ಯಶೆಟ್ಟಿಯವರು ಇದನ್ನು ತಕ್ಷಣವೇ ಮಾಡಿ ಎಲ್ಲರಿಗೂ ಕಾಯಕಲ್ಪ ಕೊಡುತ್ತೇವೆಂದು ಹೇಳಿದ್ದಾರೆ. ನೀವು ಏನಾದರೂ ಅದನ್ನು ಮಾಡಿ. 30,40,50, ವರ್ಷಗಳಿಂದ ಆ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದಾರೆ. ಅವರಿಗೆ ನಾವು ಸವಲತ್ತುಗಳನ್ನು ಕೊಡುವುದಕ್ಕಾಗುತ್ತಿಲ್ಲ. ಚುನಾವಣೆ ಬಂದಾಗ ಒಂದೊಂದು ಸುಳ್ಳು ಹೇಳುತ್ತೇವೆ. ಆ ಜನರನ್ನು ವಂಚಿಸುತ್ತೇವೆ. ಅವರಿಂದ ಮತ ಪಡೆಯುತ್ತೇವೆ. ಆದರೆ ಅವರ ಜೀವನದ ವ್ಯವಸ್ಥೆ 20 ವರ್ಷಗಳ ಹಿಂದೆ ಏನಿತ್ತು ಅದೇ ಇದೆ. ಇದಕ್ಕೆ ಏನಾದರೂ ಮಾಡಿ ಅದಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯತಕ್ಕಂಥದ್ದು ಮಾಡಿ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡತಕ್ಕಂತಹ ಜಾಗಗಳಲ್ಲಿ ಬಹಳಷ್ಟು ಜನ ಸತ್ತು ಹೋಗಿದ್ದಾರೆ. ಆ ಜಾಗಗಳ ಓನರ್‌ಗಳು ಯಾರೆಂದು ಗೊತ್ತಿಲ್ಲ. ನಮ್ಮ ಅಧಿಕಾರಿಗಳು ಅವರನ್ನು ಸೃಷ್ಟಿ ಮಾಡುತ್ತಾರೆ. ನೀವು ಅವರಿಗೆ ಕೊಡಿ ಎಂದರೆ ಕೊಡುವುದಕ್ಕೆ ತಯಾರಿಲ್ಲ. ಆದರೆ ಸರ್ಕಾರದವರು ಒಂದೊಂದೇ ಕೊಳಚೆ ಪ್ರದೇಶಗಳನ್ನು ತೆಗೆದುಕೊಳ್ಳುತ್ತಾರೆ. ಸಾಂಕೇತಿಕವಾಗಿ ಎಲ್ಲವನ್ನು ಒಂದು ನಿಟ್ಟಿನಲ್ಲಿ ತರತಕ್ಕಂತಹ ಕೆಲಸವನ್ನು ಮಾಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇವತ್ತು ಕುಡಿಯುವ ನೀರು ನಮಗೆ ಇರತಕ್ಕಂಥದ್ದು ಕೇವಲ 7 ಟಿಎಮ್‌ಸಿ ನೀರು. ಇವತ್ತು ಟ್ರಿಬ್ಯುನಲ್ ಆದೇಶದ ಪ್ರಕಾರ ನಮಗೆ ಇರತಕ್ಕಂಥದ್ದು ಕೇವಲ 7 ಟಿಎಮ್‌ಸಿ ನೀರು. ಬೆಂಗಳೂರು ನಗರವನ್ನು ಬೃಹತ್ ಬೆಂಗಳೂರು ಮಾಡಿದ್ದೀರಿ. ಈ ಬೃಹತ್ ಬೆಂಗಳೂರಿಗೆ ಕುಡಿಯುವ ನೀರು ಒಂದು ಕಡೆ ಆದರೆ, ಒಳಚರಂಡಿ ಅವ್ಯವಸ್ಥೆ. ಮಳೆ ಬಂದರೆ ಬೆಳಿಗ್ಗೆ ಎದ್ದು ಓಡುತ್ತಿರಬೇಕು. ಇದಕ್ಕೆ ಏನಾದರೂ ಒಂದು ರೂಪ ಕೊಡಬೇಕೆಂದು ದಿಟ್ಟತನದಿಂದ ನಾವು ಇವತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ದಯಮಾಡಿ ತಿಪ್ಪಗೊಂಡನಹಳ್ಳಿಗೆ ಹೇಮಾವತಿ ನೀರನ್ನು ತರಬೇಕೆನ್ನುವ ಚಿಂತನೆ ಮಾಡಿ ನಾನು ಒಂದು ಆದೇಶ ಹೊರಡಿಸಿದ್ದರೆ ನಮ್ಮ ಅಧಿಕಾರಿಗಳು ಇದರ ಅವಶ್ಯಕತೆ ಇಲ್ಲವೆಂದು ಹೇಳಿದ್ದರು. ಅದೇ ಅಧಿಕಾರಿಗಳು ಇವತ್ತು ಇದರ ಅವಶ್ಯಕತೆ ಇದೆ ಎಂದು ಹೇಳುತ್ತಾರೆ.

ತಿಪ್ಪಗೊಂಡನಹಳ್ಳಿ ನೀರು ಮತ್ತು ಕುಮುದ್ವತಿ ನದಿ ನೀರು ತಿಪ್ಪಗೊಂಡನಹಳ್ಳಿಗೆ ಏನು ಬರುತ್ತಿದೆ ತಿಪ್ಪಗೊಂಡನಹಳ್ಳಿಯ ಕ್ಯಾಚ್‌ಮೆಂಟ್ ಏರಿಯಾ ಪೂರ್ತಿ ಬಿಡದಿಯ ಬಳಿ ಇರುವ ವೃಷಭಾವತಿ ನದಿಯು ಕೆರೆಯ ಮಟ್ಟಕ್ಕೆ ಹೋಗುತ್ತಿದೆ. ಇನ್ನು 5–10 ವರ್ಷಗಳಲ್ಲಿ ಬೆಂಗಳೂರು ನಗರಕ್ಕೆ ತಿಪ್ಪಗೊಂಡನಹಳ್ಳಿ ನೀರು ಕುಡಿಯುವ ಪರಿಸ್ಥಿತಿಯಲ್ಲಿ ಇರುವುದಿಲ್ಲ. ಏಕೆ ಕುಡಿಯುವ ಪರಿಸ್ಥಿತಿಯಲ್ಲಿ ಇಲ್ಲವೆಂದರೆ, ನೆಲಮಂಗಲದಿಂದ ಹಿಡಿದು ದೇವನಹಳ್ಳಿಯಿಂದ ಹಿಡಿದು ದೊಡ್ಡ ದೊಡ್ಡ ಕಾರ್ಖಾನೆಗಳು ಬಂದು ಆ ಕಾರ್ಖಾನೆಯ ಎಲ್ಲಾ ಗಲೀಜುಗಳನ್ನು ಕೂಡ ಆ ನದಿಗಳಿಗೆ ಬಿಡುತ್ತಿದ್ದಾರೆ. ಇದಕ್ಕೆ ಏನಾದರೂ ಒಂದು ರೂಪವನ್ನು ಕೊಡಬೇಕು ಈ ಕೆಲಸ ಪಲ್ಯೂಷನ್ ಬೋರ್ಡ್‌ನವರದ್ದು. Pollution Board ನವರು ನಿಷ್ಕ್ರಿಯರಾಗಿ ಕೋಟ್ಯಾಂತರ ರೂಪಾಯಿಗಳ ಹಣವನ್ನು ನುಂಗಿ ನೀರು ಕುಡಿಯುತ್ತಿದ್ದಾರೆ. ಸಾಮಾನ್ಯ ಜನರಿಗೆ ಕೊಡತಕ್ಕಂತಹ ನೀರಿನಲ್ಲಿ ಎಲ್ಲೋ ಒಂದು ಕಡೆ ವಿಷವನ್ನು ಬೆರೆಸತಕ್ಕಂಥಹ ಅವ್ಯವಸ್ಥೆಯನ್ನು ಸರಿಪಡಿಸತಕ್ಕಂಥದ್ದಕ್ಕೆ ಸರ್ಕಾರ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ನೀರಿನ ಬವಣೆಯನ್ನು ಸರಿಪಡಿಸತಕ್ಕಂಥದ್ದು ಒಂದು ಕಡೆ ಆದರೆ, ಮತ್ತೊಂದು ಕಡೆ ಐದಾರು ಬಡಾವಣೆಗಳನ್ನು ನಾವು ತೆಗೆದುಕೊಂಡು 50.000 60,000 ಸೈಟುಗಳನ್ನು ಮಾಡುತ್ತೇವೆಂದು ಹಿಂದೆ ಇದ್ದ ಸರ್ಕಾರ ತೀರ್ಮಾನ ಮಾಡಿತ್ತು. ಬಯೋ ಟೆಕ್ನಾಲಜಿಯನ್ನು ಬೆಂಗಳೂರಿಗೆ ತರುತ್ತೇವೆ, ಬೆಂಗಳೂರಿನಲ್ಲಿ ಎಲ್ಲಿದೆ ಜಾಗ? ಬೆಂಗಳೂರಿನ ಜನ ಎಲ್ಲಿ ವಾಸ ಮಾಡಬೇಕು? 50 ಅಡಿ, 20ಅಡಿ ರಸ್ತೆಗಳಿವೆ. ಬೆಂಗಳೂರು ನಗರದಲ್ಲಿ 100 ಅಡಿಯ 8–10 ರಸ್ತೆಗಳನ್ನು ಬಿಟ್ಟರೆ ಬೇರೆ ರಸ್ತೆಗಳು ಹಾಗಿಲ್ಲ. ಬೆಂಗಳೂರು ನಗರದ ಜನ ಸಂದಣಿ ಇನ್ನು ಐದು ವರ್ಷಗಳಲ್ಲಿ ಎಷ್ಟಾಗುತ್ತದೆ? 10 ವರ್ಷಗಳಲ್ಲಿ ಎಷ್ಟಾಗುತ್ತದೆ, 15 ವರ್ಷಗಳಲ್ಲಿ ಎಷ್ಟಾಗುತ್ತದೆ ಎಂದು ಯೋಚನೆ ಮಾಡಿದರೆ, ಕನಿಷ್ಟ ಇನ್ನು 20 ವರ್ಷಗಳಲ್ಲಿ ಒಂದೂವರೆ ಕೋಟಿ ಜನಸಂಖ್ಯೆ ಆಗುತ್ತದೆ. ಒಂದೂವರೆ ಕೋಟಿ ಜನಸಂಖ್ಯೆಗೆ ನಮ್ಮ infrastructure ಎಲ್ಲಿದೆ? ಬೃಹತ್ ಬೆಂಗಳೂರನ್ನು ಮಾಡಿ ನೀವು ಯಾವ ಕೂಪ ಮಂಡೂಕಕ್ಕೆ ಸಾಮಾನ್ಯ ಜನರನ್ನು ತಳ್ಳಬೇಕೆಂದು ಚಿಂತನೆ ಇದೆ? ಇದಕ್ಕೆ ಬೇಕಾದಂತಹ ಸವಲತ್ತುಗಳು ನಿಮ್ಮಲ್ಲಿ ಇದೆಯಾ? ಇದರ ಬಗ್ಗೆ ಕೂಡ ಮುಂದಾಲೋಚನೆ ಮಾಡಬೇಕೆನ್ನುವ ಮಾತನ್ನು ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಚೆ ಪಡುತ್ತೇನೆ. ಇವರು ದುಡ್ಡು ದುಡ್ಡು ಎಂದು ಹೇಳುತ್ತಾರೆ. ಬೆಂಗಳೂರು ನಗರದಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಮಾಡಬಹುದು. ಯಾವ ರೀತಿ 38 (ಸಿ) ಯನ್ನು ಮಾಡಿ ಅಕ್ರಮ ಸಕ್ರಮವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೃಹತ್

ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಜಲಮಂಡಲಿ, BMRDA ಸನ್ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. BMRDA ಎನ್ನತಕ್ಕಂತಹ ಒಂದು ಇಲಾಖೆ ಎಲ್ಲಿ ಬೇಕು ಅಲ್ಲಿ ಲೈಸನ್ಸ್ ಕೊಡುತ್ತಾರೆ. ಅವರು ಲೇಔಟ್ ಮಾಡುವುದಕ್ಕೆ ಅನುಮತಿ ಕೊಡುತ್ತಾರೆ, ಅನುಮತಿ ಕೊಟ್ಟಂತಹ ಸಂದರ್ಭದಲ್ಲಿ 40 ರಿಂದ 45% ರಸ್ತೆ CA land ಉಳಿಸಿಕೊಳ್ಳಬೇಕೆಂದು ಇದೆ. ಎಲ್ಲಿಯಾದರೂ ಉಳಿಸಿದ್ದಾರಾ ಚೆಕ್ ಮಾಡಿಸಿ. ಇದಕ್ಕೆಲ್ಲಾ ಯಾರು ಬರುತ್ತಾರೆ? ಮುಂದಿನ ಪೀಳಿಗೆಗೆ ನಮ್ಮ ಕೊಡುಗೆಯಾದರೂ ಏನು? ಶಾಲಾ ಕಾಲೇಜುಗಳ ಅವ್ಯಸ್ಥೆಯೇನು, ಕುಡಿಯುವ ನೀರಿನ ಅವಸ್ಥೆಯೇನು, ವಿದ್ಯುಚ್ಛಕ್ತಿಯ ಅವಸ್ಥೆಯೇನು. ಅವಕ್ಕೆ ಬೇಕಾಗಿರತಕ್ಕಂಥ ಸವಲತ್ತುಗಳನ್ನು ಕೊಡತಕ್ಕಂಥದ್ದಕ್ಕೆ ಈ ಸಿ.ಎ. ಲ್ಯಾಂಡ್‌ಗಳ ಅವಶ್ಯಕತೆ ಬೇಡವೇ ಸ್ವಾಮಿ? ಇದರ ಬಗ್ಗೆಯೂ ಕೂಡ ಚಿಂತನೆಯನ್ನು ಮಾಡಬೇಕಾಗುತ್ತದೆ. ಇನ್ನು 1500 ವೈನ್ ಶಾಪ್‌ಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ನನಗನ್ನಿಸುತ್ತದೆ. ಬಸವರಾಜ ಬೊಮ್ಮಾಯಿ ಸಾಹೇಬರೆ, 1500 ಅನ್ನೂ ಬೆಂಗಳೂರಿಗೇ ಕೊಡುತ್ತಾರಂತೆ ಸ್ವಾಮಿ. ನಮ್ಮ ಗತಿ ಏನಾಗಬೇಕು? ನಾವು ಎಲ್ಲಿ ವಾಸ ಮಾಡಬೇಕು? ಈಗಾಗಲೇ ಇರುವ ವೈನ್‌ಶಾಪ್ ಗಳೆಲ್ಲಾ ಸಾರಾಯಿ ಅಂಗಡಿ ಆಗಿಬಿಟ್ಟಿದೆ ಸ್ವಾಮಿ. ಯಾವುದೂ ವೈನ್‌ಶಾಪ್ ಆಗಿ ಉಳಿದುಕೊಂಡಿಲ್ಲ. ಬೆಳಿಗ್ಗೆ 7.00 ಗಂಟೆಗೆ ಪ್ರಾರಂಭ ಮಾಡಿದರೆ ರಾತ್ರಿ 11.00 ಗಂಟೆ, 12.00 ಗಂಟೆಗೆ ಎಲ್ಲಾ ಮಾಮೂಲಿ ವ್ಯವಸ್ಥೆಗಳು, ಯಾರಾದರೂ ಜೋರಾಗಿ ಗಲಾಟೆ ಮಾಡಿದರೆ ಚುನಾವಣೆಯಲ್ಲಿ ಅವರದ್ದೂ ಒಂದು ಕೈಯನ್ನು ನಾವು ನೋಡಬೇಕಾಗಿದೆ. ಹೀಗಿರುವಾಗ ಇನ್ನೂ 1500 ಬಾರ್‌ಗಳು, ವೈನ್‌ಶಾಪ್‌ಗಳನ್ನು ನೀವು ಕೊಟ್ಟರೆ ನಮ್ಮ ಗತಿ ಏನು ಅಶೋಕ್‌ರವರೇ? ಎಲ್ಲಿ ನಾವು ವಾಸ ಮಾಡಬೇಕು?

**ಶ್ರೀ ಬಸವರಾಜ ಬೊಮ್ಮಾಯಿ:** ವೈನ್ ಶಾಪ್ ಹತ್ತಿರ ಬೆಳಿಗ್ಗೆ ನೀವು ಏಕೆ ಹೋಗಿದ್ದೀರಿ? ನಿಮಗೂ ಅದಕ್ಕೂ ಸಂಬಂಧವೇ ಇಲ್ಲ.

**ಶ್ರೀ ವಿ. ಸೋಮಣ್ಣ:-** ನಾನು ಒಳಗೆ ಹೋಗಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ನೀವು ಒಳಗೆ ಹೋಗದೆ ನಿಮಗೆ ಹೇಗೆ ಗೊತ್ತಾಗುತ್ತದೆ? ನಿಮಗೂ ಅದಕ್ಕೂ ಏನು ಸಂಬಂಧ?

**ಶ್ರೀ ವಿ. ಸೋಮಣ್ಣ:-** ನಿಮ್ಮಂಥವರ ಜೊತೆಯಲ್ಲಿ ಕುಳಿತುಕೊಳ್ಳುತ್ತೇವಲ್ಲ.

1500 ಸಾರಾಯಿ ಅಂಗಡಿಗಳು ಇದ್ದವು. ಇವೊತ್ತು ಇವೆಲ್ಲಾ ಚಿಕ್ಕದಾಗಿ ಏಕ್‌ದಂ ಒಂದೇ ಒಂದು ಸಾರಿ ನೀವು 1500 ವೈನ್‌ಶಾಪ್‌ಗಳನ್ನು ತೆರೆಯುತ್ತೇವೆ. ಎಂದರೆ ಸಿ.ಟಿ. ರವಿಯವರೆ, ಗ್ರಹಚಾರ ನಾನೂ ಚಿಕ್ಕಮಗಳೂರಿಗೆ ಬರಬೇಕಾಗುತ್ತದೆ. ಕಷ್ಟವಾಗುತ್ತದೆ. ಜನಸಾಮಾನ್ಯರಿಗೆ ಅದರಲ್ಲಿಯೂ ವಿಶೇಷವಾಗಿ ಬಡವರಿಗೆ ಇದರ ಹೊಡೆತ ಬೀಳುತ್ತದೆ. ದಯಮಾಡಿ ವೈನ್‌ಶಾಪ್‌ಗಳನ್ನು ತೆರೆಯುವರದ ಬಗ್ಗೆ ಗಮನ ಹರಿಸುವುದು ಬೇಡ. ಸರ್ಕಾರ ಸಂಪನ್ಮೂಲವನ್ನು ಕ್ರೋಢೀಕರಣ ಮಾಡುವುದಕ್ಕೆ ಸಾಕಷ್ಟು ಬೇರೆ ಬೇರೆ ಇಲಾಖೆಗಳಿವೆ. ಅದನ್ನು ಸ್ವಲ್ಪ ಟೈಟ್ ಮಾಡಿ. ಕೇವಲ ದುಡ್ಡಿಗೋಸ್ಕರವಾಗಿ ಕಟ್ಟಾ ಸುಬ್ರಹ್ಮಣ್ಯನಾಯ್ಡು ರವರು ಇಂಥ ಒಂದು ತೀರ್ಮಾನವನ್ನು ಸರ್ಕಾರದ ಮುಖೇನ ಮಾಡಿ ಬೆಂಗಳೂರಿನಲ್ಲಿರುವ 65, 70 ಲಕ್ಷ ಜನರ ನೆಮ್ಮದಿಯನ್ನು ಹಾಳುಮಾಡಬೇಡಿ. ಏಕೆಂದರೆ ಈಗಾಗಲೇ ಸಾಕಷ್ಟು ಹದಗೆಟ್ಟಿದೆ. ಮತ್ತೆ ನೆಮ್ಮದಿ ಹಾಳುಮಾಡತಕ್ಕಂಥ ಒಂದು ಪ್ರಕ್ರಿಯೆ ಈಗ ಆಗಬಾರದು ಎನ್ನುವ ಮಾತನ್ನು ನಾನು ನಿಷ್ಠೂರವಾಗಿಯೇ ಹೇಳಬಯಸುತ್ತೇನೆ. ಇನ್ನು ಇವೊತ್ತು ಬಿ.ಪಿ.ಎಲ್ ಕಾರ್ಡ್‌ದೇ ಒಂದು ದೊಡ್ಡ ರೋಗವಾಗಿದೆ. ಅದರಲ್ಲಿಯೂ ವಿಶೇಷವಾಗಿ ಬೆಂಗಳೂರು ನಗರಕ್ಕೆ ನಾನು ಸಚಿವರಾದ ಸನ್ಮಾನ್ಯ ಹಾಲಪ್ಪನವರ ಹತ್ತಿರ ಮಾತನಾಡುತ್ತಾ ಹೇಳಿದೆ, ದಯಮಾಡಿ ಇದಕ್ಕೇನಾದರೂ ಒಂದು ರೂಪ ಕೊಡಿ ಎಂದೆ. ಈಗ ಬೆಂಗಳೂರು ನಗರದಲ್ಲಿ ಏನಾಗಿದೆಯೆಂದರೆ ಎರಡೂವರೆ, ಮೂರು ವರ್ಷವಾಯಿತು. ಬಿ.ಪಿ.ಎಲ್ ಕಾರ್ಡ್ ಕೊಡುತ್ತೇವೆ ಎಂದು ಹೇಳುತ್ತಾ ಮಹದೇವಪ್ರಸಾದ್ ಬಂದರು, ಅವರು ಹೋದರು. ನಂತರ ಕಾರ್‌ಜೋಳ್ ಬಂದರು, ಅವರೂ ಹೋದರು. ಈಗ ಕಾರ್‌ಜೋಳ್‌ರವರು ಬೇರೆ ಇಲಾಖೆಯಲ್ಲಿದ್ದಾರೆ. ಈಗ ಹಾಲಪ್ಪನವರು ಬಂದಿದ್ದಾರೆ. ನಮ್ಮನ್ನು ಬಡವರು ದಿನ ಬೈತಾರೆ ಸ್ವಾಮಿ. ಈ ಬಿ.ಪಿ.ಎಲ್, ಕಾರ್ಡ್ ನ್ನು ಸಾಮಾನ್ಯ ಬಡ ಜನರಿಗೆ ಕೊಟ್ಟರೆ ಅವರಿಗೆ ಇದರಿಂದ ಸಾಕಷ್ಟು ಅನುಕೂಲವಾಗುತ್ತದೆ. ಅವರು ಆಸ್ಪತ್ರೆಗಳಿಗೆ ಹೋದರೆ ಒಂದಷ್ಟು ಸವಲತ್ತು ಸಿಗುತ್ತದೆ. ಯಶಸ್ವಿನಿ ಯೋಜನೆ ಎಲ್ಲಿ ನಿಂತುಹೋಗಿದೆಯೋ ಗೊತ್ತಿಲ್ಲ.

**ಶ್ರೀ ಹಾಲಪ್ಪ**:- ಪರ್ಯಾಯ ಇದೆಯೆಲ್ಲಾ.

**ಶ್ರೀ ವಿ. ಸೋಮಣ್ಣ**:- ಪರ್ಯಾಯ ಏನೂ ಇಲ್ಲ. ಈಗ ಇರತಕ್ಕಂಥ ಸಿಸ್ಟಂ ಅನ್ನು ತೆಗೆದುಕೊಂಡು ಹೋಗಿ ಒಂದೇ ಕಂಪನಿಗೆ ನೀವು ಬರೆದುಕೊಟ್ಟುಬಿಟ್ಟಿದ್ದೀರಿ.

**ಶ್ರೀ ಗೋವಿಂದ ಎಂ. ಕಾರಜೋಳ:-** ಸೋಮಣ್ಣನವರೆ, ನಿಮಗೂ ಅದಕ್ಕೂ ಸಂಬಂಧವಿಲ್ಲದಿರುವಾಗ ನಿಮಗೇನು ಅಲ್ಲಿ ಕೆಲಸ?

**ಶ್ರೀ ವಿ. ಸೋಮಣ್ಣ:-** ಕಾರ್‌ಜೋಳ್‌ರವರೆ, ಆಗಾಗ್ಗೆ ಬಸವರಾಜ ಬೊಮ್ಮಾಯಿಯವರ ಜೊತೆಯಲ್ಲಿ ಕುಳಿತುಕೊಳ್ಳುತ್ತೇವಲ್ಲ, ಆಗ ನೋಡುತ್ತಿರುತ್ತೇವೆ. ಇವೊತ್ತು ನಮ್ಮ ಕಟ್ಟಾ ಸುಬ್ರಹ್ಮಣ್ಯನಾಯ್ಡುರವರು ಈಗ ಬಂದಿಲ್ಲ.

**ಶ್ರೀ ಬಸವರಾಜ ಬೊಮ್ಮಾಯಿ:-** ನೀವು ಯಾವಾಗಲೂ ಕೂಡ ಭಾವಿ ಮುಖ್ಯಮಂತ್ರಿಗಳ ಜೊತೆಯೇ ಕುಳಿತುಕೊಳ್ಳುವುದು.

**ಶ್ರೀ ಡಿ.ಕೆ ಶಿವಕುಮಾರ್:-** ಈಗ ಕಸ್ಟಮರ್ಸ್‌ಗಿಂತ ಕನ್ಸ್ಯೂಮರ್ಸ್ ಸ್ಟ್ರೆಂಥ್ ಜಾಸ್ತಿ. ಕುಡಿಯದಿರುವವರಿಗಿಂತ ಕುಡಿಯುವವರ ಸಂಖ್ಯೆ ಜಾಸ್ತಿ ಇರುವಾಗ ಒಬ್ಬ ಜನಪ್ರತಿನಿಧಿಯಾಗಿ ಯಾರು ಯಾರು ಕುಡಿಯುತ್ತಾರೆ, ಅವರ ಆರೋಗ್ಯ ಕ್ಷೇಮ ಏನು, ಹೈಜೀನಿಕ್ ಆಗಿದೆಯೆ, ಇವುಗಳ ಬಗ್ಗೆ ಜನಪ್ರತಿನಿಧಿಯಾಗಿ ಚಿಂತನೆ ಮಾಡಬೇಕು ತಾನೆ.

**ಅಧ್ಯಕ್ಷರು:-** ಇವೆಲ್ಲಾ ವಿಚಾರ ಮಾಡಬೇಕಾಗುತ್ತದೆ.

**ಶ್ರೀ ಬಸವರಾಜ ಬೊಮ್ಮಾಯಿ:-** ನಾನು ಹೇಳುತ್ತಿರುವುದು ಆ ಪ್ರಶ್ನೆಯಲ್ಲ. ಸೋಮಣ್ಣನವರು ಯಾವಾಗಲೂ ಭಾವಿ ಮುಖ್ಯಮಂತ್ರಿಗಳ ಜೊತೆ ಕುಳಿತುಕೊಂಡು ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡುತ್ತಿರುತ್ತಾರೆ. ಅದಕ್ಕಾಗಿ ನಾನು ಹೇಳಿದೆ.

**ಶ್ರೀ ವಿ. ಸೋಮಣ್ಣ:-** ಹೌದೌದು. ದಯಮಾಡಿ ಹೆಚ್ಚು ವೈನ್‌ಶಾಪ್‌ಗಳನ್ನು ಮಾಡಬೇಡಿ ಸ್ವಾಮಿ. ನೀವು ಯಾವುದೋ ಒಂದು ಸಂಪನ್ಮೂಲಕ್ಕಾಗಿ ಈ ರೀತಿ ಮಾಡುವುದರ ಬದಲು ನೀವು 38ಸಿ ಮಾಡಿ. ಅಕ್ರಮ-ಸಕ್ರಮ ಎಂದು ಕಾನೂನು ಮಾಡುತ್ತಿದ್ದೀರಿ ಅದನ್ನು ಸ್ವಲ್ಪ ಸಡಿಲಗೊಳಿಸಿ. ಸಿ.ವಿ.ಎಸ್. ಸಿಸ್ಟಂ ಅನ್ನು ತೆಗೆದುಹಾಕಿ. ಬೆಂಗಳೂರು ನಗರದಲ್ಲಿ ಎ.ಟಿ. ರಾಮಸ್ವಾಮಿ ಕಮಿಟಿ ವರದಿ ಬಂತು. ಮೂವತ್ತು ಸಾವಿರ, ನಲವತ್ತು ಸಾವಿರ ಕೋಟಿ ಬರುತ್ತದೆ ಎಂದು ಹೇಳಿ ಜೋರಾಗಿ ಬಿರುಗಾಳಿ ಎಬ್ಬಿಸಿತು ಮತ್ತೆ ಅದು ಹಾಗೆಯೇ ಹೋಯಿತು. ಯಾರ ಯಾರ ಮೇಲೆ ಯಾವ ಯಾವ ರೀತಿಯಾಗಿ ಗದಾಪ್ರಹಾರಗಳಾದವೋ ಗೊತ್ತಿಲ್ಲ. ಆದುದರಿಂದ ದಯಮಾಡಿ ಇದರ ಬಗ್ಗೆ ಮತ್ತೆ ರಿವ್ಯೂ ಮಾಡಿ ಏನಾದರೂ ಮಾಡಿ. ನೀವು ಒಮ್ಮೆಲೆ 1500 ವೈನ್‌ಶಾಪ್‌ಗಳನ್ನು ತೆರೆಯಲು ಅವಕಾಶ ಕೊಟ್ಟರೆ ನಮ್ಮ ಗತಿ ಏನಾಗಬೇಕು ಸ್ವಾಮಿ? ನಾವು ಎಲ್ಲಿಗೆ ಹೋಗೋಣ?

**ಶ್ರೀ ಮಹದೇವಪ್ರಸಾದ್:-** ಮಾನ್ಯ ಅಧ್ಯಕ್ಷರೆ, ಬಿ.ಪಿ,.ಎಲ್. ಕಾರ್ಡ್‌ನ್ನು ಪಡಿತರಕ್ಕೆ ಹೊರತುಪಡಿಸಿ ಇದನ್ನು ಯಾವುದಕ್ಕೂ ಬಳಸಬಾರದು ಎಂದು ಸರ್ಕಾರ ಸುತ್ತೋಲೆ ಕೊಟ್ಟಿದೆ. ಬೇರೆ ಬೇರೆ ವಿಚಾರಗಳಲ್ಲಿ ಈಗ ಮಾನದಂಡ ಯಾವುದು? ಲೋಯರ್ ಇನ್ಕಂ ಗ್ರೂಪ್‌ನವರಿಗೆ ಅನೇಕ ಸವಲತ್ತನ್ನು ಕೊಡುವಂಥ ಸಂದರ್ಭದಲ್ಲಿ ಅದಕ್ಕೆ ಬೇರೆ ಪರ್ಯಾಯ ಮಾರ್ಗ ಏನು ಎನ್ನುವುದರ ಬಗ್ಗೆ ಸರ್ಕಾರ ಇದುವರೆಗೆ ಏನನ್ನೂ ಹೇಳಿಲ್ಲ.

**ಶ್ರೀ ವಿ. ಸೋಮಣ್ಣ:-** ಮಾನ್ಯ ಅಧ್ಯಕ್ಷರೆ, ನಾನು ಏತಕ್ಕೆ ಈ ಮಾತನ್ನು ಹೇಳಿದೆನೆಂದರೆ,

**ಅಧ್ಯಕ್ಷರು:-** ಸೋಮಣ್ಣನವರೆ ಬೇಗ ಮುಗಿಸಿ. ಇನ್ನೂ ಎಷ್ಟು ಹೊತ್ತು ಮಾತನಾಡುತ್ತೀರಿ. ಏಕೆಂದರೆ ಮಾನ್ಯ ಸಚಿವರಾದ ಕೃಷ್ಣಯ್ಯಶೆಟ್ಟಿಯವರು ಮಧ್ಯಾಹ್ನ ಎಲ್ಲರಿಗೂ ಊಟಕ್ಕೆ ಆಹ್ವಾನ ಮಾಡಿದ್ದಾರೆ. ಅಲ್ಲಿಗೆ ಎಲ್ಲರೂ ಹೋಗಬೇಕು.

**ಶ್ರೀ ವಿ.ಸೋಮಣ್ಣ** : ಇನ್ನು 15 ನಿಮಿಷದಲ್ಲಿ ಮುಗಿಸುತ್ತೇನೆ ಅಧ್ಯಕ್ಷರೆ.

**ಅಧ್ಯಕ್ಷರು.** : ಇಲ್ಲ, ಇಲ್ಲ, ಇನ್ನು 5 ನಿಮಿಷದಲ್ಲಿ ಕನ್‌ಕ್ಲೂಡ್ ಮಾಡಿ.

**ಶ್ರೀ ವಿ. ಸೋಮಣ್ಣ :** ಆಯಿತು ಅಧ್ಯಕ್ಷರೆ, ಈ ಬಿ.ಪಿ.ಎಲ್. ಕಾರ್ಡ್ ಕೊಡುವಲ್ಲಿ ಸರ್ಕಾರದ್ದು ಭಾರಿ ಜವಾಬ್ದಾರಿ ಇದೆ. ಜನ ಸಾಮಾನ್ಯರಲ್ಲಿ ಸರ್ಕಾರದ ಬಗ್ಗೆ ನಂಬಿಕೆ ಇದೆ, ಒಂದು ರೀತಿಯ ಭಾವನೆ ಇದೆ. ಏನಪ್ಪಾ ನಂಬಿಕೆ ಎಂದರೆ ನಾವು ಬಿ.ಪಿ.ಎಲ್. ಕಾರ್ಡ್ ಪಡೆದರೆ ನಾವು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅದನ್ನು ಬಳಸಬಹುದು, ಜಯದೇವ ಆಸ್ಪತ್ರೆಯಲ್ಲಿ ಬಳಸಬಹುದು, ಬೇರೆ ಬೇರೆ ಕೆಲವು ಆಸ್ಪತ್ರೆಗಳಿಗೆ ಹೋಗಿ ಸವಲತ್ತನ್ನು ಪಡೆಯಬಹುದು. ಆ ಸವಲತ್ತುಗಳನ್ನು ಈ ಕಾರ್ಡ್‌ನವರಿಗೆ ಬೇಡವೆಂದು ಹೇಳಿ ನೀವು ಅದನ್ನು ವಿತ್‌ಡ್ರಾ ಮಾಡಿಕೊಳ್ಳುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬಾರದು. ದಯಮಾಡಿ ಈ ಬಗ್ಗೆ ಸರ್ಕಾರ ಪುನರ್-ಪರಿಶೀಲನೆಯನ್ನು ಮಾಡಬೇಕು. ಹಿಂದೆ ಯಾವ ರೀತಿ ನಡೆದುಕೊಂಡು ಬಂದಿದೆಯೊ ಅದೇ ರೀತಿ ನಡೆದುಕೊಂಡು ಹೋಗತಕ್ಕಂಥದ್ದಕ್ಕೆ ಚಿಂತನೆ ಮಾಡಬೇಕು. ಈ ಬಿ.ಪಿ.ಎಲ್. ಕಾರ್ಡ್ ಕೊಡತಕ್ಕಂಥ ಪಟ್ಟಣ ಪ್ರದೇಶದಲ್ಲಿ ಇದನ್ನು ಕೊಡದೇ ಏನು ಮೂರು ವರ್ಷದಿಂದ ನೆನಗುದಿಗೆ ಬಿದ್ದಿದೆ ಇದಕ್ಕೆ ಒಂದು ರೂಪ ಕೊಡಬೇಕೆಂದು ವಿನಂತಿಯನ್ನು ಮಾಡುತ್ತೇನೆ. ಇನ್ನು ಬೆಂಗಳೂರು ನಗರದ ಪೋಲಿಸ್ ಠಾಣೆಗಳಲ್ಲಿ ಕಾನೂನು ಸುವ್ಯವಸ್ಥೆಗಿಂತ ಹೆಚ್ಚಾಗಿ ಬಹತೇಕ ಠಾಣೆಗಳು ಬೀಳುತ್ತಾ ಇವೆ. ಅದನ್ನು ಏನಾದರೂ ಮಾಡಬೇಕೆಂದು ಸನ್ಮಾನ್ಯ ಮರಿಸ್ವಾಮಿಯವರು ಪೋಲಿಸ್

ಆಯುಕ್ತರಾಗಿದ್ದಾಗ ಕೆಲವು ಠಾಣೆಗಳಿಗೆ ಚೈತನ್ಯ ಕೊಟ್ಟರು, ಕಟ್ಟಿಸಿದರು. ಆದುದರಿಂದ ಇವುಗಳ ಬಗ್ಗೆ ಎಲ್ಲೋ ಒಂದು ಕಡೆ ರೂಪ ಕೊಡಬೇಕಾಗುತ್ತದೆ. ಇನ್ನು ಟ್ರಾಫಿಕ್ ಜಾಮ್ ಅಂತೂ ಬೆಂಗಳೂರು ನಗರದಲ್ಲಿ ಜಾಸ್ತಿಯಾಗಿದೆ. ಸರ್ಕಾರ ಈಗಾಗಲೇ 10 ಸಬ್-ವೇಗಳು, ಮೇಲ್ಸೇತುವೆಗಳನ್ನು ಮಾಡುವುದರ ಬಗ್ಗೆ ಹೇಳಿದೆ. ಇವೆಲ್ಲದರ ದೃಷ್ಟಿಯಿಂದ ಸಾಕಷ್ಟು ಒತ್ತನ್ನು, ಬೆಳಕನ್ನು ಚೆಲ್ಲಬೇಕಾಗುತ್ತದೆ. ಬೆಂಗಳೂರು ನಗರ ಅಂತರರಾಷ್ಟ್ರೀಯ ನಗರ. ಬೆಂಗಳೂರು ನಗರ ವಿಶ್ವಖ್ಯಾತಿಯ ನಗರ. ಬೆಂಗಳೂರಿನಲ್ಲಿರತಕ್ಕಂಥದ್ದು ಎರಡೇ ಪಾರ್ಕ್. ಒಂದು ಕಬ್ಬನ್ ಪಾರ್ಕ್, ಮತ್ತೊಂದು ಲಾಲ್‌ಬಾಗ್ ಮಾತ್ರ. ಇವಲ್ಲದೇ ಬೇರೆ ಏನೇನೂ ಇಲ್ಲ. ಇದಕ್ಕೆ ನಾವು ಯಾವ ರೀತಿ ಒತ್ತನ್ನು ಕೊಡಬೇಕು. ಈ ವಿಚಾರದಲ್ಲಿ ನಾವು ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಇಂದು ವೃಷಬಾವತಿ ಗಲೀಜುನೀರು, ಚಲಘಟ್ಟದ ಗಲೀಜು ನೀರು, ಇನ್ನೊಂದು ಕಡೆ ಹೆಬ್ಬಾಳದ ಗಲೀಜು ನೀರು ಇವೊತ್ತು ಬೆಂಗಳೂರು ನಗರದ ಜನರನ್ನು ತಲ್ಲಣಗೊಳಿಸುತ್ತಿದೆ. ದಯಾಮಾಡಿ ನಾನು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ. ಬೆಂಗಳೂರು ನಗರದ ಸರ್ವಾಂಗೀಣ ಅಭಿವೃದ್ಧಿಯಾಗಬೇಕಾದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಮೊದಲನೆಯ ಆದ್ಯತೆಯನ್ನು ನೀಡತಕ್ಕಂಥದ್ದು, ಇವೊತ್ತು ಬಿ.ಡಿ.ಎ., ಬಿ.ಬಿ.ಎಂ.ಪಿ., ಬಿ.ಎಂ.ಆರ್.ಡಿ.ಎ., ಬಿ.ಡಬ್ಲ್ಯೂ.ಎಸ್.ಎಸ್.ಬಿ., ಬಿ.ಎಂ.ಟಿ.ಸಿ., ಕೆ.ಯು.ಐ.ಎಫ್.ಡಿ.ಸಿಐ., ಸ್ಲಂ ಬೋರ್ಡ್ ಮತ್ತು ಪೋಲಿಸ್ ಇಲಾಖೆ, ಇವೆಲ್ಲವುಗಳನ್ನೂ ಕೂಡ ಒಂದೇ ಒಂದು ತಕ್ಕಡಿಗೆ, ಒಂದು ಅಂಬ್ರೆಲ್ಲಾದಡಿಯಲ್ಲಿ ತರತಕ್ಕಂಥ ಕೆಲಸವನ್ನು ಮಾಡಿ ಇವೆಲ್ಲವನ್ನೂ ಒಂದು ಮಾಡಬೇಕು. ಇದಕ್ಕೆ ಬೇಕಾಗಿರತಕ್ಕಂಥ ಸವಲತ್ತುಗಳನ್ನು ನೀಡತಕ್ಕಂಥದ್ದರ ಬಗ್ಗೆ ಕಾನೂನಿನಲ್ಲಿ ಏನು ಮಾಡಬಹುದು ಎಂಬುದರ ಬಗ್ಗೆ ಸರ್ಕಾರ ಹೇಳಬೇಕಾಗುತ್ತದೆ. ಪ್ರಣಾಳಿಕೆಯಲ್ಲಿ ಒಂದು ವಿಚಾರವನ್ನು ಹೇಳಿದ್ದಾರೆ. ಅದೇನೆಂದರೆ ಮೊದಲಿಗೆ ಬೆಂಗಳೂರು ನಗರಕ್ಕೆ ಒಳ್ಳೆಯ ನಾಯಕತ್ವದ ಅಗತ್ಯವಿದೆ. ಅದಕ್ಕಾಗಿ ನಾವು ಬೆಂಗಳೂರು ಮೇಯರ್‌ರವರನ್ನು ನೇರವಾಗಿ ಜನರಿಂದಲೇ ಆಯ್ಕೆಯಾಗುವ ವ್ಯವಸ್ಥೆಯನ್ನು ಮಾಡುತ್ತೇವೆ, ಮೇಯರ್ ಅವಧಿ ಐದು ವರ್ಷ ಎಂದು ಹೇಳಿದ್ದಾರೆ. ಇದನ್ನು ಕಾರ್ಯರೂಪಕ್ಕೆ ತರತಕ್ಕಂಥದ್ದು ಒಂದು ಕಡೆಯಾದರೆ, ಕಾನೂನಿನ ದೃಷ್ಟಿಯಲ್ಲಿ ಇವೊತ್ತಿನ ಮೇಯರ್‌ಗೆ ಒಂದು ಪೈಸೆಯದ್ದೂ ಕೂಡ ಅಧಿಕಾರಕ್ಕೆ ಕಾನೂನಿನಲ್ಲಿ ಅವಕಾಶಗಳಿಲ್ಲ. ನೀವು ಕೇವಲ ಮೇಯರ್‌ರವರನ್ನು ಐದು ವರ್ಷಕ್ಕೆ ಮಾಡುತ್ತೇವೆ ಎಂದು ಹೇಳಿ, ಆ ಮೇಯರ್‌ಗೆ ಏನೂ ಅವಕಾಶಗಳನ್ನು ಕೊಡದೆ, ಅಧಿಕಾರವನ್ನು ಕೊಡದೆ ಕೇವಲ ನಾಮಕಾವಸ್ಥೆಗೆ ಅವರನ್ನು ಐದು ವರ್ಷಕ್ಕೆ ನೀವು ಚುನಾವಣೆಯ ಮೂಖಾಂತರ ಇಡೀ ಬೆಂಗಳೂರು

ನಗರದ ಜನರು ಓಟನ್ನು ಹಾಕತಕ್ಕಂಥ ಕೆಲಸಕ್ಕೆ ಹೋಗುವ ಬಗ್ಗೆ ತಾವು ಯೋಚನೆಯನ್ನು ಮಾಡಬೇಕು. ಭಾರತೀಯ ಜನತಾ ಪಾರ್ಟಿ ಬೆಂಗಳೂರು ನಗರಕ್ಕೆ ಒಂದು ನೀಲಿ ನಕ್ಷೆಯನ್ನು ಕೊಟ್ಟಿದೆ. ಈ ನೀಲಿ ನಕಾಶೆಯನ್ನು ಸಾರ್ವಜನಿಕರಿಗೆ ಕೊಟ್ಟು 17 ಶಾಸಕರು ಇವೊತ್ತು ಕರ್ನಾಟಕದ ಇತಿಹಾಸದಲ್ಲಿ ಬೆಂಗಳೂರು ನಗರದಲ್ಲಿ ಎಂದೂ ಕೂಡ ಗೆದ್ದಿರಲಿಲ್ಲದಷ್ಟು ಶಾಸಕರನ್ನು ಪಡೆದಿರುವುದಕ್ಕೆ ನಿಮ್ಮ ನೀಲಿ ನಕಾಶೆ ನಿಮಗೆ ಶ್ರೀರಕ್ಷೆಯಾಗಿದೆಯೆಂದು ಕಾಣುತ್ತದೆ. ಆದರೆ ಈ ನೀಲಿ ನಕಾಶೆಯಲ್ಲಿರತಕ್ಕಂಥ ಬಹುತೇಕ ಜವಾಬ್ದಾರಿ ಕೆಲಸಗಳನ್ನು ತಾವು ಐದು ವರ್ಷದಲ್ಲಿ ಮಾಡುತ್ತೀರ? ಮಾಡತಕ್ಕಂಥ ಇನ್‌ಫ್ರಾಸ್ಟ್ರಕ್ಚರ್ ತಮಗೆ ಇದೆಯೆ? ಇದನ್ನು ಮಾಡತಕ್ಕಂಥ ಇಚ್ಛಾಶಕ್ತಿಗೆ ತಾವು ಯಾವ ರೀತಿ ಕಾರ್ಯೋನ್ಮುಖರಾಗುತ್ತೀರಿ? ಇದರ ಸಾಧ್ಯಾಸಾಧ್ಯತೆಗಳೇನು? ಇದರ ಚಿಂತನೆ ಏನು? ಈ ನಗರಕ್ಕೆ ಕೊಟ್ಟಿರತಕ್ಕಂಥ ನೀಲಿ ನಕಾಶೆ, ಈ ನಗರದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ತಮ್ಮ ಚಿಂತನೆ ಏನಿದೆ ಈ ಚಿಂತನೆಗೆ ತಾವು ಯಾವ ರೀತಿ ಸ್ಪಂದಿಸುತ್ತೀರಿ. ಒಂದೆರಡು ವಿಚಾರಗಳನ್ನು ಹೇಳುತ್ತೇನೆ ಅಶೋಕ್‌ರವರೆ. ನಗರದ ಬಳಕೆಗಾಗಿ ಪ್ರತ್ಯೇಕ ಎರಡು ಸಾವಿರ ಮೆಗಾವ್ಯಾಟ್ ವಿದ್ಯುತ್ ಘಟಕ ಸ್ಥಾಪನೆ ಮತ್ತು ನಿರಂತರ ವಿದ್ಯುತ್ ಸರಬರಾಜಿಗೆ ಕ್ರಮ ಕುಣಿಗಲ್‌ವರೆಗಿನ ಹರಿಯುವ ಹೆಚ್ಚು ಹೇಮಾವತಿ ನೀರನ್ನು ತಿಪ್ಪಗೊಂಡನಹಳ್ಳಿಗೆ ತರತಕ್ಕಂಥದ್ದು ನಗರದ ಕುಡಿಯುವ ನೀರಿನ ಅರ್ಕಾವತಿ ಮತ್ತು ಕುಮುದ್ವತಿ ನದಿಗಳನ್ನು ಪುನರ್‌ಜ್ಜೀವನಗೊಳಿಸತಕ್ಕಂಥದ್ದು. ಟಿ.ಡಿ.ಆರ್. ಯೋಜನೆಯಲ್ಲಿ ರಸ್ತೆಗಳನ್ನು ಅಗಲೀಕರಣಗೊಳಿಸತಕ್ಕಂಥದ್ದು,

**ಶ್ರೀ ವಿ ಸೋಮಣ್ಣ (ಮುಂದು):** ಮೇಲು ಸೇತುವೆ, under pass ಗಳನ್ನು ಮಾಡತಕ್ಕಂಥದ್ದು ಮೈಸೂರು ರಸ್ತೆ under pass ಮಾಡಿ ಎಂದು ಮತ್ತು ಅಶೋಕ್ ಸಹೇಬರು 4 ವರ್ಷದಿಂದ ಹೇಳುತ್ತಿದ್ದೇವೆ. ಆದರೆ ಅದು ಇನ್ನೂ ಬಂದಿಲ್ಲ. ಆಗಸ್ಟ್ 8ನೇ ತಾರೀಖು ಬಂದರೆ ನಾನು ನಾಗರಪಾಲಿಕೆ ಸದಸ್ಯನಾಗಿ, ಬೆಂಗಳೂರು ನಗರಕ್ಕೆ ಪ್ರತಿನಿಧಿಯಾಗಿ 25 ವರ್ಷವಾಯಿತು. ನಿಮ್ಮ ನೀಲಿ ನಕಾಶೆ ಏನಿದೆ, ಈ ನೀಲಿ ನಕಾಶೆಯಲ್ಲಿ ಶೇಕಡ 50 ಭಾಗದಷ್ಟು ನಗರದ ಜನರಿಗೆ ನೀವು fulfill ಮಾಡಿದರೆ ನಿಜವಾಗಲೂ ಕೂಡ ನಿಮ್ಮನ್ನು ಅಭಿನಂದಿಸುತ್ತೇನೆ. 17 ಜನ ಶಾಸಕರನ್ನು ಕೊಟ್ಟಿದ್ದಕ್ಕೂ ಕೂಡ ಸಾರ್ಥಕವಾಗುತ್ತದೆ. ಆದರೆ ಈ ನೀಲಿ ನಕಾಶೆಯಲ್ಲಿ ತಾವು ಏನು ಮಾಡಿದ್ದೀರಿ, ಇದನ್ನು ನೀವು fulfill ಮಾಡಬೇಕಾದರೆ ನಿಮಗೆ ಮೂರು term ಬೇಕಾಗುತ್ತದೆ, ಅಷ್ಟು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇದರ ಚಿಂತನೆಯನ್ನು ತಾವು ಮಾಡಬೇಕಾಗುತ್ತದೆ. ನಗರದ ವ್ಯವಸ್ಥೆಗೆ

ಪೂರಕವಾಗಿ ತಾವು ಏನು ಇವತ್ತು ಯೋಚನೆ ಮಾಡಿದ್ದೀರಿ, ಆ ಯೋಚನೆಗೆ ತಾವು ಚಿಂತನೆಯನ್ನು ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ಬೆಂಗಳೂರು ನಗರವನ್ನು ಇದೇ ರೀತಿ ಬೆಳೆಯುವುದಕ್ಕೆ ಬಿಟ್ಟರೆ... ಬೆಂಗಳೂರು ನಗರದಲ್ಲಿ ಸಾಕಷ್ಟು ಯೋಜನೆಗಳನ್ನು ಕೈಗೊಂಡು ಇಡೀ ವಿಶ್ವದ ಮೂರು ಲಕ್ಷ ಜನ IT: BT ಯಲ್ಲಿ ಕೆಲಸ ಮಾಡುವವರಿದ್ದಾರೆ. ಇದರ ಜೊತೆಗೆ ಇನ್ನೂ ಎರಡು ಲಕ್ಷ ಸೇರುತ್ತದೆ ಎಂದರೆ ಈ ನಗರದ ಜನಸಂದಣಿ ಏನಾಗಬಹುದು. ಇದನ್ನು ತಡೆದುಕೊಳ್ಳುವಂತಹ ಶಕ್ತಿ ಯಾರಿಗಿದೆ? ಯಾವ್ಯಾವ ಸ್ವಾಯತ್ತ ಸಂಸ್ಥೆಗಳು ಇವೆ, ಅವುಗಳು ತಮ್ಮ ಕರ್ತವ್ಯ ನಿರ್ವಹಣೆ ಮಾಡುತ್ತಿವೆಯೇ? ಇವೆಲ್ಲವುದರ ಬಗ್ಗೆ ಸಮಗ್ರವಾದ ಚಿಂತನೆಯನ್ನು ಮಾಡಿ. ತಾವು ಏನಾದರೂ ಮಾಡುವುದಾದರೆ, ಅದಕ್ಕೆ ನಮ್ಮ ಸಂಪೂರ್ಣವಾದ ಸಹಕಾರ ಇದೆ. ನಾನು 25 ವರ್ಷದಿಂದ ಈ ನಗರದ ವ್ಯವಸ್ಥೆಯಲ್ಲಿ ಎಲ್ಲೋ ಒಂದು ಕಡೆ ಭಾಗಿಯಾಗಿರುವುದರಿಂದ ನನಗನ್ನಿಸುತ್ತದೆ, ಈ ರಾಜ್ಯದ ಮುಖ್ಯಮಂತ್ರಿಗಳು, ಹಣಕಾಸಿನ ಸಚಿವರೂ ಹಾಗೂ ಬೆಂಗಳೂರು ನಗರದ ಅಭಿವೃದ್ಧಿ ಸಚಿವರೂ ಆದ ಮಾನ್ಯ ಯಡಿಯೂರಪ್ಪನವರು ಇಡೀ ರಾಜ್ಯಕ್ಕೆ ಎಷ್ಟು ಒತ್ತನ್ನು ಕೊಡುತ್ತಾರೆ, ಅಷ್ಟು ಒತ್ತನ್ನು ಈ ನಗರಕ್ಕೆ ಕೊಟ್ಟರೆ ಕೆಲವು ಸಾಧನೆಗಳನ್ನು ಮಾಡಬೇಕಾಗುತ್ತದೆ. ಬಾಕಿ ಎಲ್ಲಾ ಕೂಡ ಮಾಡುವುದಕ್ಕಾಗುವುದಿಲ್ಲ. ಆದರೆ ಮೇಯರ್ ಚುನಾವಣೆಯನ್ನು ಮಾಡುತ್ತೇವೆಂದು ಹೇಳಿ, ಅದಕ್ಕೆ ಕಾನೂನು ಚೌಕಟ್ಟಿನಲ್ಲಿ KMC ಯನ್ನು ಬದಲಾವಣೆ ಮಾಡದೇ ಹೋದರೆ, ಇದನ್ನು ಮಾಡಿ ಕೂಡ ಪ್ರಯೋಜನ ಇರುವುದಿಲ್ಲ. ಈ ಎಲ್ಲ ಅವ್ಯವಸ್ಥೆಗಳ ಜೊತೆಯಲ್ಲಿ ನಿಮ್ಮ ನೀಲಿ ನಕಾಶೆ, ನಿಮ್ಮ ಆಯವ್ಯಯ ಈ ರಾಜ್ಯಕ್ಕೆ ಪೂರಕವಾಗಿದೆಯಾ? ಮಾರಕವಾಗಿದೆಯಾ ಎಂದು ಚಿಂತನೆ ಮಾಡುವುದಕ್ಕೆ ಎಂಟು ತಿಂಗಳು ಮಾತ್ರ ಅವಧಿ ಇರುವಂತಾದ್ದು. ಈ ಎಂಟು ತಿಂಗಳಿನಲ್ಲಿ ನಿಮ್ಮ ಸಾಧನೆ ಏನು? ನಿಮ್ಮ ಬಳುವಳಿ ಏನು? ಈ ರಾಜ್ಯಕ್ಕೆ ನಿಮ್ಮ ಕೊಡುಗೆ ಏನು? ಯಾವ್ಯಾವುದನ್ನು ಕೊಟ್ಟಿದ್ದೀರಿ? ಯಾವುದನ್ನು ಕೊಟ್ಟಿಲ್ಲ. ಯಾವುದು ಕೇವಲ ಪುಸ್ತಕದಲ್ಲಿ ಇದೆ. ಇವೆಲ್ಲವೂ ಕೂಡ ಪುನರಾವರ್ತನೆಯಾಗದ ಹಾಗೆ ಚಿಂತನೆಯನ್ನು ಮಾಡುವಂತಹ ಕೆಲಸವಾದರೆ ಸರ್ಕಾರಕ್ಕೆ ಏನು ತೊಂದರೆಯಿಲ್ಲ. ಇದು ಆಗಲಿಲ್ಲವೆಂದರೆ ಎಲ್ಲೋ ಒಂದು ಕಡೆ ಹೋದೆಯಾ ಪುಟ್ಟ, ಬಂದೆಯಾ ಪುಟ್ಟ ಎನ್ನುವ ವ್ಯವಸ್ಥೆಗೆ ಅನುಗುಣವಾಗಿ ಕಾರ್ಯಕ್ರಮಗಳು ಆಗಬಾರದು ಎನ್ನುವ ಮಾತನ್ನು ಹೇಳಿ, ನಿಮ್ಮ ಸಮಗ್ರ ಚಿಂತನೆ ಏನಿದೆ, ಸಾಕಷ್ಟು ಜನರ ಆಶೀರ್ವಾದವನ್ನು ಪಡೆದಿದ್ದೀರಿ. ಇದನ್ನು ಮಾಡಬೇಕು ಎಂದರೆ ಮೊದಲು ಇದನ್ನು ಸರಿಮಾಡಿ. ಇದನ್ನು ಸರಿಮಾಡಿ ತದನಂತರ ಮತ್ತೆ ಮಾತನಾಡಿ. ಈ ಎಂಟು ತಿಂಗಳ ಆಯವ್ಯಯದಲ್ಲಿ

ಏನೇನಿದೆ, ಇವೆಲ್ಲವನ್ನೂ ಪೂರೈಸತಕ್ಕಂಥ ಕೆಲಸವನ್ನು ಮಾಡಬೇಕು ಎಂದು ತಮ್ಮ ಮೂಲಕ ನಾನು ಸರ್ಕಾರವನ್ನು ಆಗ್ರಹ ಪಡಿಸಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಸಚಿವರಾದ ಕೃಷ್ಣಯ್ಯ ಶೆಟ್ಟಿಯವರು ಎಲ್ಲರಿಗೂ ಭೋಜನ ಕೂಟವನ್ನು ಏರ್ಪಾಡು ಮಾಡಿದ್ದಾರೆ. ಎಲ್ಲರೂ ಅಲ್ಲಿ ಭಾಗವಹಿಸಬೇಕೆಂದು ಕೋರಿಕೆಯನ್ನು ಮಾಡಿ, ಈ ಸದನವನ್ನು ಮಧ್ಯಾಹ್ನ ಮೂರು ಗಂಟೆಗೆ ಸೇರುವಂತೆ ಮುಂದೂಡಲಾಗಿದೆ. (ಸದನವು ತನ್ನ ಕಲಾಪವನ್ನು 2.00 ಗಂಟೆ 03 ನಿಮಿಷಕ್ಕೆ ಮುಕ್ತಾಯಗೊಳಿಸಿ ಮತ್ತೆ 3.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು)

**(ಸದನವು ಪುನಃ ಮಧ್ಯಾಹ್ನ 3.15ಕ್ಕೆ ಸಮಾವೇಶಗೊಂಡಿತು)**

**(ಅಧ್ಯಕ್ಷರು ಪೀಠವನ್ನಲಂಕರಿಸಿದ್ದರು)**

**ಅಧ್ಯಕ್ಷರು:** ಸಿದ್ದು ಸವದಿಯವರೇ, ತಾವು ಆಯವ್ಯಯದ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಿ.

2008–09ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

**ಶ್ರೀ ಸಿದ್ದು ಸವದಿ (ತೇರದಾಳ)** : ಸನ್ಮಾನ್ಯ ಅಧ್ಯಕ್ಷರೇ, ಈ ಮುಂಗಡ ಪತ್ರದ ಬಗ್ಗೆ ಚರ್ಚಿಸಲು ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲಿಗೆ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ವಿಶೇಷವಾಗಿ, ಈ ವರ್ಷದ ಬಜೆಟ್ ಬಡವರ ಪರ, ರೈತರ ಪರ, ಈ ರಾಜ್ಯದ ಅಭಿವೃದ್ಧಿಯ ಪರ ಇದೆ ಎನ್ನುವಂಥ ಮಾತನ್ನು ಹೇಳುತ್ತಾ ಇದನ್ನು ಸ್ವಾಗತಿಸುತ್ತೇನೆ. ನಮ್ಮ ಮುಖ್ಯಮಂತ್ರಿಗಳು ಈ ರಾಜ್ಯದಲ್ಲಿ ನುಡಿದಂತೆ ನಡೆದ ಹೆಮ್ಮೆಯ ಮುಖ್ಯಮಂತ್ರಿ ಎಂದು ನಾನು ಶ್ಲಾಘಿಸುತ್ತೇನೆ. ಏಕೆಂದರೆ, ನಮ್ಮ ನಾಯಕರು ಪ್ರಣಾಳಿಕೆಯಲ್ಲಿ ಏನು ಹೇಳಿದರೋ ಅವುಗಳಲ್ಲಿ ಸುಮಾರು 90%ನಷ್ಟು ಆಶ್ವಾಸನೆಗಳನ್ನು ಈ ಬಜೆಟ್‌ನ ಮುಖಾಂತರ ಈಡೇರಿಸಲಾಗಿದೆ ಎನ್ನುವಂಥ ಮಾತನ್ನು ನಾನು ಬಹಳ ಸಂತೋಷದಿಂದ ಹೇಳಬಯಸುತ್ತೇನೆ.

**ಶ್ರೀ ಮಲ್ಲಿಕಾರ್ಜುನ ಖರ್ಗೆ:** ಯಾರ್ರೀ ನಿಮ್ಮ ನಾಯಕರು? ಎಲ್ಲ ಖಾಲಿ ಕುರ್ಚಿ ಇವೆ. Front bench ನಲ್ಲಿ ಒಬ್ಬರೂ ಇಲ್ಲ, second bench ನಲ್ಲಿ ಇಲ್ಲ, third bench ನಲ್ಲಿ ಇಲ್ಲ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:** Second bench ನಲ್ಲಿ ನಾನಿದ್ದೇನೆ.

**ಶ್ರೀ ಮಲ್ಲಿಕಾರ್ಜುನ ಖರ್ಗೆ:** ನೀವು ಒಬ್ಬರು ಅಲ್ಲಿ ಕೂತರೆ ಆಯಿತೇ?

**ಶ್ರೀ ಡಿ.ಕೆ. ಶಿವಕುಮಾರ್ :** ಮಾನ್ಯ ಅಧ್ಯಕ್ಷರೇ, ನೀವು ವಿರೋಧ ಪಕ್ಷದ ನಾಯಕರಾಗಿದ್ದಾಗ, ನಾವು 5–6 ಜನ ಮಂತ್ರಿಗಳು ಸದನದಲ್ಲಿದ್ದರೂ ಕೂಡ, ಏನು ಸರ್ಕಾರವಿದು? ಸರ್ಕಾರವಿದೆಯೋ, ಸತ್ತು ಹೋಗಿದೆಯೋ ಎಂದು ನೀವು ಗಲಾಟೆ ಮಾಡುತ್ತಿದ್ದಿರಿ, ಈಗ 3 ಜನ M.P. ಗಳು ಬದಲಾವಣೆ ಆದರು ಅಂದ ತಕ್ಷಣ ಈ ಪರಿಸ್ಥಿತಿಗೆ ಬಂದುಬಿಟ್ಟರೆ ಏನಾಗಬೇಕು?

**ಅಧ್ಯಕ್ಷರು:** ಜೀವರಾಜ್‌ರವರೇ, ಮಂತ್ರಿಗಳನ್ನು ಕರೆಸಿ

**ಶ್ರೀ ಡಿ.ಕೆ. ಶಿವಕುಮಾರ್ :** ಅವರು ಪಾರ್ಟಿ ಸಭೆ ಮಾಡುತ್ತಿದ್ದರೆ, ಮಾಡಿಸಿಕೊಳ್ಳಲಿ ಆದರೆ,...

**ಶ್ರೀ ಮಲ್ಲಿಕಾರ್ಜುನ ಖರ್ಗೆ:** ಅದೇ ಚಿಂತೆ ಹಚ್ಚಿಕೊಂಡು ಮನೆಯಲ್ಲಿ ಕುಳಿತರೆ ಏನೂ ಉಪಯೋಗವಿಲ್ಲ. ಇಲ್ಲಿಗೆ ಬರಬೇಕು, ಬಂದು ಇಲ್ಲಿ ಏನು ಹೇಳುತ್ತಾರೆ ಎನ್ನುವುದನ್ನು ಕೇಳಬೇಕು. ಅದನ್ನು ಬಿಟ್ಟು ಎಲ್ಲರೂ....

**ಶ್ರೀ ಡಿ.ಕೆ. ಶಿವಕುಮಾರ್ :** Adjourn ಮಾಡಿ ಅವರನ್ನು ಕರೆಸಿ. ಸರ್ಕಾರಕ್ಕೆ ಬೇರೆ ಏನು ಕೆಲಸವಿದೆ? ಸರ್ಕಾರ I.C.U. ನಲ್ಲಿದೆಯೇ?

**ಅಧ್ಯಕ್ಷರು:** ಐದು ನಿಮಿಷದಲ್ಲಿ ಬರುತ್ತಾರೆ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :** ನೋಡಿ ಇಂಧನ ಸಚಿವರು ಬಂದರು.

**ಶ್ರೀ ಡಿ.ಕೆ. ಶಿವಕುಮಾರ್ :** ಟಿ.ವಿ. ಯಲ್ಲಿ ನೋಡಿಬಿಟ್ಟು ಬರುತ್ತಿದ್ದಾರೆ.

**ಅಧ್ಯಕ್ಷರು :** ಡಿ.ಕೆ. ಶಿವಕುಮಾರ್‌ರವರ ಧ್ವನಿ ಅವರಿಗೆ ಕೇಳಿಸಿತು.

**ಶ್ರೀ ಡಿ.ಕೆ. ಶಿವಕುಮಾರ್ :** ಇನ್ನೈದು ನಿಮಿಷದಲ್ಲಿ ಬರಲಿಲ್ಲ ಎಂದರೆ ನೀವು adjourn ಮಾಡಬೇಕಾಗುತ್ತದೆ.

**ಶ್ರೀ ನೆ.ಲ.ನರೇಂದ್ರಬಾಬು :** ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರುಗಳು ಸದನದ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಏಕೆ ಅನಾಸಕ್ತಿ ವಹಿಸುತ್ತಿದ್ದಾರೆ? ನಾವು ಹೇಳತಕ್ಕಂಥ

ಅಂಶಗಳನ್ನು ಬರೆದುಕೊಂಡರೆ ಆಡಳಿತವನ್ನು ಚುರುಕುಗೊಳಿಸಲು ಸಹಾಯವಾಗುತ್ತದೆ ಮತ್ತು ಎಲ್ಲದಕ್ಕಿಂತ ಹೆಚ್ಚಾಗಿ, ಸಚಿವರು ಇರುತ್ತಾರೆ ಎಂದು ನಾವು ಬರುತ್ತೇವೆ. ತಾವು ದಯವಿಟ್ಟು ಸೂಚನೆ ಕೊಡಬೇಕು. ದಯವಿಟ್ಟು ಸಚಿವರುಗಳನ್ನು ಕರೆಸಿ.

**ಅಧ್ಯಕ್ಷರು :** ಸೂಚನೆ ಕೊಟ್ಟಿದ್ದೇನೆ Whip ಆದ ಜೀವರಾಜ್‌ರವರಿಗೆ ಎಲ್ಲ ಮಂತ್ರಿಗಳನ್ನು ಕರೆಸಿ ಎಂದು ಹೇಳಿದ್ದೇನೆ.

**ಶ್ರೀ ಸಿದ್ದು ಸವದಿ :** ನಮ್ಮ ಪ್ರಣಾಳಿಕೆಯಲ್ಲಿದ್ದಂಥ ಸುಮಾರು 90% ಆಶ್ವಾಸನೆಗಳನ್ನು ಈಡೇರಿಸಿದ ಸರ್ಕಾರವೆಂದರೆ, ಬಹುಶಃ ಇತಿಹಾಸದಲ್ಲಿ ಪ್ರಥಮವಾಗಿ, ಪ್ರಮಾಣವಚನ ಸ್ವೀಕರಿಸಿದ ಒಂದೆರಡು ತಿಂಗಳಲ್ಲಿ 90% ಅಶ್ವಾಸನೆಗಳನ್ನು ಈಡೇರಿಸಿದ ಸರ್ಕಾರ ಎಂದರೆ ಸನ್ಮಾನ್ಯ ಯಡಿಯೂರಪ್ಪನವರ ಸರ್ಕಾರ ಎನ್ನುವಂಥ ಮಾತನ್ನು ನಾನು ಹೇಳಬಯಸುತ್ತೇನೆ. ರೈತರಿಗೆ 10 ಹೆಚ್.ಪಿ. ರವರಿಗೆ ಉಚಿತ ವಿದ್ಯುತ್ supply ಮಾಡುವುದು ಇರಬಹುದು, ಸುಮಾರು 50 ಲಕ್ಷ ಕುಟುಂಬಗಳಿಗೆ, ಬೀಜ ಮತ್ತು ಗೊಬ್ಬರ ಸಹಾಯಧನ ಎಂದು ಒಂದು ಕುಟುಂಬಕ್ಕೆ ಒಂದು ಸಾವಿರ ರೂಪಾಯಿಗಳನ್ನು ಸಹಾಯಧನ ಕೊಡುವುದು ಇರಬಹುದು, ಹಾಲು ಉತ್ಪಾದಕರಿಗೆ 2 ರೂಪಾಯಿ ಸಹಾಯಧನ ಕೊಡುವುದು ಇರಬಹುದು, 3% ಬಡ್ಡಿದರದಲ್ಲಿ ಮೀನುಗಾರರಿಗೆ, ನೇಕಾರರಿಗೆ, ರೈತರಿಗೆ ಸಾಲ ಕೊಡುವುದು ಇರಬಹುದು, ಮಕ್ಕಳಲ್ಲಿ ಬೇಧಭಾವ ಹುಟ್ಟಿಸದೇ 8ನೇ ವಯಸ್ಸಿನ ಎಲ್ಲಾ ಮಕ್ಕಳಿಗೆ ಸೈಕಲ್ ಕೊಟ್ಟಿದ್ದು ಇರಬಹುದು, ನಂಜುಂಡಪ್ಪ ವರದಿಯ ಪ್ರಕಾರ 2,547 ಕೋಟಿ ರೂಪಾಯಿಗಳ ಅನುದಾನವನ್ನು ತೆಗೆದಿಟ್ಟಿದ್ದು ಇರಬಹುದು.

**ಸಿದ್ದು ಸವದಿ:** (ಮುಂದು)

ನನಗೆ ತಿಳಿದ ಮಟ್ಟಿಗೆ, ನಮ್ಮ ನಾಯಕರು ನುಡಿದಂತೆ ನಡೆದ ಧೀಮಂತ ಈ ರಾಜ್ಯದ ಮುಖ್ಯಮಂತ್ರಿಗಳೆಂದು ಹೇಳಬಯಸುತ್ತೇನೆ. ಆದರೆ, ಈ ರಾಜ್ಯದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದ ನಮ್ಮ ಭಾಗದಲ್ಲಿ ಕಬ್ಬು ಬೆಳೆದ ರೈತರು ಬಹಳ ಶೋಷನೆಗೊಳಪಟ್ಟ ಸಂಗತಿ ತಮಗೂ ಸಹ ಗೊತ್ತಿರಲಿಕ್ಕೆ ಸಾಕು. ಇಂಥ ಪರಿಸ್ಥಿತಿಯಲ್ಲಿ ಕಳೆದ ಒಂದು ವರ್ಷದಲ್ಲಿ ಕಬ್ಬು ಇಳುವರಿ ಹೆಚ್ಚಾಗಿದ್ದರಿಂದ ರೈತರನ್ನು ಇನ್ನಷ್ಟು ಶೋಷಣೆ ಮಾಡಲಿಕ್ಕೆ ಕಾರ್ಖಾನೆ ಮಾಲೀಕರು ಆ ಅವಕಾಶವನ್ನು ದುರುಪಯೋಗಪಡಿಸಿಕೊಂಡು ಸುಮಾರು ರೈತರಿಗೆ ಬೇಕಾಬಿಟ್ಟಿಯಾಗಿ ಬೆಲೆ ಕೊಟ್ಟು ಅಥವಾ ಬಂದಿರುವ ಕಬ್ಬನ್ನು ಅನಾಮತ್ತಾಗಿ ಕಟ್ ಮಾಡುವ, ತೂಕವನ್ನು ಕಟ್ ಮಾಡುವುದರ ಮುಖಾಂತರ ಕಾರ್ಖಾನೆಗೆ ತೆಗೆದುಕೊಂಡು

ಹೆಚ್ಚಿನ ಲಾಭವನ್ನು ಗಳಿಸಿದ್ದರೂ ಸಹ, 160 ರೂ. ಸಹಾಯಧನದ ಬಿಲ್ ಅನ್ನು ರೈತರಿಗೆ ಕೊಡಬೇಕೆನ್ನುವ ರಾಜ್ಯಪಾಲರ ಆಡಳಿತದಲ್ಲಿ ಆಗಿರುವ ಒಪ್ಪಂದದ ಪ್ರಕಾರ ಯಾವ ಕಾರ್ಖಾನೆಯವರೂ ಸಹಿತ ಇಲ್ಲಿಯವರೆಗೆ ಕೊಡದಿರುವ ಸಂಗತಿ ಬಹಳ ನೋವಿನದಾಗಿದೆ. ವಿಶೇಷವಾಗಿ, ಕಬ್ಬು ಬೆಳೆದ ರೈತರು ಬಹಳ ತೊಂದರೆಗೊಳಪಟ್ಟಿದ್ದಾರೆ. ಏನಾದರೂ ಮಾಡಿ ಕಾರ್ಖಾನೆಗಳವರ ಮೇಲೆ ಒತ್ತಡ ಹೇರಿ, 160 ರೂ. ಗಳನ್ನು ಕೊಡಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ವಿನಂತಿಸುತ್ತೇನೆ. ಮತ್ತೆ, ನನಗೆ ತಿಳಿದ ಮಟ್ಟಿಗೆ ಒಪ್ಪಂದದಂತೆ 160 ರೂ. ಕೊಡುವುದು ಕಾರ್ಖಾನೆಗಳಿಗೆ ಈ ಸಲವೇನು ತ್ರಾಸದಾಯಕವಾಗುವುದಿಲ್ಲ. ಏಕೆಂದರೆ, ಕಾರ್ಖಾನೆಗಳು ಪ್ರಾರಂಭವಾಗುವ ಹಂತದಲ್ಲಿ 1000 ರಿಂದ 1100 ರೂ. ಸಕ್ಕರೆ ಬೆಲೆ ಇತ್ತು. ಆದರೆ, ಪ್ರಾರಂಭವಾದ ನಂತರ ಇವತ್ತು ಸಕ್ಕರೆ ಬೆಲೆ 1500–1600 ರೂ. ವರೆಗೆ ಮುಕ್ತ ಮಾರುಕಟ್ಟೆಯಲ್ಲಿ ಬೆಲೆ ಇರುವುದರಿಂದ ಸುಮಾರು 400–500 ರೂ. ಸಕ್ಕರೆ ಬೆಲೆ ಜಾಸ್ತಿಯಾದಾಗ ಏಕೆ ರೈತರಿಗೆ ಬಿಲ್ ಕೊಡುವುದರಲ್ಲಿ ತಾರತಮ್ಯವೆಸಗಿದ್ದಾರೆನ್ನುವ ಮಾತನ್ನು ಹೇಳುತ್ತಾ, ಅವರನ್ನು ಇನ್ನೊಮ್ಮೆ ಸಭೆಗೆ ಕರೆದು, ಅಂಕಿ ಸಂಖ್ಯೆಗಳನ್ನು ತೆಗೆದುಕೊಂಡು, ಅವರಿಗೆ ತಕ್ಷಣ ನಮ್ಮ ರಾಜ್ಯದ ಕಬ್ಬು ಬೆಳೆಗಾರರಿಗೆ 160 ರೂ. ಗಳನ್ನು ಕೊಡಿಸುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಇನ್ನು, ನೇಕಾರರ ಬಗ್ಗೆ ಹೇಳುವುದಾದರೆ, ಕಳೆದ ಸಲ ನಮ್ಮ ಸಮ್ಮಿಶ್ರ ಸರ್ಕಾರದಲ್ಲಿ ಯಡಿಯೂರಪ್ಪನವರು ಹಣಕಾಸಿನ ಮಂತ್ರಿಗಳಾಗಿದ್ದಾಗ ಇತಿಹಾಸದಲ್ಲೆಂದೂ ಆಗಲಾರದಷ್ಟು ಸಹಾಯ ಸೌಲಭ್ಯವನ್ನು ನೇಕಾರರ ಸಮುದಾಯಕ್ಕೆ ಕೊಟ್ಟಿರುವುದು ಬಹಳ ಹೆಮ್ಮೆಯ ಸಂಗತಿ. ಏನಾದರೂ ನೆಮ್ಮದಿಯಿಂದ ನಿಟ್ಟುಸಿರು ಬಿಡುವ ಕೆಲಸವನ್ನು ನೇಕಾರರು ಯಾವಾಗಲಾದರೂ ಮಾಡಿದ್ದರೆ ಅದು ಯಡಿಯೂರಪ್ಪನವರ ಬಜೆಟ್‌ನ ಮುಖಾಂತರ ಅವರಿಗೆ ಕೊಟ್ಟಿರುವ ಸಹಾಯ ಸೌಲಭ್ಯವನ್ನು ಕಂಡು ಬಹಳ ಸಂತೋಷವಾಗಿದ್ದಾರೆ. ಇನ್ನೊಂದು ವಿಷಾದಕರ ಸಂಗತಿ ಏನೆಂದರೆ, ನೇಕಾರರ ಸಮುದಾಯದಲ್ಲಿ ಬಹಳಷ್ಟು ಬಡತನದಲ್ಲಿರುವ ನೇಕಾರರೆಂದರೆ ಕೈಮಗ್ಗ ನೇಕಾರರು ಅಥವಾ KCC ನೇಕಾರರು. ಸರ್ಕಾರದ ಸಹಾಯ ಸೌಲಭ್ಯ ಏನೇನು ಆಗಿದೆಯೋ ಅದು ವಿದ್ಯುತ್ತಿನ ಸಹಾಯಧನವಿರಬಹದು, ಬಡ್ಡಿಯ ಮನ್ನಾ ಇರಬಹುದು ಇವು ಯಾವ ಸೌಲಭ್ಯಗಳಿಂದ ಸಹ ಕೈಮಗ್ಗ ನೇಕಾರರಿಗೆ 10 ರೂ. ಸಹ ಲಾಭವಾಗಿಲ್ಲ. ಇದೇಕೆ ಈ ಪರಿಸ್ಥಿತಿಯಾಯಿತೆಂದರೆ, ಕೈ ಮಗ್ಗ ನೇಕಾರರು ಬಹಳ ಕಡು ಬಡತನದಲ್ಲಿ ಜೀವನ ಸಾಗಿಸುತ್ತಿರುವುದರಿಂದ

ಯಾವ ಬ್ಯಾಂಕ್, ಹಣಕಾಸಿನ ಸಂಸ್ಥೆ ಸಹ ಅಂಥ ಕಡುಬಡವರಿಗೆ ಒಂದು ಸಾವಿರ ರೂಪಾಯಿಯ ಸಾಲವನ್ನೂ ಸಹ ಕಡಲಿಕ್ಕೆ ಮುಂದೆ ಬರುವುದಿಲ್ಲ. ಅದಕ್ಕಾಗಿ, ಅನಿವಾರ್ಯ ಪರಿಸ್ಥಿತಿಯಲ್ಲಿ ಯಾರೂ ಕೊಡಲಾರದ ಕಾರಣಕ್ಕಾಗಿ ಕಷ್ಟದಲ್ಲೇ ಜೀವನ ನಡೆಸಿಕೊಂಡು ಬಂದ ಕೈ ಮಗ್ಗ ನೇಕಾರರಿಗೆ ಯಾವ ಸರ್ಕಾರದ ಸಾಲ ಸೌಲಭ್ಯಗಳೂ ಸಹಿತ ದೊರೆತಿಲ್ಲವೆನ್ನುವುದು ವಿಷಾದಕರ ಸಂಗತಿ ಎಂದು ಈ ಸದನದ ಮೂಲಕ ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದಕ್ಕಾಗಿ, ಈ ವರ್ಷದ ಯೋಜನೆಯಲ್ಲಿ ನಮ್ಮ ಬೇಡಿಕೆ ಇತ್ತು, ಆ ಕೈ ಮಗ್ಗ KCC ಯಲ್ಲಿ ನೇಯ್ಗೆ ಮಾಡುವ ನೇಕಾರರ 25 % ನೇಯ್ಗೆ ಕೂಲಿಯನ್ನು ಹೆಚ್ಚು ಮಾಡಬೇಕೆನ್ನುವ ಒತ್ತಾಯವನ್ನು ಮಾಡಿದ್ದು, ಪ್ರಪೋಸಲ್ ಅನ್ನು ಸರ್ಕಾರಕ್ಕೆ ಕಳೆದ ವರ್ಷ ಕೊಟ್ಟಿದ್ದೇವೆ. ಆದರೆ, ಕೇವಲ 10–15% ಮಾತ್ರ ಮಾಡಿದ್ದಾಗಿದೆ. ಇವತ್ತಿನ ಬೆಲೆ ಏರಿಕೆ ನಿಮಿತ್ತವಾಗಿ ಅದನ್ನು ಸುಮಾರು ಇನ್ನೂ 25% ವರೆಗೆ ಹೆಚ್ಚಿಗೆ ಮಾಡುವ ಮೂಲಕ ಆ ಬಡ ಕೈ ಮಗ್ಗ ನೇಕಾರರ ನೆರವಿಗೆ ಸರ್ಕಾರ ಬರಬೇಕೆನ್ನುವ ವಿನಂತಿಯನ್ನು ಮಾಡುತ್ತೇನೆ. ಎರಡನೆಯದಾಗಿ, ಅವರು ಗೃಹ ಸಾಲ Dutch scheme ನಲ್ಲಿ ಸುಮಾರು 15 ವರ್ಷಗಳ ಹಿಂದೆ ಆಶ್ರಯ ಮನೆಗೆ ಸಾಲ ತೆಗೆದೊಕೊಂಡಿದ್ದಾರೋ ಆ ಸಾಲವನ್ನು ಸುಮಾರು 15 ವರ್ಷಗಳು ತುಂಬಿದರೂ ಕೂಡ ಅವರು ಆ ಸಾಲದಿಂದ ಮುಕ್ತರಾಗುತ್ತಿಲ್ಲ. ಅದಕ್ಕಾಗಿ ಅವರ ನೆರವಿಗೆ ಸಲುವಾಗಿ Dutch scheme ನಲ್ಲಿ ಸಾಲ ಪಡೆದು ಮನೆ ಕಟ್ಟಿರುವ ಕೈ ಮಗ್ಗ ನೇಕಾರರಿಗೆ, KCC ನೇಕಾರರಿಗೆ ಆ ಸಾಲ ಮನ್ನಾ ಮಾಡುವ ಸಹಾಯಧವನ್ನು ಆ ಇಲಾಖೆಯ ಮುಖಾಂತರ ಆ ಬಡ ನೇಕಾರರಿಗೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಈ ಸೌಲಭ್ಯವನ್ನು ನೇಕಾರರಿಗೆ ಅವಶ್ಯಕವಾಗಿ ಮುಟ್ಟಿಸಬೇಕೆನ್ನುವ ಬೇಡಿಕೆಯನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿಸುತ್ತೇನೆ.

ಇನ್ನು, ಕಳೆದ ಸಲ ನೇಕಾರರಿಗೆ ಕೊಡಮಾಡಿರುವ 4% ಬಡ್ಡಿಗೆ ಸಾಲ ಕೊಡುವ ಯೋಜನೆಯು ರಾಜ್ಯದಲ್ಲಿ ವಿಶೇಷವಾಗಿ ಯಾವ ನೇಕಾರರಿರೂ ತಲುಪಿಲ್ಲ. ಅದು ಏನು ದೋಷವಾಗಿದೆಯೋ ಗೊತ್ತಿಲ್ಲ. ನೇಕಾರರಿಗೆ ಸಾಲ ಕೊಡುವ ವ್ಯವಸ್ಥೆಯೇ ಆಗಿಲ್ಲ. ನಮಗೆ ಸರ್ಕಾರಿ ಆದೇಶ ಬಂದಿಲ್ಲವೆನ್ನುವ ಆಪಾದನೆಯನ್ನು ಬ್ಯಾಂಕ್‌ಗಳು, ಸಂಘಸಂಸ್ಥೆಗಳು ಹೇಳುತ್ತಿವೆಯೇ ವಿನಃ ಆ ಆದೇಶ ಏನು ರೈತರಿಗೆ ಜಾರಿಯಾಗಿದೆಯೋ ಆ ನಿಟ್ಟಿನಲ್ಲಿ 4% ಬಡ್ಡಿಗೆ ಸಾಲ ಕೊಡುವ ಯೋಜನೆ ನೇಕಾರರಿಗೆ ತಲುಪಿಲ್ಲ. ಅದು ಎಲ್ಲಿ ಲೋಪವಾಗಿದೆ ಎನ್ನುವುದನ್ನು ಕಂಡುಹಿಡಿದು ಸರಿಪಡಿಸುವ ವ್ಯವಸ್ಥೆಯನ್ನು ತಕ್ಷಣವೇ ಸರ್ಕಾರ ಮಾಡಿದರೆ

ಆ ನೇಕಾರರಿಗೂ ಸಹ ಸರ್ಕಾರದ ಘೋಷಣೆಯಂತೆ ಸಾಲ ಸೌಲಭ್ಯವು, ಬಡ್ಡಿ ಸಹಾಯಧನ ದೊರಕಲಿಕ್ಕೆ ಸಾಧ್ಯವಾಗುತ್ತದೆ. ಅದಕ್ಕಾಗಿ ಈ ವಿಷಯದ ಬಗ್ಗೆ ಸರ್ಕಾರ ತೀಕ್ಷ್ಣವಾಗಿ ಕ್ರಮ ತೆಗೆದುಕೊಂಡು ಏನೇನು ನಾವು ಆಶ್ವಾಸನೆ ಕೊಟ್ಟಿದ್ದೆವೋ ಅಥವಾ ನಮ್ಮ ಯೋಜನೆಗಳನ್ನು ನಾವು ರಾಜ್ಯಕ್ಕೆ ಕೊಟ್ಟಿದ್ದೇವೋ, ನೇಕಾರರು, ಮೀನುಗಾರರಿಗೆ ಅವರಿಗೆ ನ್ಯಾಯಯುತವಾಗಿ ದೊರಕುವ ವ್ಯವಸ್ಥೆಯನ್ನು ಸಂಬಂಧಿಸಿದ ಬ್ಯಾಂಕ್, ಸಂಘ ಸಂಸ್ಥೆಗಳಿಗೆ ಆದೇಶ ಹೊರಡಿಸುವ ಮುಖಾಂತರ ನೇಕಾರರ ಸಹಾಯಕ್ಕೆ ಬರಬೇಕೆನ್ನುವ ವಿನಂತಿ ಮಾಡುತ್ತೇನೆ.

ಇನ್ನು ವಿಶೇಷವಾಗಿ, ನಮ್ಮ ಕ್ಷೇತ್ರದಲ್ಲಿ, ನಮ್ಮ ತಾಲ್ಲೂಕು ಬಹಳ ದೊಡ್ಡ ತಾಲ್ಲೂಕಾಗಿರುವುದರಿಂದ ಪುನರ್ ವಿಂಗಡಣೆಯಲ್ಲಿ ಎರಡು ಕ್ಷೇತ್ರ ನಿರ್ಮಾಣವಾಗಿದೆ. ನಮ್ಮ ತಾಲ್ಲೂಕಿನಲ್ಲಿರುವ ಪ್ರತಿಯೊಂದು ಹಳ್ಳಿಯೂ ಸಹ 5,000–10,000 ಜನಸಂಖ್ಯೆ ಇರುವ ದೊಡ್ಡ ಹಳ್ಳಿಗಳಾಗಿರುವುದರಿಂದ ಅಲ್ಲಿ ಶಿಕ್ಷಣದ ವ್ಯವಸ್ಥೆ ಬಹಳ ಕಡಿಮೆ ಇದೆ. ಇನ್ನೂ ಹತ್ತಾರು ಹಳ್ಳಿಗಳಲ್ಲಿ ಪ್ರೌಢಶಾಲೆಗಳ ಬೇಡಿಕೆ ಇದೆ. ಇನ್ನೂ ನಾಲ್ಕಾರು ಹಳ್ಳಿಗಳಲ್ಲಿ ಜೂನಿಯರ್ ಕಾಲೇಜುಗಳ ಬೇಡಿಕೆ ಇದೆ. ಈಗಾಗಲೇ ಹಿಂದೆ ಸರ್ಕಾರ ವಿಶೇಷವಾಗಿ ನಮ್ಮ ಸಮ್ಮಿಶ್ರ ಸರ್ಕಾರ, ಹಿಂದೆ ಕಾಂಗ್ರೆಸ್‌ನ ಸರ್ಕಾರ ನಮಗೇನೂ ಕೊಡಲಿಲ್ಲ. ನಮಗೆ ಬಹಳ ತಾರತಮ್ಯ ಮಾಡಿದ್ದಾರೆ. ಸುಮಾರು 2 ವರ್ಷಗಳ ಅವರ ಆಡಳಿತದಲ್ಲಿ ವಿರೋಧ ಪಕ್ಷದಲ್ಲಿದ್ದ ನನ್ನನ್ನೂ ಸೇರಿದಂತೆ ನಮ್ಮ ಶಾಸಕರಿಗೆ ಒಂದೂ ಪ್ರೌಢಶಾಲೆಯನ್ನು ಮಂಜೂರು ಮಾಡಲಿಲ್ಲ. ಒಂದೂ ಜೂನಿಯರ್ ಕಾಲೇಜ್ ಕೊಡಲಿಲ್ಲ. ಅವರೇನಾದರೂ ಮಂಜೂರು ಮಾಡಿದ್ದರೆ, ತಮ್ಮ ಶಾಸಕರು ಇರುವಲ್ಲಿಗೆ ಮಾಡಿದ್ದಾರೆಯೇ ವಿನಃ ಬೇರೆಯವರಿಗೆ ಶಿಕ್ಷಣದಲ್ಲಿ ತಾರತಮ್ಯವೆಸಗಿದರು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದಕ್ಕಾಗಿ ನಮ್ಮ ಸಮ್ಮಿಶ್ರ ಸರ್ಕಾರ ಬಂದ ನಂತರ ನಮ್ಮ ಯಡಿಯೂರಪ್ಪನವರು ವಿಶೇಷವಾಗಿ ನಮ್ಮ ನಮ್ಮ ಕ್ಷೇತ್ರಗಳಿಗೆ 5–6 ಪ್ರೌಢಶಾಲೆಗಳನ್ನು 2–3 ಜೂನಿಯರ್ ಕಾಲೇಜುಗಳನ್ನು ಮಂಜೂರು ಮಾಡಿದರು. ಇದು ಬಹಳ ಸಂತೋಷದ ಸಂಗತಿ. ಈಗಾಗಲೇ ಆ ವಿಷಯದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದ್ದರೂ ಸಹ ನಮ್ಮಲ್ಲಿನ್ನೂ ದೊಡ್ಡ ಪ್ರಮಾಣದ ಹಳ್ಳಿಗಳು ಉಳಿದು ಹೋಗಿರುವುದರಿಂದ, ಆ ಕಡೆಯಲ್ಲಿಯೂ ಪ್ರೌಢಶಾಲೆಗಳ ಕೊರತೆ ಇದೆ. ಅದಕ್ಕೆ ನಾನು ಸರ್ಕಾರಕ್ಕೆ ವಿನಂತಿಸುತ್ತೇನೆ, ಅಭಿವೃದ್ಧಿ ಕೆಲಸಗಳನ್ನು ಕಡಿಮೆ ಮಾಡಿ, ಏನಾದರೂ ಅಭಿವೃದ್ಧಿ ಕೆಲಸ ಕಡಿಮೆ ಮಾಡಿ, ನೀವು ರಸ್ತೆಗೆ ಕಡಿಮೆ ಹಣ ಕೊಡಿ, ಬೇರೆ ಬೇರೆ ಅಭಿವೃದ್ಧಿಗೆ ಹಣ ಕೊಡಿ, ಆದರೆ, ಶಿಕ್ಷಣಕ್ಕೆ

ಆದ್ಯತೆ ಕೊಡುವಲ್ಲಿ ನಾವು ವಿಫಲರಾಗಬಾರದು, ಏಕೆಂದರೆ, ವಿಶೇಷವಾಗಿ ಹಳ್ಳಿಯ ಮಕ್ಕಳು ಶಾಲೆಗೆ ಹೋಗಿ ಕಲಿಯುವುದೇ ಬಹಳ ದುರ್ಲಭ. ಅಂಥದ್ದರಲ್ಲಿ ಕಲಿಯುವ ಅಪೇಕ್ಷೆಯನ್ನಿಟ್ಟುಕೊಂಡಿರುವಂಥ ಮಕ್ಕಳಿಗೆ ನಾವು ಪೇಟೆಗೆ ಬಂದರೆ ಅಲ್ಲಿ ಕೂರಲಿಕ್ಕೆ ಒಂದು desk ಇಲ್ಲ, ರೂಂ ಸಾಲುವುದಿಲ್ಲ, ಅಲ್ಲಿ ಪ್ರವೇಶವನ್ನೇ ತೆಗೆದುಕೊಳ್ಳುವುದಿಲ್ಲ. ಈಗಾಗಲೇ ಭರ್ತಿಯಾಗಿದೆ, ನಿಮ್ಮನ್ನು admission ಮಾಡಿಕೊಳ್ಳುವುದಿಲ್ಲವೆನ್ನವ ಮಾತನ್ನು ಅಲ್ಲಿರುವ principal ಹೇಳುತ್ತಾರೆ. ಅದಕ್ಕಾಗಿ ನಮ್ಮ ವಿನಂತಿ ಇದೆ. ಆಯಾ ಕ್ಷೇತ್ರಗಳಲ್ಲಿ ಇನ್ನೂ ಎಷ್ಟು ಬೇಡಿಕೆ ಇವೆ, ಅದಕ್ಕೊಂದು ನಿಯಮ ಮಾಡಿ. 5000 ಜನಸಂಖ್ಯೆಗಿಂತ ಹೆಚ್ಚಿಗಿರುವ ಹಳ್ಳಿಗಳಲ್ಲಿ ಪ್ರೌಢಶಾಲೆಗಳನ್ನು ಕಡ್ಡಾಯವಾಗಿ ಪ್ರಾರಂಭಿಸಬೇಕೆನ್ನುವ ನಿಯಮಾವಳಿ ಮಾಡಿದರೆ ಆ ಬಡ ಹಳ್ಳಿಯ ರೈತರ ಮಕ್ಕಳಿಗೆ ಉನ್ನತ ಶಿಕ್ಷಣ ಕಲಿಯಲಿಕ್ಕೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ.

**ಶ್ರೀ ಸಿದ್ದು ಸವದಿ:** (ಮುಂದು)

ಅದಕ್ಕಾಗಿ ಯಾವುದೇ ಅಭಿವೃದ್ಧಿ ಕಡಿಮೆ ಮಾಡಿದರೂ ಸಹ ಶಿಕ್ಷಣಕ್ಕೆ ಆದ್ಯತೆ ಕೊಟ್ಟು ಪ್ರೌಢ ಶಾಲೆಗಳನ್ನು, ಜೂನಿಯರ್ ಕಾಲೇಜುಗಳನ್ನು ಪ್ರಾರಂಭ ಮಾಡಲಿಕ್ಕೆ ಸರ್ಕಾರ ಕ್ರಮ ತೆಗದುಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ವಿನಂತಿಯನ್ನು ಮಾಡಬಯಸುತ್ತೇನೆ. ಅದಲ್ಲದೆ, ಹಿಂದೆ ಕೊಟ್ಟಿರುವ ಸಾವಿರಾರು ಪ್ರೌಢ ಶಾಲೆಗಳಿಗೆ, ಜೂನಿಯರ್ ಕಾಲೇಜುಗಳಿಗೆ ಸಿಬ್ಬಂದಿ ಒದಗಿಸುವ ಕಾರ್ಯ ಇನ್ನೂ ನಡೆದಿಲ್ಲ. ಏಕೆಂದರೆ, ನಮ್ಮಲ್ಲಿ ಸಾಕಷ್ಟು ಪದವಿಪೂರ್ವ ಕಾಲೇಜುಗಳಲ್ಲಿ ಸಿಬ್ಬಂದಿ ಇಲ್ಲದ್ದಕ್ಕಾಗಿ ಅಲ್ಲಿಯ ಹಳ್ಳಿಯ ಮಕ್ಕಳು LC ಯನ್ನು ತೆಗೆದುಕೊಂಡು ಪಟ್ಟಣಕ್ಕೆ ವಲಸೆ ಹೋಗುವ ಸಂಗತಿಯನ್ನು ನಾವಿನ್ನೂ ಕಾಣುತ್ತಿದ್ದೇವೆ. ಅವರು ಪಟ್ಟಣಕ್ಕೆ ಹೂದಾಗಲೂ ಸಹ ಪ್ರವೇಶ ಸಿಗುವುದಿಲ್ಲ. ಒತ್ತಡವಿರುವುದರಿಂದ ನಾವು ಸರ್ಕಾರಕ್ಕೆ ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇವೆ. ಏನಾದರೂ ಮಾಡಿ ನೀವು ಮೊದಲು ಸಿಬ್ಬಂದಿ ತುಂಬವ ವ್ಯವಸ್ಥೆ ಮಾಡಬೇಕೆನ್ನುವ ಮಾತನ್ನು ಹೇಳಬಯಸುತ್ತೇನೆ. ನಮ್ಮ ಕ್ಷೇತ್ರದಲ್ಲಿ ತಿರುಗಾಡಲಾರದ ಪರಿಸ್ಥಿತಿ ನಮಗೆ ಬಂದೊದಗಿದೆ ನಾವೆಲ್ಲಿ ಹೋದರೂ ನಮ್ಮಲ್ಲಿ ಮಾಸ್ತರು ಇಲ್ಲ, ಶಿಕ್ಷರಿಲ್ಲ, ಕಾಲೇಜು ಇಲ್ಲ. ಕಾಲೇಜಿಗೆ ಕೀಲಿ ಹಾಕುವ ಸಂದರ್ಭ ಬಂದಿದೆ, ಅದಕ್ಕಾಗಿ ನಮಗೆ ಸಿಬ್ಬಂದಿ ಕೊಡಿ, DDPI, Commissioner ಗೆ phone ಮಾಡಿ ಎನ್ನುವ ಒತ್ತಡ ದಿನನಿತ್ಯ ಇರುವುದರಿಂದ ದಯವಿಟ್ಟು ಏನಾದರೂ ಮಾಡಿ ಬೇಗನೇ 15 ದಿವಸ 20 ದಿವಸ ಎನ್ನಬೇಡಿ ಈಗಾಗಲೇ school ಪ್ರಾರಂಭವಾಗಿ 2

ತಿಂಗಳಾಗಿದೆ, ಆದಷ್ಟು ಬೇಗನೆ ನೀವು Guest Lecturer ಅನ್ನಾದರೂ ತೆಗೆದುಕೊಳ್ಳಿ ಅಥವಾ ನೇಮಕಾತಿಯನ್ನಾದರೂ ಮಾಡಿ, ಆದಷ್ಟು ಬೇಗ ಆ ಕಾಲೇಜುಗಳಿಗೆ, ಪ್ರೌಢ ಶಾಲೆಗಳಿಗೆ ಸಿಬ್ಬಂದಿಗಳನ್ನೊದಗಿಸಬೇಕೆನ್ನುವ ವಿನಂತಿ ಮಾಡುತ್ತೇನೆ. ತಾಲ್ಲೂಕು ಪುನರ್‌ವಿಂಗಡಣಾ ಸಮಿತಿಯವರು ಹೊಸ ತಾಲ್ಲೂಕುಗಳನ್ನು ರಚನೆ ಮಾಡುತ್ತಾರೆ ಎನ್ನುವ ಸುದ್ದಿ ಬಂದಿದ್ದರಿಂದ ಮತ್ತು ತಾಲ್ಲೂಕಿನ guideline ಪ್ರಕಾರ ನಮ್ಮದೇನು ತೇರದಾಳ ಮತ ಕ್ಷೇತ್ರವಾಗಿದೆ, ತಾಲ್ಲೂಕಿನ ಪುನರ್‌ವಿಂಗಡಣೆ ನಿಯಮದ ಪ್ರಕಾರ ನೂರಕ್ಕೆ ನೂರರಷ್ಟು ಅದು ಹೊಸ ತಾಲ್ಲೂಕು ಆಗಲು ಯೋಗ್ಯವಿರುವುದರಿಂದ ನಮ್ಮ ತಾಲ್ಲೂಕನ್ನು ಮೊಲನೇ ಹಂತದಲ್ಲೇ ಘೋಷಣೆ ಮಾಡಬೇಕು. ತೇರದಾಳ ಮತ ಕ್ಷೇತ್ರದಲ್ಲಿ ಮೂರು ದೊಡ್ಡ ಪಟ್ಟಣಗಳಿವೆ ತೇರದಾಳ ಇರಬಹದು, ತೇರದಾಳ ಪುರಸಭೆ ಇರಬಹುದು, ರಬಕವಿ ಬನಹಟ್ಟಿ ನಗರಸಭೆ, ಮಹಾಲಿಂಗಪುರ್ ಪುರಸಭೆ, ಎಲ್ಲಿಯಾದರೂ ಸರಿ, ಆ ಮೂರು ನನ್ನ ಕ್ಷೇತ್ರದಲ್ಲಿಯೇ ಬರುವುದರಿಂದ ಎಲ್ಲಿಯಾದರೂ ನೀವು headquarter ಮಾಡಿದರೂ ನಮ್ಮ ಒಪ್ಪಿಗೆ ಇದೆ. ಆದರೆ, ಆ ತೇರದಾಳ ಮತಕ್ಷೇತ್ರಕ್ಕೊಂದು ತಾಲ್ಲೂಕನ್ನು ಏನು ಘೋಷಣೆ ಮಾಡುತ್ತೀರಿ, ಆ ಹಂತದಲ್ಲಿಯೇ ನಮ್ಮ ತಾಲ್ಲೂಕು ರಚನೆಯಾಗಬೇಕೆಂಬ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇನ್ನು, ಯಡಿಯೂರಪ್ಪನವರ cycle ಕೊಡುವ ಯೋಜನೆ ಬಗ್ಗೆ ಹೇಳುವುದಾದರೆ, ವಿಶೇಷವಾಗಿ ರಾಜ್ಯದ ತುಂಬ ಯಡಿಯೂರಪ್ಪನವರ cycle ಎನ್ನುವ ಹೆಸರೇ ಬಂದುಬಿಟ್ಟಿದೆ. ಅಷ್ಟೊಂದು ಜನಪ್ರಿಯ ಯೋಜನೆ ಇದು ಎಂದು ನಾನು ಹೆಮ್ಮೆಯಿಂದ ಅದನ್ನು ನಾನು ಸ್ವಾಗತ ಮಾಡುತ್ತೇನೆ. (ಗೊಂದಲ) ಇದನ್ನು ಯಾರೂ ಕುಮಾರಸ್ವಾಮಿಯವರ ಸೈಕಲ್ ಎಂದು ಕರೆಯುವುದಿಲ್ಲ. ಅವೆಲ್ಲ ಯಡಿಯೂರಪ್ಪನವರ ಕನಸಿನ ಹೊಸ ಯೋಜನೆಗಳು. ಅದಕ್ಕೆಲ್ಲ ನೀವು ಅಡ್ಡ ಬರಬೇಡಿ. (ಗೊಂದಲ)

**ಶ್ರೀ ಸಿ.ಟಿ. ರವಿ** : ಇದು ಬಿ.ಜೆ.ಪಿ. ಯಡಿಯೂರಪ್ಪನವರ ಬಜೆಟ್, ಮಠಮಂದಿರಗಳಿಗೆ ಕೊಟ್ಟಿದ್ದಾರೆ ಎಂದು ಹೇಳಿದವರು ನೀವೇ. ಹಾಗಾಗಿ, ಅದು ಯಡಿಯೂರಪ್ಪನವರ ಸೈಕಲ್. ಇಲ್ಲದಿದ್ದರೆ ನಿಮಗೂ ಪಾಲು ಸಿಗುತ್ತಿತ್ತು. ಇದು ಬಿ.ಜೆ.ಪಿ. ಬಜೆಟ್ ಎಂದು ನೀವೇ ಹೇಳಿದ್ದಲ್ಲವೇ? ಹಾಗಾಗಿ ಅದು ಬಿಜೆಪಿಯದು.

**ಶ್ರೀ ಬಿ.ಸಿ. ಪಾಟೀಲ್** : ಸೈಕಲ್ ನಲ್ಲಿ tube ಇದೆಯಾ, tubeless ಆಗಿದೆಯೇ ಎಂದು ನೋಡಿ. ಯಾವಾಗ puncture ಆಗುತ್ತದೋ ಗೊತ್ತಿಲ್ಲ.

**ಶ್ರೀ ಸಿ.ಟಿ. ರವಿ:** ಪಾಟೀಲ್‌ರವರೆ, ಈಗ ನೀವು ಪಕ್ಷಾಂತರ ಮಾಡಿದ್ದೀರಿ. ಹೊಗಳುವ ಹಾಗಿಲ್ಲ. ಅದು ಹಳೆಯ ಕಥೆಯಾಯಿತು. ನೀವು ಈಗ ಕಾಂಗ್ರೆಸ್‌ನಲ್ಲಿದ್ದೀರಿ ಎನ್ನುವುದನ್ನು ನೆನಪು ಮಾಡುತ್ತಿದ್ದೇನೆ.

**ಶ್ರೀ ಬಿ.ಸಿ. ಪಾಟೀಲ್:** ನಾನು ಪಕ್ಷಾಂತರ ಮಾಡಿಲ್ಲ. ನೀವು ಎಲ್ಲರನ್ನೂ ಈಗ ಪಕ್ಷಾಂತರ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ (ಗೊಂದಲ) ನಾನು ಪಕ್ಷಾಂತರ ಮಾಡಿಲ್ಲ. ಪಕ್ಷ ಬಿಟ್ಟು ಗೆದ್ದು ಬಂದಿದ್ದೇನೆ. ನೀವು ಗೆದ್ದು ಬರದಿದ್ದವರನ್ನು ಒಳಗೆ ಕರೆದುಕೊಳ್ಳುತ್ತಿದ್ದೀರಲ್ಲಾ, ಅದು ಪಕ್ಷಾಂತರ.

**ಶ್ರೀ ಸಿ.ಟಿ. ರವಿ:** ಈಗ ಬಂದರೆ ಬಹಳ ತಡವಾಗುತ್ತದೆ. ಇಗೇನೂ ಪ್ರಯೋಜನವಾಗುವುದಿಲ್ಲ.

ಅಧ್ಯಕ್ಷರು: ನೀವು ನೀವೇ ಮಾತನಾಡಬೇಡಿ, address to Chair.

**ಶ್ರೀ ಸಿ. ಎಸ್. ಪುಟ್ಟೇಗೌಡ :** ಸಿ.ಟಿ. ರವಿಯವರಿಗೆ ಪಾಪ, ಅಲ್ಲಿದ್ದೇ ಪ್ರಯೋಜನ ಆದ ಹಾಗೆ ಕಾಣುತ್ತಿಲ್ಲ.

(ಗೊಂದಲ)

**ಶ್ರೀ ಬಿ.ಸಿ. ಪಾಟೀಲ್:** .ನೀವು ಅಲ್ಲಿದ್ದೇ ಏನೂ ಆಗಲಿಲ್ಲ. ಪಾಪ, ಬೇರೆಯವರನ್ನು ಕರೆದೊಕೊಂಡರೆ ಏನಾಗುತ್ತದೆ. ನಿಮ್ಮ ಬಗ್ಗೆ ನಮಗೆ ಅನುಕಂಪ ಬರುತ್ತದೆ.

**ಶ್ರೀ ಸಿದ್ದು ಸವದಿ:** ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ನಾನು ಇಲ್ಲಿರುವ ವಿರೋಧ ಪಕ್ಷದ ಮಾನ್ಯ ಹಿರಿಯ ಸದಸ್ಯರಿಗೆ ಹೇಳಬಯಸುವುದೇನೆಂದರೆ, ಇದು ಯಾರ ಬಜೆಟ್ ಎನ್ನುವುದನ್ನು ಕಳೆದ ಚುನಾವಣೆಯಲ್ಲಿ ರಾಜ್ಯದ ಮತದಾರ ತೋರಿಸಿಕೊಟ್ಟಿದ್ದಾನೆ. ಅದಕ್ಕಾಗಿ ಬಿಜೆಪಿಗೆ ಬಹುಮತ ಕೊಡುವುದರ ಮುಖಾಂತರ ಇದು ಯಡಿಯೂರಪ್ಪನವರ ಯೋಜನೆ ಎಂದು ಹೇಳಬೇಕಾಗುತ್ತದೆ. ಸೈಕಲ್ ಕೊಡುವ ನೂತನ ಯೋಜನೆ ಏನಿದೆ, ಇದು ಮೊದಲು ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಮಕ್ಕಳಿಗೆ ಸೈಕಲ್ ಕೊಡುವ ಯೋಜನೇಯಾಗಿದೆ. ವಿಶೇಷವಾಗಿ, ನನ್ನ ತಾಲ್ಲೂಕಿನಲ್ಲಿ indent ಹಾಕುವುದರಲ್ಲಿ ಅಲ್ಲಿರುವ ಸಿಬ್ಬಂದಿಗಳು ತಾರತಮ್ಯ ಮಾಡಿದ್ದರಿಂದ ಸಾವಿರಾರು ಸೈಕಲ್‌ಗಳ ಕೊರತೆಯಾಗಿ ಕಳೆದ ವರ್ಷ, ಅದರ ಹಿಂದಿನ ವರ್ಷ ಆ ಸೈಕಲ್‌ಗಳು ಸಿಗದೆ

ಬಡ ಮಕ್ಕಳು ಅದರಿಂದ ವಂಚಿತರಾದರು. ಈ ಸಲ ಸಂಪೂರ್ಣವಾಗಿ, ಎಲ್ಲಾ ಮಕ್ಕಳಿಗೂ ಸೈಕಲ್ ಕೊಡುವ ಯೋಜನೆಯನ್ನು ಯಡಿಯೂರಪ್ಪನವರು ಮಾಡಿದ್ದಾರೆ. ಹಿಂದೆ ಸೈಕಲ್ ಸಿಗದೆ ವಂಚಿತರಾದ ಮಕ್ಕಳು ಯಾವ್ಯಾವ ತಾಲ್ಲೂಕಿನಲ್ಲಿ 800, ಸಾವಿರ ಇದ್ದಾರೆ ಅವರೆಲ್ಲರಿಗೂ ಸೈಕಲ್ ಕೊಡಬೇಕು. ತಮಗೆ ಸಿಗಲಿಲ್ಲ ಎಂಬ ನೋವು ಆ ಮಕ್ಕಳಿಗೇನಿದೆ ಅದನ್ನು ನಿವಾರಣೆ ಮಾಡಬೇಕೆಂದು ವಿನಂತಿಸುತ್ತೇನೆ.

ಇನ್ನ Railway line ಬಗ್ಗೆ ಹೇಳುವುದಾದರೆ, ರಾಜ್ಯದಲ್ಲಿ ನಮ್ಮ ಸರ್ಕಾರ ನಾಲ್ಕಾರು railway line ಗಳು ಅಂದರೆ, ಬೀದರ್–ಗುಲ್ಬರ್ಗಾ, ಬೆಂಗಳೂರು, ಮೈಸೂರು, ಮುನಿರಾಬಾದ್–ಮೆಹಬೂಬ ನಗರ, ಸೋಲಾಪುರ–ಬಾಗಲಕೋಟೆ– ಗದಗ, ಶಿವಮೊಗ್ಗ–ತಾಳಗೊಪ್ಪ ಇರಬಹುದು. ಹೀಗೆ ನಾಲ್ಕಾರು ಹೊಸ ಮಾರ್ಗಗಳಿಗೆ ಅದ್ಯತೆ ಕೊಟ್ಟಿರುವುದು ಬಹಳ ಸಂತೋಷ. ಇದಕ್ಕೆ ನಾನು ಬಹಳ ಖುಷಿ ಪಡುತ್ತೇನೆ. ಆದರೆ, ವಿಶೇಷವಾಗಿ ನಮ್ಮ ಬಾಗಲಕೋಟೆ ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಕುಡಚಿ–ಬಾಗಲಕೋಟೆ ಹೊಸ ರೈಲು ಮಾರ್ಗದ ಬೇಡಿಕೆ ಬಹಳ ದಿವಸಗಳಿಂದ ಇದೆ. ಯಾವಾಗ ಸಂಸ್ಥಾನ ವಿಲೀನಿಕರಣ ಆಗುವ ಪೂರ್ವದಲ್ಲಿ ಜಮಖಂಡಿ ಮಹಾರಾಜರು ಬ್ರಿಟಿಸ್ ಸರ್ಕಾರದ ಕಾಲದಲ್ಲಿ ಈ railway line ಸಲುವಾಗಿ ಹಣ ತುಂಬಿರುವ ಸಂಗತಿ ಇತಿಹಾಸದ ಪುಟದಲ್ಲಿದೆ. ನಾವು ಇದರ ಸಲುವಾಗಿ ಹತ್ತಾರು ಸಲ ಈ ಸರ್ಕಾರವನ್ನು, ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿದ್ದಾಗಿದೆ. ಈ ಹಿಂದೆ ಮಾನ್ಯ ಜಾಫರ್ ಷರೀಫ್ ರವರು ಇದ್ದಾಗ ಅದರ survey ಕಾರ್ಯ ಉದ್ಘಾಟನೆ ಮಾಡಿದ ಸಂಗತಿ ಜಮಖಂಡಿ ತಾಲ್ಲೂಕಿನಲ್ಲಿ ನಡೆದಿದೆ. ಅಲ್ಲಿಂದ ಇಲ್ಲಿಯವರೆಗೆ ಹತ್ತಾರು ವರ್ಷಗಳಾದರೂ ಅನೇಕ ಹೊಸ ಹೊಸ ಮಾರ್ಗಗಳು ಹುಟ್ಟಿಕೊಂಡರೂ ಸಹ ಹಳೆದಾಗಿರುವ railway line ಏಕೆ ನಿರ್ಲಕ್ಷ್ಯಕ್ಕೊಳಪಟ್ಟಿದೆ ಎನ್ನುವ ಮಾತನ್ನು ನಾನು ಸರ್ಕಾರಕ್ಕೆ ಕೇಳಬಯ್ಸುತ್ತೇನೆ. ಅದಕ್ಕಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ, ಒತ್ತಾಯ ಮಾಡುತ್ತೇನೆ, ಆ railway line ಬಹಳ ಅವಶ್ಯದಾಯಕವಾಗಿದೆ. ಆ ಭಾಗದ ಉತ್ತರ ಕನಾಟಕದ ಅಭಿವೃದ್ಧಿಗೆ ಬಾಗಲಕೋಟೆ ಜಿಲ್ಲಾ ಅಭಿವೃದ್ಧಿಗೆ ಕುಡಚಿ–ಬಾಗಲಕೋಟೆ railway line ಬಹಳ ಅವಶ್ಯವಿರುವುದರಿಂದ, ಏಕೆ ಅವಶ್ಯವೆಂದರೆ ಅಲ್ಲಿ ನೂರಾರು ಕಾರ್ಖಾನೆಗಳು ಬಂದಿವೆ ಹತ್ತಾರು Sugar Factory ಬಂದಿವೆ, JK cement ನಂಥ 1200 ಕೋಟಿ ರೂ.ಗಳ projectನ Cement Factory ಬಂದಿದೆ, Nirani Cements ಈ ರೀತಿ ಹತ್ತಾರು ಸಿಮೆಂಟ್ factories ಆ ಭಾಗದಲ್ಲಿ ಬಂದಿದ್ದರಿಂದ

ಅದರ ಅಭಿವೃದ್ಧಿ ದೃಷ್ಟಿಯಿಂದ ಆ ಮಾಲಿನ ಸಾಗಾಣೆ ದೃಷ್ಟಿಯಿಂದ ಹೊಸ ಲೈನ್‌ನ ಅವಶ್ಯಕತೆ ಇವತ್ತಿನ ಪರಿಸ್ಥಿತಿಯಲ್ಲಿ ಬಹಳಷ್ಟಿದೆ. ಅದಕ್ಕಾಗಿ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ, ಯಾವುದೇ ಪರಿಸ್ಥಿತಿಯಲ್ಲಿ ಸಾಲ ಪಡೆದರೂ ಅಡ್ಡಿ ಇಲ್ಲ. ನಮ್ಮ railway line ಗೆ ಇದೇ ವರ್ಷದ ಬಜೆಟ್ ನಲ್ಲಿ ಅವಕಾಶ ಮಾಡಿಕೊಡಬೇಕು. ನಮ್ಮ ಪಾಲಿನ ಹಣವನ್ನು ಕೇಂದ್ರ ಸರ್ಕಾರಕ್ಕೆ ಕೊಡುವ ಮೂಲಕ ಅದಕ್ಕೆ ಚಾಲನೆ ಕೊಡಬೇಕೆಂದು ಒತ್ತಾಯಿಸುತ್ತೇನೆ. ನಾವು ಕಮಿಟಿ ಟೂರ್ ಮುಖಾಂತರ ನಾವು ಈಗಿನ railway ಮಂತ್ರಿಗಳಾದ ಲಾಲೂ ಪ್ರಸಾದ್ ಯಾದವ್ ರವರನ್ನು ಕಳೆದ ವರ್ಷ ದೆಹಲಿಯಲ್ಲಿ ಭೇಟಿ ಮಾಡಿದಾಗ ನಮ್ಮ ಭಾಗದ ಇಡೀ ಸಮೀಕ್ಷೆಯನ್ನು ತೋರಿಸಿದರು. 211 ಕೋಟಿ ರೂಪಾಯಿಗಳ estimate ಇದೆ. ನೀವು ಅರ್ಧ ಭಾಗ ಹಣವನ್ನು ತುಂಬಿದರೆ ನಾವು ಅದಕ್ಕೆ ಚಾಲನೆ ಕೊಡುತ್ತೇವೆನ್ನುವ ಮಾತನ್ನು ಹೇಳಿದ್ದರಿಂದ, ದಯವಿಟ್ಟು ಏನಾದರೂ ಮಾಡಿ ನಮ್ಮ ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ, ನಮ್ಮ ಭಾಗದ ಅಭಿವೃದ್ಧಿ ದೃಷ್ಟಿಯಿಂದ ಅದು ಅವಶ್ಯಕವಾಗಿದೆ. ಸಾಮಾನ್ಯವಾಗಿ railway station 10, 20, 50 ಕಿ.ಮೀ. ಅಂತರದಲ್ಲಿ ಇರುತ್ತದೆ. ನಾವು rail ಅನ್ನು ಹಿಡಿಯಬಾಕಾದರೆ ಹುಬ್ಬಳ್ಳಿಗೆ ಬರಬೇಕಾದರೆ 4 ತಾಸು ಬೇಕು. ನಮ್ಮ ಕ್ಷೇತ್ರದಿಂದ railway line ಗೆ 180 ಕಿ. ಮೀ. ದೂರ ಇದೆ. ಅದಕ್ಕಾಗಿ ನಮ್ಮ ಶಾಸಕರೂ ಸಹ ರೈಲಿನ ಮೂಲಕ ಈ ಸದನಕ್ಕೆ ಬರಲಿಕ್ಕೆ, ಬೆಂಗಳೂರಿಗೆ ಬರಲಿಕ್ಕೆ ಅವಕಾಶ ಮಾಡುವ ಸಲುವಾಗಿ ಆ railway line ಗೆ ಒತ್ತು ಕೊಟ್ಟು, ನೀವು ಏನು ಮಾಡುತ್ತಿರೋ ಗೊತ್ತಿಲ್ಲ. ದಯವಿಟ್ಟು ಆ railway line ಗೆ ಇದೇ ವರ್ಷದ ಬಜೆಟ್ ನಲ್ಲಿ ಮಂಜೂರಾತಿ ಕೊಡಬೇಕು. ಇದೇ ವರ್ಷ ನಮ್ಮ ಪಾಲಿನ ಹಣವನ್ನು ಕೇಂದ್ರ ಸರ್ಕಾರಕ್ಕೆ ತುಂಬುವ ಮುಖಾಂತರ ಉತ್ತರ ಕರ್ನಾಟಕಕ್ಕೆ ಅನುಕೂಲ ಮಾಡಿಕೊಡಬೇಕೆಂಬ ವಿನಂತಿಯನ್ನು ಮಾಡುತ್ತೇನೆ. ಚುನಾವಣೆ ಮುಗಿದು 2 ತಿಂಗಳಾಯಿತು ನಮ್ಮ ತಾಲ್ಲೂಕಿನ ವಿವಿಧ ಕಾಮಗಾರಿಗಳನ್ನು ಜಾರಿಗೊಳಿಸುವ ಸಲುವಾಗಿ ತಾಲ್ಲೂಕು ಮಟ್ಟದ ಸಮಿತಿಗಳು ಇನ್ನೂ ರಚನೆಯಾಗಿಲ್ಲ. ಆ ಸಮಿತಿಗಳನ್ನು ಬೇಗನೆ ರಚೆನ ಮಾಡಬೇಕೆಂದು ವಿನಂತಿಸುತ್ತೇನೆ. ಆಸ್ರಯ, ಆರಾಧನಾ, ಬಗರ್ ಹುಕುಂ, Tribunal ಸಮಿತಿ ಯಾವುದೇ ಇದ್ದರೂ ಸಹ ಅವುಗಳನ್ನು ಬೇಗನೆ ರಚಿಸುವುದರಿಂದ ನಮ್ಮ ಅಭಿವೃದ್ಧಿ ಕೆಲಸ ಮಾಡಲಿಕ್ಕೆ ಅನುಕೂಲವಾಗುತ್ತದೆ. SDMC ರಚನೆಮಾಡುವ ವ್ಯವಸ್ಥೆಯಲ್ಲಿ hostel ಗೆ ಮಕ್ಕಳನ್ನು selection ಮಾಡುವ ವ್ಯವಸ್ಥೆಯಲ್ಲಿ ಈ ಹಿಂದಿರುವ ಪದ್ಧತಿಯನ್ನೇ ಜಾರಿಗೊಳಿಸಬೇಕು. SDMC ಯಲ್ಲಿ ಏನು ಅವಾಂತರವಾಗುತ್ತಿದೆ. ಎಂದರೆ ಸುಮಾರು 500–1000 ಮಕ್ಕಳಿದ್ದಲ್ಲಿ

2000 ಪಾಲಕರು ಕೂರುವ ಸ್ಥಿತಿ ಇದೆ. ಅಲ್ಲಿ ಶಾಲೆಗಳು ರಣರಂಗ ಅಗುವ ಸ್ಥಿತಿ ನಿರ್ಮಾಣವಾಗುತ್ತಿವೆ. ಒಂದು ಶಾಲೆಯಲ್ಲಿ ಐದುನೂರು, ಸಾವಿರ ಮಕ್ಕಳು ಇದ್ದರೆ SDMC ಸಭೆಗೆ ಆ ಮಕ್ಕಳ ಪಾಲಕರನ್ನು ಕರೆದು ನೀವು ಆಯ್ಕೆ ಮಾಡುವುದು ಚುನಾವಣಾ ಕಣವಾಗಿ ನಿರ್ಮಾಣವಾಗುತ್ತಿದೆ. ಬೇಕಾದರೆ ತಾವು ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಯ ಚುನಾವಣಾ ಪ್ರಕ್ರಿಯೆಗಳು ಯಾವ ರೀತಿಯಾಗುತ್ತವೆಯೋ ಆ ರೀತಿಯಾದರೂ ಮಾಡಿ. ಇಲ್ಲಾಂದ್ರೆ, ಆ ಶಾಲೆಯಲ್ಲಿ ಕೂಡಿಸಿ ಅದು ರಣರಂಗವಾಗುವ ವ್ಯವಸ್ಥೆ ನಡೆದುಕೊಂಡು ಬಂದಿದ್ದರಿಂದ ದಯಮಾಡಿ ಅದಕ್ಕೆ ಅಂತ್ಯಹಾಡಿ. ಮೊದಲು ಹೇಗೆ ಇತ್ತು ಆ ರೀತಿ ಶಾಸಕರಿಗೆ ಅಧಿಕಾರ ಕೊಟ್ಟು ಶಾಸಕರ ಅಧ್ಯಕ್ಷತೆಯಲ್ಲಿ, ಶಾಸಕರು ನಾಮನಿರ್ದೇಶನ ಮಾಡಿದಂಥ ಸದಸ್ಯರು SDMC ಅಧ್ಯಕ್ಷರಾಗುವಂಥ ವ್ಯವಸ್ಥೆಯನ್ನು ಪುನರ್ ಜಾರಿಗೆ ತರಲು ತಮ್ಮ ಮೂಲಕ ವಿನಂತಿಸುತ್ತೇನೆ. ಎರಡನೇಯದಾಗಿ ಆಶ್ರಯ ಸಮಿತಿಯ ಬಗ್ಗೆ ಹೇಳುವುದಾದರೆ, ಸರ್ಕಾರಕ್ಕೆ ಏನಾದರೂ ಬಡವರ ಬಗ್ಗೆ ಕಾಳಜಿ ಇದ್ದರೆ, ಸರ್ಕಾರ ಕೊಟ್ಟಿರುವುದು ಹಳ್ಳಿಗಳಲ್ಲಿರುವ ಬಡವರಿಗೆ ಮುಟ್ಟಬೇಕಾದರೆ, ಶಾಸಕರು ಆ ಸಮಿತಿಗೆ ಅಧ್ಯಕ್ಷರಿರಬೇಕು. ನೀವು ಗ್ರಾಮ ಪಂಚಾಯಿತಿಗೆ ಕೊಡುವುದಕ್ಕೆ ನನ್ನದೇನೂ ಅಡ್ಡಿಯಿಲ್ಲ. ಆದರೆ, ನೀವು ಪ್ರಗತಿಯನ್ನು ಪರಿಶೀಲಿಸಿ. ಹಳ್ಳಿಯಲ್ಲಿ ಯಾರಿಗೆ ಮನೆ ಮುಟ್ಟಿವೆ ಎಂಬುದನ್ನು ನೋಡಿ. ಎಲ್ಲಾ ಮನೆಗಳು ಇದ್ದಂಥ ಶ್ರೀಮಂತರಿಗೆ ಮುಟ್ಟಿವೆ. ನಾಲ್ಕು ಮನೆ ತೆಗೆದುಕೊಂಡಂಥವರಿಗೆ ಐದನೇ ಮನೆ ಮುಟ್ಟಿದೆ. ಗ್ರಾಮ ಪಂಚಾಯಿತಿ ಸದಸ್ಯರ ಸಂಬಂಧಿಕರಿಗೆ ಮತ್ತು ಅಧ್ಯಕ್ಷರಿಗೆ ಮನೆಗಳು ಮುಟ್ಟಿದ್ದು ಅವರು ಮನೆಯ ಮೇಲೆ ಮನೆ ಕಟ್ಟಿಕೊಂಡಿದ್ದಾರೆ. ಈ ರೀತಿಯಾಗಿ ಬಡವರ ಶೋಷನೆ ಮಾಡುವ ವ್ಯವಸ್ಥೆ ಸರಿಯಲ್ಲ. ನಾವು ಅಧಿಕಾರ ವಿಕೇಂದ್ರೀಕರಣಕ್ಕೆ ಅಡ್ಡಿಯಿಲ್ಲ. ಅಧಿಕಾರ ವಿಕೇಂದ್ರೀಕರಣ ಏನಾದರೂ ಮೊದಲು ಅಗಬೇಕೆಂದರೆ ಅದಕ್ಕೆ ನನ್ನ ಮೊದಲು ಸಹಮತವಿದೆ. ಆದರೆ, ವ್ಯವಸ್ಥಿತವಾಗಿ ಆ ಯೋಜನೆ ಜಾರಿಗೊಳಿಸುವಂಥ ಕೆಲಸ ಆಗಬೇಕಲ್ಲವೇ? ಅದಕ್ಕೆ ನೀವು ಯಾರ್‍ಯಾರು ಬಡತನ ರೇಖೆಯಿಂದ ಕೆಳಗೆ ಇದ್ದಾರೆ, ಅಂಥ ಬಡವರಿಗೆ ಮನೆಗಳನ್ನು ಕೊಡಿಸತಕ್ಕಂಥ ಕೆಲಸವನ್ನು ನೀವು ಮಾಡಿ. ಅದಕ್ಕೆ ನಿಯಮಾವಳಿ ಮಾಡಿ. ಯಾರಾದರೂ ತಪ್ಪೆಸಗಿದರೆ ಅವರಿಗೆ ಶಿಕ್ಷೆ ಮಾಡಿ. ಅದೇ ನಿಯಮ ಮುಂದುವರಿಯಲಿ, ನಮಗೇನು ತೊಂದರೆಯಿಲ್ಲ, ನಾವೇ ಆಗಬೇಕೆಂದೇನೂ ಇಲ್ಲ. ಆದರೆ, ಈಗ ಆಗಿರುವ ಪ್ರಗತಿಯನ್ನು ನೋಡಿದರೆ ನಮಗೆ ಬಹಳ ನೋವಾಗುತ್ತದೆ. ಯಾವ ಬಡವರಿಗೂ ಸಹಿತ ಮನೆ ಸಿಕ್ಕಿಲ್ಲ. ಗುಡಿಸಲಿನಲ್ಲಿ, ಕಲ್ಲು ಕುಟೀರಗಳಲ್ಲಿ, ಬಾಡಿಗೆ ಮನೆಯಲ್ಲಿ ವಾಸ ಮಾಡತಕ್ಕಂಥ ಯಾವ ಬಡವರಿಗೂ

ನಮ್ಮ ಕ್ಷೇತ್ರದಲ್ಲಿ ಒಂದು ಮನೆ ಮುಟ್ಟಿಲ್ಲ. ಹರಾಜು ಹಾಕುವಂಥ ವ್ಯವಸ್ಥೆಯಲ್ಲಿ ಆ ಮನೆಗಳನ್ನು ಕೊಡುವಂಥ ವ್ಯವಸ್ಥೆಯಿದೆ. 20 ಮಂದಿ ಗ್ರಾಮ ಪಂಚಾಯಿತಿ ಸದಸ್ಯರು ಅಲ್ಲಿ ಇದ್ದರೆ ಬಂದಿರತಕ್ಕಂಥ ಮನೆಗಳನ್ನು ಪ್ರತಿಯೊಬ್ಬರು ಹಂಚಿಕೊಂಡು, ನಾನು ಎರಡು, ನೀನು ಎರಡು, ನಿನಗೆ ತಿಳಿದವರಿಗೆ ನೀನು ಕೊಡು, ನನಗೆ ತಿಳಿದವರಿಗೆ ನಾನು ಕೊಡುತ್ತೇನೆ, ನನಗೆ ನೀನು ಕೇಳಬೇಡ, ನೀನು ನನಗೆ ಕೇಳಬೇಡ ಎನ್ನುವ ವ್ಯವಸ್ಥೆಯಿಂದ ಆ ಮನೆಗಳನ್ನು ಹಂಚಿದರೆ ಯಾವ ಬಡವರು ಉದ್ಧಾರವಾಗುತ್ತಾರೆ? ಅದಕ್ಕಾಗಿ, ಮೊದಲು ಏನು ಇತ್ತು ಅದರಲ್ಲಿ ಏನಾದರೂ ತಪ್ಪು ಇದ್ದರೆ ಆ ನಿಯಾಮಾವಳಿಗೆ ತಿದ್ದುಪಡಿ ತಂದು, ಶಿಕ್ಷೆ ಕೊಡುವಂತ ವ್ಯವಸ್ಥೆ ಮಾಡಿ. ಶಾಸಕರ ಅಧ್ಯಕ್ಷತೆಯಲ್ಲಿ ಜಾರಿಗೆ ತಂದರೆ ಪ್ರಾಮಾಣಿಕವಾಗಿ ಸುಮಾರು 50% ಆದರೂ ಮನೆಗಳು ಮುಟ್ಟುತ್ತವೆ.

**ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್:** ಮಾನ್ಯ ಸದಸ್ಯರು ಆಶ್ರಯ ಸಮಿತಿಯ ಬಗ್ಗೆ ಹೇಳಿದರು. ಈ ಬಗ್ಗೆ ಹಿಂದೆ ತಾವು ಇದ್ದಾಗಲೂ ಚರ್ಚೆಯಾಗಿದೆ. ಕಳೆದ ಸಮ್ಮಿಶ್ರ ಸರಕಾರ ತಂದಂಥ ಬಿಲ್‌ಗೆ ನಮ್ಮ ಕಾಂಗ್ರೆಸ್ ಪಕ್ಷದ ವತಿಯಿಂದ ನಾವು ವಿರೋಧಿಸಿದ್ದೇವು. ಆದರೂ ಒತ್ತಾಯ ಪೂರ್ವಕವಾಗಿ ಆ ಬಿಲ್‌ನ್ನು ನೀವು ಪಾಸ್ ಮಾಡಿಕೊಂಡಿದ್ದು, ಮಾನ್ಯ ರಾಜ್ಯಪಾಲರು ಅದನ್ನು ಇವತ್ತು ರಿಜೆಕ್ಟ್ ಮಾಡಿದ್ದಾರೆ. ಅದಕ್ಕೆ ಕಾನೂನಿನಲಿಯೇ ಅವಕಾಶವಿದೆ. ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ನಾನು ಏನು ಹೇಳುತ್ತೇನೆಂದರೆ, ಗ್ರಾಮ ಪಂಚಾಯಿತಿ ಇದು ನಮ್ಮದೇ ಆಗಿರತಕ್ಕಂಥ ಸಂಸ್ಥೆ. It is Constitutional body created under the Constitution. ಇದರಲ್ಲಿ ಆಗಿರತಕ್ಕಂಥ ವ್ಯವಸ್ಥೆಯಲ್ಲಿ ಸುದಾರಣೆ ಮಾಡಿ ಎಂದು ಅವರು ಹೇಳುತ್ತಾ, ಗ್ರಾಮ ಪಂಚಾಯಿತಿಯ ಎಲ್ಲಾ ಅಧ್ಯಕ್ಷರು ಮನೆ ಮೇಲೆ ಮನೆ ಕಟ್ಟಿಕೊಳ್ಳುತ್ತಾರೆ, ಕೆಲವು ಸದಸ್ಯರು ಎಲ್ಲರೂ ಕೂಡಿ ಮನೆಗಳನ್ನು ಹಂಚಿಕೊಳ್ಳುತ್ತಾರೆಂದು ಹೇಳಿದಿರಿ. ಆದರೆ, ನಿಯಮದಲ್ಲಿ ಏನು ಇದೆ ತಾವು ನೋಡಿ. ಏಕೆಂದರೆ ನಿಮ್ಮದೆ ಸರ್ಕಾರವಿದೆ. ನಿಯಮದಲ್ಲಿ ಏನು ಇದೆ ಎಂದರೆ, ಅದು ಗ್ರಾಮ ಸಭೆ ಮೂಲಕ ಆಗಬೇಕೆಂದು ಇದೆ. ಇದನ್ನೇನು ಗ್ರಾಮ ಪಂಚಾಯಿತಿಯವರಿಗೆ ಕೊಟ್ಟಿಲ್ಲ. ಆ ಗ್ರಾಮ ಪಂಚಾಯಿತಿಯಲ್ಲಿ ಅದನ್ನು ನಿರ್ವಹಿಸಿದರೂ ಗ್ರಾಮ ಸಭೆಯಲ್ಲಿ ಫಲಾನುಭವಿಗಳ ನಿರ್ಣಯ ಆಗಬೇಕೆಂದು ನಿಯಮವಿದೆ. ಆ ನಿಯಮಗಳನ್ನು ಪಾಲನೆ ಮಾಡುವುದು ಯಾರ ಜವಾಬ್ದಾರಿ? ಅದನ್ನು implementation overlook ಮಾಡುವುದು ಸರ್ಕಾರದ ಮತ್ತು ಅಲ್ಲಿರುವ EO ಗಳ ಮತ್ತು ಗ್ರಾಮ ಪಂಚಾಯಿತಿಗಳ ಕಾರ್ಯದರ್ಶಿಗಳ ಜವಾಬ್ದಾರಿ. ಇವತ್ತು ನಿಮ್ಮ ಸರ್ಕಾರ ಇರುವುದರಿಂದ ನೀವು ಅದನ್ನು ನಿರ್ವಹಣೆ ಮಾಡಿ. ಈ ವ್ಯವಸ್ಥೆ

ಸರಿ ಇಲ್ಲವೆಂದರೆ, ಇದು ನೆಗಡಿ ಬಂದರೆ ಮೂಗು ಕೊಯಿಕೊಂಡ ಹಗೆ ಆಗುತ್ತದೆ. ಹೀಗಾಗಿ ಒಂದು ವೇಳೆ ಇದರಲ್ಲಿ ಏನಾದರೂ ದೋಷಗಳಿದ್ದರೆ ನಿಮ್ಮ ಸರ್ಕಾರ ಇದೆ. ಈಗ ತಾನೆ ಮಾನ್ಯ RDPR Minister ಘೋಷಿಸಿದರು. ನಾನು ಅದನ್ನು ನೋಡಿ ಖುಷಿಯಾಯಿತು. ಏನೆಂದರೆ, ನೀವು ಪ್ರತಿಯೊಂದು ಗ್ರಾಮ ಪಂಚಾಯಿತಿಗೆ Development Officer ಗಳನ್ನು ನೇಮಿಸುತ್ತೇವೆಂದು ಹೇಳಿದಿರಿ, It is a welcome decision, ನಾವು Government ಗೆ ಈ ವಿಷಯದಲ್ಲಿ appreciate ಮಾಡುತ್ತೇವೆ. ಜೊತೆಗೆ ಅವರ ಮೂಲಕ ನೀವು ಒಬ್ಬ Accountant ರನ್ನು ನೇಮಿಸುತ್ತೀರೆಂದು ಹೇಳಿದಿರಿ, ಇದು ಇವತ್ತು ಅಲ್ಲಿ ಅವಶ್ಯಕತೆಯಿದೆ. ಇರತಕ್ಕಂಥ ವ್ಯವಸ್ಥೆಯನ್ನು ಬದಲಾಯಿಸುವುದಕ್ಕಿಂತ ಇರತಕ್ಕಂಥ ವ್ಯವಸ್ಥೆಯನ್ನು ಒಳ್ಳೆಯ ರೀತಿಯಲ್ಲಿ ನಿರ್ವಹಿಸುವುದು ನಮ್ಮ ಎಲ್ಲರ ಕರ್ತವ್ಯವಾಗಿದೆ. ಹೀಗಾಗಿ ಮಾನ್ಯ ಸದಸ್ಯರು ಹೇಳಿದ ಹಾಗೆ, ನೀವು ಆಶ್ರಯ ಸಮಿತಿಗೆ ಅಧ್ಯಕ್ಷರನ್ನಾಗಿ ಮಾನ್ಯ ಶಾಸಕರನ್ನು ಮಾಡಬೇಡಿ.

**ಅಧ್ಯಕ್ಷರು:** ಆಯಿತು ತಾವು ಕಂಟಿನ್ಯೂ ಮಾಡಿ. ಎಲ್ಲರದೂ ಒಪ್ಪಿಗೆ ಇದೆಯೇ? ಆಶ್ರಯ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಶಾಸಕರುಗಳು ಬೇಡವೆ?

**ಶ್ರೀ ಸಿ. ಟಿ. ರವಿ:** ಒಳಗೊಂದು ಹೊರಗೊಂದು ಇಲ್ಲತಾನೆ?

**ಶ್ರೀ ಬಿ. ರಮನಾಥ ರೈ:** ವಿಕೇಂದ್ರೀಕರಣದ ಅರ್ಥವನ್ನು ಅಪಾರ್ಥ ಮಾಡುವ ಕೆಲಸವನ್ನು ಮಾಡಬೇಡಿ. ವಿಕೇಂದ್ರೀಕರಣಕ್ಕೆ ಏನೊಂದು ಪ್ರಯತ್ನ ನಡೆದಿದೆ, ಆ ವಿಕೇಂದ್ರೀಕರಣ ವ್ಯವಸ್ಥೆ ಜೀವಂತವಾಗಿ ಉಳಿಯುವುದಕ್ಕೆ ನಾವು ಪ್ರಯತ್ನ ಪಡಬೇಕು. ಸುಮ್ಮನೆ ನಮಗೆ ಅಧಿಕಾರ ಬೇಕೆಂದು ಮಾತನಾಡಲಿಕ್ಕೆ ಬರುವಂಥದ್ದಲ್ಲ.

**ಶ್ರೀ ಸಿದ್ದು ಸವದಿ:** ನಾನು ವಿಕೇಂದ್ರೀಕರಣದ ವ್ಯವಸ್ಥೆಗೆ ವಿರೋಧಿಸುತ್ತಿಲ್ಲ. ನಮ್ಮ ವಿನಂತಿ ಏನೆಂದರೆ, ವಿಕೇಂದ್ರೀಕರಣ ಸರಿಯಾಗಿ ಆಗಬೇಕು. ಡಾಕ್ಟರ್ ರವರು, ಗ್ರಾಮ ಸಭೆಯ ಮೂಲಕ ಆಯ್ಕೆಯಾಗಬೇಕೆಂದು ಹೇಳಿದ್ದಾರೆ. ಅದನ್ನಾದರೂ ಜಾರಿಗೆ ತನ್ನಿ, ಯಾವುದೇ ಗ್ರಾಮ ಪಂಚಾಯಿತಿಗಳಲ್ಲಿ ಗ್ರಾಮ ಸಭೆಗಳ ಮೂಲಕ ಆಯ್ಕೆಯಾಗುವಂಥ ವ್ಯವಸ್ಥೆಯಿಲ್ಲ. KSHIP ರಸ್ತೆಗಳ ಬಗ್ಗೆ ಹೇಳುವುದಾದರೆ, ಸನ್ಮಾನ್ಯ ರೇವಣ್ಣನವರು ಸಚಿವರಾಗಿದ್ದಾಗ KSHIP ರಸ್ತೆಗಳು ಸುಮಾರು 80% ಭಾಗವನ್ನು ದಕ್ಷಿಣ ಕರ್ನಾಟಕದಲ್ಲಿ ಮಾತ್ರ ಮೊದಲನೇ ಹಂತದಲ್ಲಿ ಇಟ್ಟುಕೊಂಡಿರುವ ಸಂಗತಿ ಇದೆ. ದಯವಿಟ್ಟು ಇಡೀ ಕರ್ನಾಟಕ ಒಂದೇ ಎನ್ನುವ ಭಾವನೆಯನ್ನು ಇಟ್ಟುಕೊಂಡು ಉತ್ತರ ಕರ್ನಾಟಕಕ್ಕೂ ಸಹಿತ ಅರ್ಧಭಾಗವನ್ನು ಕೊಡುವ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೇನೋ

ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. . . ಹಾಸನಕ್ಕೆ ಮಾತ್ರವೆ . . sorry ಹಾಸನಕ್ಕೆ ಮಾತ್ರ KSHIP ರಸ್ತೆಗಳನ್ನು ಮಾಡಿಕೊಂಡಿರುವುದು ಮಂಜೂರು ಹಂತದಲ್ಲಿರುವುದರಿಂದ ಅದಕ್ಕೆ ಏನಾದರೂ ತಿದ್ದುಪಡಿ ಮಾಡಿ ಉತ್ತರ ಕರ್ನಾಟಕಕ್ಕೂ ಕೂಡ ಸ್ವಲ್ಪ ರಸ್ತೆಗಳನ್ನು ಕೊಡಬೇಕೆಂದು ವಿನಂತಿಸುತ್ತೇನೆ. ಇನ್ನು ಅಕ್ರಮ, ಸಕ್ರಮ ಬಗ್ಗೆ ಹೇಳುವುದಾದರೆ, ವಿಶೇಷವಾಗಿ ಮೂರು ನಗರಗಳಿರುವ ನನ್ನ ಕ್ಷೇತ್ರದಲ್ಲಿ ರಬಕವಿ ಬನ್ನಹಟ್ಟಿ, ತೆರೆದಾಳ್, ಮಹಾಲಿಂಗಪುರದ ಭಾಗದ Reserve Forest ನಲ್ಲಿ ಸುಮಾರು ಹತ್ತು ಸಾವಿರ ಫಲಾನುಭವಿಗಳು ಮನೆಗಳನ್ನು ಕಟ್ಟಿಕೊಂಡು ಸುಮಾರು 15–20 ವರ್ಷಗಳಿಂದಲೂ ವಾಸಿಸುತ್ತಿದ್ದಾರೆ. ಅವರಿಗೆ ಯಾವುದೇ ರೀತಿಯ ಹಕ್ಕುಪತ್ರಗಳನ್ನು ಕೊಟ್ಟಿರುವುದಿಲ್ಲ. ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ಅನಧಿಕೃತವಾಗಿ ಕೆಲವೊಂದು ಹಕ್ಕುಪತ್ರಗಳನ್ನು ಕೊಟ್ಟಿದ್ದಾರೆ ಎನ್ನುವ ಉಹಾಪೋಹಗಳು ಇವೆ. ಅಲ್ಲಿ ಅನೇಕ ಜನರು ತೊಂದರೆಯಲ್ಲಿದ್ದಾರೆ. ದಯವಿಟ್ಟು ಅದರ ಬಗ್ಗೆ ಕಾನೂನು ಜಾರಿಗೆ ತಂದು ಅವರೆಲ್ಲರಿಗೂ ಅನುಕೂಲ ಮಾಡಿಕೊಡಬೇಕು. ಏಕೆಂದರೆ, ಅವರೆಲ್ಲರನ್ನು ಹೊರಗೆ ಹಾಕುವುದಕ್ಕೆ ಈ ಪರಿಸ್ಥಿತಿಯಲ್ಲಿ ಸಾಧ್ಯವಾಗುವುದಿಲ್ಲ. ದಯಮಾಡಿ ಅವರಿಗೂ ಕೂಡ ಹಕ್ಕುಪತ್ರಗಳನ್ನು ಕೊಡುವ ಮೂಲಕ ಆ ಬಡವರಿಗೂ ಅನುಕೂಲ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಈ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಶಾಲಾ ಕಾಂಪೌಂಡ್ ಹಾಕುವುದಕ್ಕೆ ಎರಡು ವರ್ಷಗಳಿಂದ ಅವಕಾಶ ಮಾಡಿ ಕೊಟ್ಟಿಲ್ಲ. ಶಾಲಾ ಕಾಂಪೌಂಡ್ ಕೂಡ ಅವಶ್ಯಕತೆ ಇರುವುದರಿಂದ ಅವುಗಳನ್ನು ಕೂಡ ಅದ್ಯತೆಯ ಮೇಲೆ ಎಲ್ಲೆಲ್ಲಿ ಜರೂರು ಇದೆ, ಒಂದು ವೇಳೆ ನೀವು ಶಾಲಾ ಕಾಂಪೌಂಡ್ ಕಟ್ಟಿದಿದ್ದರೆ ಎಲ್ಲಾ ಜನಗಳು ಶಾಲಾ ಮುಂದೆ ಮತ್ತು ಶಾಲಾ ಹಿಂದೆ ಅಲ್ಲಿಯೇ ಬಯಲು ಶೌಚಾಲಯವನ್ನಾಗಿ ಮಾಡಿದರೆ ಶಾಲೆಯ ವ್ಯವಸ್ಥೆ ಹೇಗೆ ಆಗಬೇಕು ತಾವೇ ಯೋಚಿಸಿ ಅದಕ್ಕಾಗಿ ಶಾಲಾ ಕಾಂಪೌಂಡ್‌ಗೆ ಹೆಚ್ಚಿನ ಅದ್ಯತೆ ಕೊಡಬೇಕೆಂದು ವಿನಂತಿಸುತ್ತೇನೆ. ಬಸ್ ನಿಲ್ದಾಣಗಳು ಬಹಳ ದುರ್ವ್ಯವಸ್ಥೆಯಲ್ಲಿರುವುದ ರಿಂದ ಅವುಗಳಿಗೆ ಹೆಚ್ಚಿನ ಅದ್ಯತೆ ಕೊಟ್ಟು ಬಸ್ ನಿಲ್ದಾಣಗಳನ್ನು ದುರಸ್ಥಿ ಮಾಡುವ ಕೆಲಸ ಮಾಡಬೇಕು. ನಮ್ಮ ಭಾಗದಲ್ಲಿ BEMPO dairy ಯನ್ನು KMF ನವರು ಖರೀದಿಸಿದ್ದಾರೆ. ಇದನ್ನು ಖರೀದಿಸಿದ ನಂತರ ಸಂಪೂರ್ಣವಾಗಿ ವಿಲೀನಕರಣ ಮಾಡಿಕೊಂಡಿಲ್ಲ. ಅಲ್ಲಿರುವ ಸುಮಾರು 200 ನೌಕರರು ಬಹಳ ತೊಂದರಯಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಅದಕ್ಕಾಗಿ ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, ತಕ್ಷಣ ಆ BEMPO dairy ಯನ್ನು KMF ನಲ್ಲಿ ವಿಲೀನ ಮಾಡಿಕೊಂಡು KMF ನಲ್ಲಿರುವ ನೌಕರರಿಗೆ ಸಿಗುವ

ಸೌಲಭ್ಯಗಳನ್ನು ಆ BEMPO dairy ಯಲ್ಲಿ ಇರುವ ನೌಕರರಿಗೆ ಸಿಗತಕ್ಕಂಥ ವ್ಯವಸ್ಥೆ ಆಗಬೇಕು, ಅಕಸ್ಮಾತ್ ನಿಮಗೆ ಅದನ್ನು ವಿಲೀನ ಮಾಡಿಕೊಂಡರೆ ಹಾನಿಯಾಗುತ್ತದೆಂದರೆ, ಅದನ್ನು ಖಾಸಗಿಯವರಿಗೆ ಮಾರಾಟವಾದರೂ ಮಾಡಿ. ಆ ನೌಕರರ ಉಪ ಜೀವನಕ್ಕೆ ಅನುಕೂಲ ಮಾಡಿಕೊಡುವಂಥ ಕೆಲಸವನ್ನು ಸರ್ಕಾರ ಮಾಡಬೇಕೆಂದು ನಾನು ವಿನಂತಿಸುತ್ತೇನೆ. ಕೊನೆಯದಾಗಿ, ಏತ ನೀರಾವರಿ ಬಗ್ಗೆ ಹೇಳುವುದಾದರೆ, ನಮ್ಮ ಭಾಗಕ್ಕೆ ಜಮಖಂಡಿ, ತೇರದಾಳ್, ಮುಧೋಳ್, ಬೀಳಗಿ, ಈ ನಾಲ್ಕು ಕ್ಷೇತ್ರಗಳಿಗೆ ಏತ ನೀರಾವರಿಯ ಅವಶ್ಯಕತೆ ಇದೆ. ಸುಮಾರು 2–3 ತಿಂಗಳಿಂದ ಜಗ್ಗಿದ ನಂತರ ಕೃಷ್ಣಾ ನದಿಯಲ್ಲಿ ನೀರು ಅನಾಯಸವಾಗಿ ಹರಿದು ಹೋಗುವುದರಿಂದ ಅಲ್ಲಿ ಲಿಫ್ಟ್ ಮಾಡಲು ಅವಕಾಶ ಕೊಟ್ಟು ಅಲ್ಲಿ ಲಿಫ್ಟ್ ಇರೀಗೇಷನ್ ಮಾಡಿಕೊಡುವುದರಿಂದ ಸುಮಾರು ಹತ್ತಾರು ಸಾವಿರ ಹೆಕ್ಟೇರುಗಳ ಜಮೀನಿಗೆ ನೀರಾವರಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಹೀಗಾಗಿ ಅದಕ್ಕೆ ಆದ್ಯತೆ ಕೊಟ್ಟು ಮೂರು ತಾಲ್ಲೂಕುಗಳಿಗೆ ಅನುಕೂಲ ಮಾಡಿ ತೇರದಾಳ್ ಹತ್ತಿರ ಲಿಫ್ಟ್ ಇರಿಗೇಷನ್‌ಗೆ ಅನುಕೂಲ ಮಾಡಿಕೊಟ್ಟರೆ ಆ ಭಾಗದ ರೈತರಿಗೆ ವರದಾನವಾಗುತ್ತದೆ. ಇದಕ್ಕೆ ಯಾವುದೇ ರೀತಿಯ ತೊಂದರೆಯಿಲ್ಲ. ಮಳೆಗಾಲದಲ್ಲಿ ನೀರು ಪ್ಲೋ ಆಗುವಾಗ ಒಂದು ನಾಲ್ಕು ತಿಂಗಳ ಮಟ್ಟಿಗೆ ನೀರು ಲಿಫ್ಟ್ ಮಾಡಿ ರೈತರ ಜಮೀನಿಗೆ ಕೊಡಿ, ಇಡಕಲ್ ಜಲಾಶಯದ ನೀರನ್ನು ಮಳೆಗಾಲ ಹೋದ ನಂತರ ಆ ನೀರನ್ನು ಕೊಟ್ಟರೆ ಸುಮಾರು 8–9 ತಿಂಗಳವರೆಗೆ ನಾವು ಎರಡು ಬೆಳೆ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಸರ್ಕಾರ ಈ ಬಗ್ಗೆ ಕ್ರಮ ತೆಗೆದುಕೊಂಡು ಇದರ ಬಗ್ಗೆ ಸರ್ವೆ ಮಾಡಿಸಿ, ಈ ಬಗ್ಗೆ ಸಭೆ ಕರೆದು, ಅದಕ್ಕೆ ಚಾಲನೆ ಕೊಟ್ಟು ಅದನ್ನು ಮಂಜೂರು ಮಾಡಿ ಆ ಲಿಫ್ಟ್ ಇರಿಗೇಷನ್ ಮಾಡುವ ಮೂಲಕ ನಮ್ಮ ಮೂರು ತಾಲ್ಲೂಕಿನ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ವಿನಂತಿಸಿ, ಮಾನ್ಯ ಅಧ್ಯಕ್ಷರು ನನಗೆ ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿ ಕೊಟ್ಟದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಶಾಮನೂರು ಶಿವಶಂಕರಪ್ಪ (ದಾವಣಗೆರೆ ದಕ್ಷಿಣ)**: ಮಾನ್ಯ ಅಧ್ಯಕ್ಷರೆ, ಬಜೆಟ್ ಮಂಡನೆ ಮಾಡಿರತಕ್ಕಂಥದರಲ್ಲಿ ನಮ ಸಂಕಲ್ಪ ಎಂದು ಅವರು ಚುನಾವಣೆ ಪ್ರಣಾಳಿಕೆಯಲ್ಲಿ ಕೊಟ್ಟಿರತಕ್ಕಂಥ ಯಾವುದೇ ಭರವಸೆಗಳನ್ನು ಈಡೇರಿಸದೆ ಇರತಕ್ಕಂಥ ಬಜೆಟ್ ಎಂದು ದಾರಾಳವಾಗಿ ಹೇಳಬಹುದು. ಏಕೆಂದರೆ, ಈ ಬಜೆಟ್‌ನಲ್ಲಿ ರಾಜ್ಯದ ಅಬಿವೃದ್ಧಿ ಕಡೆಗೆ ಗಮನ ಕೊಡದೆ ಮುಂದೆ ಬರತಕ್ಕಂಥ ಲೋಕಸಭಾ ಚುನಾವಣೆ ನೋಡಿಕೊಂಡು ಈ ಬಜೆಟ್‌ನ್ನು ತಯಾರು ಮಾಡಿರುವಂತೆ ಕಾಣುತ್ತದೆ. ಏಕೆಂದರೆ, ಇದರಲ್ಲಿಯೂ ಕೂಡ

ಗ್ರಾಮೀಣಾಭಿವೃದ್ಧಿ ಮತ್ತು ಕೃಷಿ ಕ್ಷೇತ್ರಗಳಿಗೆ ನಿರ್ಲಕ್ಷ್ಯ ಮಾಡಿರತಕ್ಕಂಥದು ಕಾಣುತ್ತದೆ. ಅದರಲ್ಲಿಯೂ ಕರ್ನಾಟಕದ ಮಧ್ಯ ಭಾಗದಲ್ಲಿರತಕ್ಕಂಥ ನಮ್ಮ ದಾವಣಗೆರೆ ಜಿಲ್ಲೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆಂದರೆ ತಪ್ಪಾಗಲಾರದು. ಈ ಭಾಗದ ಜನರನ್ನು ಪೂರ್ಣ ನಿರ್ಲಕ್ಷಿಸಲಾಗಿದೆ. ಈ ಭಾಗದ ಜನರ ಆಕಾಂಕ್ಷೆಯನ್ನು ಮುಟ್ಟುವುದರಲ್ಲಿ ಬಜೆಟ್ ವಿಫಲವಾಗಿದೆ ಎಂದು ಹೇಳಿದರೆ ತಪ್ಪಿಲ್ಲವೆಂದು ನಾನು ಭಾವಿಸುತ್ತೇನೆ. ಈಗಾಗಲೇ ಉದ್ಯೋಗ ಒದಗಿಸುವಂಥ ಕೈಗಾರಿಕಾ ವಲಯ ಸ್ಥಾಪನೆ ಬಗ್ಗೆ ಯಾವುದೇ ಅಶ್ವಾಸನೆಗಳನ್ನೂ ಕೂಡ ಈ ಬಜೆಟ್‌ನಲ್ಲಿ ನೀಡಿರುವುದಿಲ್ಲ ಮತ್ತೆ ಎಲ್ಲರಿಗೂ ಗೊತ್ತಿರುವಂತೆ ಹರಿಹರದಲ್ಲಿರುವ ಕಿರ್ಲೋಸ್ಕರ್ ಕಂಪನಿ ಬಂದ್ ಆಗಿದೆ. ಬಂದ್ ಆಗಿ 5 ವರ್ಷವಾಗಿದ್ದರೂ ಕೂಡ ಇದುವರೆಗೂ ಅದನ್ನು ಮತ್ತೆ ಪ್ರಾರಂಭ ಮಾಡುವುದಕ್ಕೆ ಯಾವುದೇ ಸರ್ಕಾರವೂ ಕೂಡ ಪ್ರಯತ್ನ ಮಾಡಲಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಅದೇ ರೀತಿಯಾಗಿ ಭದ್ರಾ ಸಕ್ಕರೆ ಕಾರ್ಖಾನೆ ಬಂದ್ ಆಗಿ ಐದಾರು ವರ್ಷಗಳಾಗಿದೆ. ಅಲ್ಲಿನ ರೈತರಿಗೆ ಕೊಡಬೇಕಾಗಿರತಕ್ಕಂಥ ಕಬ್ಬಿನ ಹಣವನ್ನು ಸಕ್ಕರೆ ಕಾರ್ಖಾನೆಯವರು ಇದುವರೆಗೂ ಸಂದಾಯ ಮಾಡಿಲ್ಲ. ಮತ್ತೆ ಹರಿಹರದಲ್ಲಿ ಕಿರ್ಲೋಸ್ಕರ್ ಕಂಪನಿಯನ್ನು ನೆಚ್ಚಿಕೊಂಡಿದ್ದಂಥ ಸಣ್ಣ ಸಣ್ಣ ಕಂಪನಿಗಳು ಇವತ್ತಿನ ದಿವಸ ಮುಚ್ಚಿ ಹೋಗಿರುವುದರಿಂದ ಎಲ್ಲರೂ ಕೂಡ ತೊಂದರೆಯನ್ನು ಅನುಭವಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅದೇ ರೀತಿಯಾಗಿ ಕಾರ್ಮಿಕರೂ ಕೂಡ ಇವತ್ತು ಹೊಟ್ಟೆಗೆ ಊಟ ಮಾಡುವುದಕ್ಕೆ ಆಗದ ರೀತಿಯಲ್ಲಿ ಕಷ್ಟ ಪಡುತ್ತಿರುವುದನ್ನು ನಾನು ನೋಡುತ್ತಿದ್ದೇವೆ. ಆದ್ದರಿಂದ, ಈ ಒಂದು ದಿಕ್ಕಿನಲ್ಲಿ ಸರ್ಕಾರ ಈ ಎರಡು ಕಾರ್ಖಾನೆಗಳ ಬಗ್ಗೆ ನಿಗಾ ವಹಿಸಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ದಾವಣಗೆರೆ ಜಿಲ್ಲೆಯಲ್ಲಿ ಲಕ್ಷಾಂತರ ಮೂಟೆ ಮೆಕ್ಕೆ ಜೋಳವನ್ನು ಬೆಳೆಯುತ್ತಿರುವುದು ನಿಮಗೆಲ್ಲಾ ಗೊತ್ತಿದೆ. ಆದ್ದರಿಂದ, ಇಲ್ಲೊಂದು ಮೆಕ್ಕೆ ಜೋಳ ಸಂಸ್ಕರಣ ಘಟಕವನ್ನು ಪ್ರಾರಂಭ ಮಾಡುತ್ತೇವೆಂದು ಕಳೆದ 2 ವರ್ಷಗಳಿಂದ ಸರ್ಕಾರದ ವತಿಯಿಂದ ಮತ್ತು ಈಗಿನ ಜಿಲ್ಲಾ ಮಂತ್ರಿಗಳಾಗಿರುವ ಶ್ರೀ ರವೀಂದ್ರನಾಥ್ ರವರೂ ಕೂಡ ಕಳೆದ ವರ್ಷ ಇದರ ಬಗ್ಗೆ ಭರವಸೆಯನ್ನು ಕೊಟ್ಟಿದ್ದರು. ಆದರೆ, ಅದರ ಬಗ್ಗೆ ಇಲ್ಲಿಯವರೆಗೆ ಒಂದು ಮಾಹಿತಿ ಇಲ್ಲದೆ ಇರುವುದನ್ನು ನಾವು ನೋಡುತ್ತಿದ್ದೇವೆ. ಈ ಒಂದು ನಿಟ್ಟಿನಲ್ಲಿ ದಾವಣಗೆರೆಯಲ್ಲಿ ಕೈಗಾರಿಕೆ ಸ್ಥಾಪನೆಯಾಗುವಂಥ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಮತ್ತೆ ದಾವಣಗೆರೆಯಲ್ಲಿ ಜವಳಿ ಪಾರ್ಕ್‌ನ್ನು ಪ್ರಾರಂಭ ಮಾಡಲಾಗುತ್ತದೆಂದು ಇದಕ್ಕೆ

ಸಂಬಂಧಪಟ್ಟಂತೆ ಬಹಳಷ್ಟು ಕೆಲಸವನ್ನು ಫಾಸ್ಟ್ ಆಗಿ ಮಾಡಿದರು. ಈಗ ಅದನ್ನು ನಿಲ್ಲಿಸಿದ್ದಾರೆ. ಆದರೆ, ಇದುವರೆಗೂ ಕೂಡ ಅದರ ಬಗ್ಗೆ ಯಾವುದೇ ಕೆಲಸ ಪ್ರಾರಂಭವಾಗಿಲ್ಲ. ಈ ಒಂದು ಜವಳಿ ಪಾರ್ಕ್ ಮಾಡಬೇಕಾದರೆ ಆಂಧ್ರ ಪ್ರದೇಶದಲ್ಲಿರತಕ್ಕಂಥ ರೀತಿಯಲ್ಲಿಯೇ ಇಲ್ಲಿಯೂ ಕೂಡ ಮಾಡಿದರೆ ಮಾತ್ರ ಇಲ್ಲಿ ನಡೆಯುತ್ತದೆ. ಇಲ್ಲದಿದ್ದರೆ ನಡೆಯುವುದಿಲ್ಲ. ಆಂಧ್ರ ಪ್ರದೇಶದಲ್ಲಿ ಕಡಿಮೆ ರೇಟ್‌ನಲ್ಲಿ ಪವರ್ ಮತ್ತು ನೀರನ್ನು ಒದಗಿಸತಕ್ಕಂಥ ವ್ಯವಸ್ಥೆಯನ್ನು ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ, ಆಂಧ್ರದ ಮಾದರಿಯಲ್ಲಿ ಈ ಒಂದು ಜವಳಿ ಪಾರ್ಕ್‌ನ್ನು ನಿರ್ಮಾಣ ಮಾಡಿ ಅಭಿವೃದ್ಧಿ ಪಡಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯ ಮಂತ್ರಿಯವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಮತ್ತೆ ಭದ್ರಾ ನಾಲೆಯನ್ನು ರಿಪೇರಿ ಮಾಡುವ ಕೆಲಸವನ್ನು ಕಳೆದ ವರ್ಷ ಪ್ರಾರಂಭ ಮಾಡಲಾಗಿತ್ತು. ಆದರೆ, ಆ ಕೆಲಸ ಅರ್ಧಕ್ಕೆ ನಿಂತುಕೊಂಡಿದೆ. ಈ ಸಾರಿ ಪೂರ್ಣ ರಿಪೇರಿ ಕೆಲಸವನ್ನು ಮಾಡಿಸುತ್ತೇವೆಂದು ಈ ಬಜೆಟ್‌ನಲ್ಲಿ ಭರವಸೆಯನ್ನು ಕೊಟ್ಟಿದ್ದೀರಿ. ಆದರೆ, ಕಳೆದ ಸಾರಿ ಅಲ್ಲಿ ಆಗಿರತಕ್ಕಂಥ ಕಾಮಗಾರಿಗಳು ಕಳಪೆ ಇಂದ ಕೂಡಿದೆ ಎಂದು ಅಲ್ಲಿರತಕ್ಕಂಥ ರೈತ ಮುಖಂಡರು ಮತ್ತು ಎಲ್ಲಾ ಪಕ್ಷದವರೂ ಸಹ ಹೇಳಿರತಕ್ಕಂಥದನ್ನು ನಾವು ಕೇಳಿದ್ದೇವೆ. ಆದ್ದರಿಂದ, ಈ ಸಾರಿ ಕಳಪೆ ಕೆಲಸ ಆಗದ ರೀತಿಯಲ್ಲಿ ಅಂದರೆ, ಒಳ್ಳೆಯ ಕೆಲಸ ಆಗುವ ರೀತಿಯಲ್ಲಿ ಅಲ್ಲಿ ಕೆಲಸವನ್ನು ಪ್ರಾರಂಭ ಮಾಡಿಸಿ ಅಲ್ಲಿನ ಪ್ರದೇಶದ ರೈತರಿಗೆ ತೊಂದರೆಯಾಗದಂಥ ರೀತಿಯಲ್ಲಿ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಇಡೀ ಕರ್ನಾಟಕ ರಾಜ್ಯದಲ್ಲಿಯೆ ದಾವಣಗೆರೆ ವ್ಯಾಪಾರದಲ್ಲಿ ಮುಖ್ಯ ಪ್ರದೇಶವಾಗಿದೆ. ಆದರೆ, ಅಲ್ಲಿ ಇವತ್ತಿನವರೆಗೂ ಕೂಡ ಒಂದು ಏರ್‌ಪೋರ್ಟ್ ಆಗದೆ ಇರುವುದನ್ನು ನೋಡಿದರೆ ದಾವಣಗೆರೆಯನ್ನು ಪೂರ್ಣವಾಗಿ ನಿರ್ಲಕ್ಷಿಸಿದ್ದಾರೆಂದು ಹೇಳಿದರೆ ತಪ್ಪಗಲಾರದು. ಏಕೆಂದರೆ, ನಾವು ನೋಡುತ್ತಿರುವ ಹಾಗೆ ಸರ್ಕಾರ ಬದಲಾಗುತ್ತಾ ಹೋದಾಗ ಮುಂದೆ ಯಾವ ಮುಖ್ಯ ಮಂತ್ರಿ ಬರುತ್ತಾರೆಯೋ ಅವರ ಊರುಗಳಿಗೆ ಒಂದೊಂದು ಏರ್‌ಪೋರ್ಟ್ ಆಗುತ್ತಿರುವುದನ್ನು ನೋಡುತ್ತಿದ್ದೇವೆ. ಏಕೆಂದರೆ, ಒಂದು ಕಡೆ ಹಾಸನದಲ್ಲಿ ಈಗಾಗಲೇ ಆಗುತ್ತಿದೆ. ಮತ್ತೆ ಮಾನ್ಯ ಯಡಿಯೂರಪ್ಪನವರು ಬಂದ ಮೇಲೆ ಶಿವಮೊಗ್ಗದಲ್ಲಿ ಮಾಡುತ್ತಿದ್ದಾರೆ. ಅದಕ್ಕಿಂತಲೂ ಮುಂಚೆ ಮಾನ್ಯ ಬೊಮ್ಮಾಯಿ ಸಾಹೇಬರು ಇದ್ದಾಗ ಹುಬ್ಬಳ್ಳಿಯಲ್ಲಿ ಮಾಡುವುದಕ್ಕೆ ಪ್ರಾರಂಭ ಮಾಡಿದರು. ಈ ರೀತಿಯಾಗಿ ಮುಖ್ಯ ಮಂತ್ರಿಗಳು ಆದಂಥ ಸಂದರ್ಭದಲ್ಲಿ ಅವರವರ ಪ್ರದೇಶಗಳಿಗೆ ಏರ್‌ಪೋರ್ಟ್‌ಗಳನ್ನು ಮಾಡತಕ್ಕಂಥ

ಪದ್ಧತಿ ರೂಡಿಯಲ್ಲಿ ಆಗುತ್ತಾ ಬಂದಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಯಾವ ಪ್ರದೇಶದಲ್ಲಿ ಹೆಚ್ಚಿನ ವ್ಯವಹಾರ ನಡೆಯುತ್ತಿದೆಯೋ ಅಂಥ ಕಡೆ ಏರ್‌ಪೋರ್ಟ್ ಮಾಡಿದರೆ ಅನುಕೂಲವಾಗುತ್ತದೆಯೇ ಎಂಬುದನ್ನು ನೋಡಿ ಮಾಡಬೇಕೆಂದು ಹೇಳುತ್ತೇನೆ. ಈಗ ನಮ್ಮ ದಾವಣಗೆರೆಯಲ್ಲಿ ಒಂದು ಏರ್‌ಪೋರ್ಟ್‌ನ್ನು ಪ್ರಾರಂಭ ಮಾಡಬೇಕೆಂದು ನಾನು ಈಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇನೆ. ಇದನ್ನು ಮಾಡುವುದಕ್ಕೆ ಅಲ್ಲಿ ಯಲ್ಲಮ್ಮ ಕಾಟನ್ ಮಿಲ್ಸ್‌ನ 200 ಎಕರೆ ಜಮೀನು ಕೂಡ ಇದೆ. ಈ ಕೈಗಾರಿಕೆ ಈಗ ನಿಂತು ಹೋಗಿದೆ. ಈ ಜಾಗ ಈಗ ಕೇಂದ್ರ ಸರ್ಕಾರದ ವಶದಲ್ಲಿದೆ. ಆದ್ದರಿಂದ ಕೇಂದ್ರ ಸರ್ಕಾರದ ಜೊತೆ ಪತ್ರವ್ಯವಹಾರ ಮಾಡಿ ಆ ಜಾಗವನ್ನು ತೆಗೆದುಕೊಂಡರೆ ಏರ್‌ಪೋರ್ಟ್‌ಗೆ ಬಹಳ ಸೂಕ್ತವಾದ ಜಾಗವಾಗುತ್ತದೆಂದು ತಮ್ಮ ಗಮನಕ್ಕೆ ತರುವುದಕ್ಕೆ ನಾನು ಇಷ್ಟಪಡುತ್ತೇನೆ. ಮತ್ತೆ ತಮ್ಮ ಸಂಕಲ್ಪ ಪ್ರಣಾಳಿಕೆಯಲ್ಲಿ ಬಡವರಿಗೆ 2 ರೂಪಾಯಿಯಲ್ಲಿ ಅಕ್ಕಿಯನ್ನು ಕೊಡುತ್ತೇವೆಂದು ಹೇಳಿದ್ದೀರಿ. ಆದರೆ, ಇದರ ಬಗ್ಗೆ ತಮ್ಮ ಮುಂಗಡ ಪತ್ರದಲ್ಲಿ ಯಾವುದೇ ಪ್ರಸ್ತಾಪವನ್ನು ಮಾಡಿಲ್ಲ. ಬಡವರಿಗೆ ಆದಷ್ಟು ಜಾಗ್ರತೆ 2 ರೂಪಾಯಿಯಲ್ಲಿ ಅಕ್ಕಿಯನ್ನು ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಮತ್ತೆ 10 ಹೆಚ್. ಪಿ. ವರೆಗೆ ಉಚಿತ ವಿದ್ಯುತ್ ಕೊಡುತ್ತೇವೆಂದು ಹೇಳಿದ್ದೀರಿ. ಮತ್ತೊಂದು ಕಡೆ ವಿದ್ಯುತ್ ಸ್ಕೇರ್‌ಸಿಟಿ ಇರತಕ್ಕಂಥದನ್ನು ನೋಡುತ್ತಿದ್ದೇವೆ. ಇದಕ್ಕೆ ಯಾರು ಹೊಣೆ ಎಂಬುದರ ಬಗ್ಗೆ ನಾವು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ, ಕೆ.ಇ.ಬಿ.ಯವರು ಸರಿಯಾದ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿದ್ದರೆ ನಮ್ಮ ಸರ್ಕಾರದವರು ಜಿಂದಾಲ್, ರಿಲಿಯನ್ಸ್ ಅಥವಾ ಟಾಟಾ ಕಂಪನಿಗಳಿಂದ ನಮಗೆ 500 ಮೆ.ವ್ಯಾ. ವಿದ್ಯುತ್‌ನ್ನು ಕೊಡಿ ಎಂದು ಕೇಳತಕ್ಕಂಥ ಪರಿಸ್ಥಿತಿ ಬರುತ್ತಿರಲಿಲ್ಲ ಏಕೆಂದರೆ, ನಮ್ಮ ಕರ್ನಾಟಕದಲ್ಲಿ ಕೆ.ಇ.ಬಿ.ಯವರು ಏನು ಮಾಡುತ್ತಿದ್ದಾರೆಂದರೆ, ಯಾವುದೇ ಸಕ್ಕರೆ ಕಂಪನಿಯವರು ಪಿ.ಪಿ.ಎ.ಗೆ ಅಗ್ರಿಮೆಂಟ್ ಮಾಡಿಕೊಳ್ಳುವುದಕ್ಕೆ ಹೋದರೆ ಅವರನ್ನು ನಿರ್ಲಕ್ಷ್ಯ ಭಾವನೆಯಿಂದ ಕಂಡು 2.80 ಪೈಸೆ, 3.00 ರೂಪಾಯಿ ಅಥವಾ 3.20 ಪೈಸೆ ಕೊಡುತ್ತೇವೆಂದು ಚೌಕಾಸಿ ವ್ಯಾಪಾರ ಮಾಡಿ ಇವತ್ತಿನ ದಿವಸ ನಮ್ಮ ಸರ್ಕಾರಕ್ಕೆ ತೊಂದರೆಯನ್ನು ಕೊಟ್ಟಿದ್ದಾರೆಂದು ಹೇಳಿದರೆ ತಪ್ಪಾಗಲಾರದೆಂದು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ಇವತ್ತಿನ ದಿವಸ ರಿಲೆಯನ್ಸ್ ಮತ್ತು ಟಾಟಾದವರು ಒಂದು ಯೂನಿಟ್‌ಗೆ 7 ರೂ. ಗಳನ್ನು ಪವರ್ ಸಪ್ಲೈ ಮಾಡತಕ್ಕಂಥ ಕಂಪನಿಗಳವರಿಗೆ ಹಣವನ್ನು ಕೊಡುತ್ತಾರೆ. ಇವತ್ತು ಜಿಂದಾಲ್ ನಮ್ಮ ಕರ್ನಾಟಕದಲ್ಲಿಯೇ ಇತ್ತು. ನಮ್ಮ ಉತ್ತರ

ಕರ್ನಾಟಕದಲ್ಲಿ ಕೂಡ ಇವತ್ತು ಅನೇಕ ಸಕ್ಕರೆ ಕಾರ್ಖಾನೆಗಳಲ್ಲಿ ವಿದ್ಯುಚ್ಛಕ್ತಿಯನ್ನು ತಯಾರು ಮಾಡಿ ಇವತ್ತು ನಮ್ಮ ಕೆ.ಇ.ಬಿ.ಗೆ ಕೊಡದೆ ನಾವೆಲ್ಲಾ ಕೂಡ ಟಾಟಾ ಮತ್ತು ರಿಲೆಯನ್ಸ್ ಕಂಪನಿಯವರಿಗೆ ಏಕೆ ಕೊಡುತ್ತಿದ್ದಾರೆ ಎನ್ನುವುದನ್ನು ಸರ್ಕಾರ ಗಮನಿಸಿ ನೀವು ಕೂಡ ಇಲ್ಲಿ ರೇಟ್‌ನ್ನು ಹೆಚ್ಚಿಗೆ ಕೊಟ್ಟು ನಮ್ಮ ಪವರ್‌ನ್ನು ನಮ್ಮ ಸರ್ಕಾರದವರೆ ಇಟ್ಟುಕೊಳ್ಳುವ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿದರೆ ಸರ್ಕಾರಕ್ಕೆ ಒಳ್ಳೆಯದು ಆಗುತ್ತದೆ. ಅವರು ತಯಾರು ಮಾಡುತ್ತಿರುವಂಥ ಕಂಪನಿಗಳಿಗೂ ಕೂಡ ಅನುಕೂಲವಾಗುತ್ತದೆ. ಅವರು ಬೇರೆ ಕಡೆ ಹುಡುಕಿಕೊಂಡು ಹೋಗಲಿಕ್ಕೆ ಆಗುವುದಿಲ್ಲ. ಆ ನಿಟ್ಟಿನಲ್ಲಿ ತಾವು ಈ ಎಲೆಕ್ಟ್ರಿಕ್‌ಸಿಟಿಯನ್ನು ಮರು ವಿಮರ್ಶೆ ಮಾಡಿ ಬೇರೆ ಕಡೆ ಯಾವ ರೀತಿ ಇದೆಯೋ ಆ ರೇಟಿಗೆ ತಕ್ಕಂತೆ ತಾವು ಕೂಡ ಪಾವತಿ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಮಗೆಲ್ಲಾ ಗೊತ್ತಿರುವಂತೆ ನಮ್ಮ ದಾವಣಗೆರೆಯಲ್ಲಿ ಸುಮಾರು 20 ಸಾವಿರ ಆಶ್ರಯ ಮನೆಗಳು ಇವೆ. ಆಶ್ರಯ ಮನೆಗಳಲ್ಲಿ ಇರುವವರು ಕೂಡ ಬಡವರು, ಆಶ್ರಯ ಮನೆಗಳಲ್ಲಿ ಶ್ರೀಮಂತರು ಯಾರೂ ವಾಸ ಮಾಡುವುದಿಲ್ಲ. ಈಗ ಬಡ ರೈತರು ಎಂದು ಹೇಳಿಬಿಟ್ಟು ಇವತ್ತು ಎಲ್ಲಾ ಅನುಕೂಲತೆಗಳ ಜೊತೆಯಲ್ಲಿ ಸಾಲವನ್ನು ಮನ್ನಾ ಮಾಡಿದ್ದೀರಿ. ಒಂದು ಕಡೆ ಕೇಂದ್ರ ಸರ್ಕಾರದವರು ಮನ್ನಾ ಮಾಡುತ್ತಾರೆ, ರಾಜ್ಯ ಸರ್ಕಾರದವರು ಕೂಡ ಮನ್ನಾ ಮಾಡುತ್ತೇವೆಂದು ಹೇಳುತ್ತಿರುತ್ತಾರೆ. ಆದರೆ ಈ ಬಡವರು ಆಶ್ರಯ ಮನೆಯನ್ನು ಕಟ್ಟಿಕೊಂಡಿರತಕ್ಕಂಥವರಿಗೆ ಬಡವರ ಮನೆಗೆ ಅವರಿಗೆ ಪ್ರತಿ ತಿಂಗಳು ಕಂತು ಹಣವನ್ನು ಕೊಡಬೇಕೆಂದು ಹೇಳಿಬಿಟ್ಟು ತಾವು ಆದೇಶವನ್ನು ಮಾಡಿದ್ದೀರಿ. ಅವರು ಎಲ್ಲಿಂದ ಹಣವನ್ನು ತಂದು ಕಟ್ಟಬೇಕು. ಆ ದಿಶೆಯಲ್ಲಿ ನಾವು ಅವರಿಗೆ ಒತ್ತಾಯವನ್ನು ಮಾಡಿದರೆ ಸಾಲವನ್ನು ಮನ್ನಾ ಮಾಡದೆ ಒತ್ತಾಯವನ್ನು ಮಾಡಿದ್ದೇ ಆದರೆ ಈಗ ಯಾವ ರೀತಿ ಇವತ್ತಿನ ದಿವಸ ರೈತರು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾರೋ ಅದೇ ರೀತಿ ಈ ಆಶ್ರಯ ಮನೆಯವರು ಕೂಡ ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಪರಿಸ್ಥಿತಿ ಒದಗುತ್ತದೆ ಎನ್ನುವಂಥದ್ದನ್ನು ನಾವು ಗಮನಿಸಬೇಕಾಗುತ್ತದೆ ಎಂದು ನಾನು ನನ್ನ ಅಭಿಪ್ರಾಯವನ್ನು ಹೇಳಲಿಕ್ಕೆ ತುಂಬಾ ಇಷ್ಟಪಡುತ್ತೇನೆ. ಈಗಾಗಲೇ ಕಳೆದ ವರ್ಷ MLA grant ಎಂದು ಹೇಳಿ ಒಂದು ಕೋಟಿ ರೂ. ಗಳನ್ನು ಮಂಜೂರು ಮಾಡಿಬಿಟ್ಟು ಅದರಲ್ಲಿ ಬರಿ 50 ಲಕ್ಷ ರೂ.ಗಳು ಸರ್ಕಾರದಿಂದ ಬಂತು. ಈಗ ಕೇಂದ್ರ ಸರ್ಕಾರದವರು ಕೂಡ ಒಂದು ವರ್ಷಕ್ಕೆ 2 ಕೋಟಿ ರೂ.ಗಳನ್ನು ಅವರು MP ಗಳಿಗೆ grant ನ್ನು ಕೊಡುವುದನ್ನು ನಾವು ನೋಡುತ್ತಿದ್ದೇವೆ. ಇವತ್ತು ನಗರಸಭೆಯ ಆರ್ಥಿಕ

ಪರಿಸ್ಥಿತಿ ಹೇಗೆ ಇದೆ ಎಂದು ತಮಗೆ ಗೊತ್ತಿದೆ. ಆದ್ದರಿಂದ ನಾವು ಎಲ್ಲಿಯಾದರೂ ಕೂಡ ಪಟ್ಟಣದಲ್ಲಿ inspection ಗೆ ಎಂದು ಹೋದರೆ ಅಲ್ಲಿರತಕ್ಕಂಥ ಬಡವರು, ಚರಂಡಿ ಇಲ್ಲ, ಇಲ್ಲಿ ರಸ್ತೆ ಇಲ್ಲ, ಇಲ್ಲಿ ಎಲ್ಲಾ ತರಹದ facilities ಇಲ್ಲವೆಂದು ಪ್ರತಿಯೊಬ್ಬರೂ ಮನವಿಯನ್ನು ಮಾಡಿಕೊಳ್ಳುವುದನ್ನು ನಾವು ನೋಡುತ್ತಿದ್ದೇವೆ. ಅಲ್ಲಿ ನಾವು ಏನಾದರೂ ಕೆಲಸ ಮಾಡಿಸಿಕೊಡಬೇಕೆಂದರೆ, ನಗರಸಭೆಯವರಿಗೆ ನಾವು ಹೇಳಿದರೆ, ನಮ್ಮಲ್ಲಿ ಹಣ ಇಲ್ಲ, ನಾವು ಏನು ಮಾಡೋಣವೆಂದು ಹೇಳುತ್ತಾರೆ. ಅದಕ್ಕೋಸ್ಕರವಾಗಿ ತಾವು ಇಲ್ಲಿ ಮುಂಗಡ ಪತ್ರದಲ್ಲಿ ಹೇಳದಿದ್ದರೂ ಕೂಡ ಹಿಂದೆ ಕೊಡುತ್ತಿದ್ದ MLA grant ನ್ನು ಒಂದು ಕೋಟಿ ರೂ.ಗಳು ಇರುವುದನ್ನು ಎರಡು ಕೋಟಿ ರೂ.ಗಳಿಗೆ ಏರಿಸಿ ಮಾನ್ಯ ಯಡಿಯೂರಪ್ಪನವರು ಎಲ್ಲಾ MLA ಗಳ ಕೆಲಸವನ್ನು ಸುಸೂತ್ರವಾಗಿ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(ಗೊಂದಲ)

**ಶ್ರೀ ಕೆ. ಎಂ. ವೀರುಪಾಕ್ಷಪ್ಪ:** ನಿಮಗೆ ಆಶ್ರಯ ಮನೆಗಳು ಬೇಡವೇ? MLA grant ಇರಲಿ, ಆಶ್ರಯ ಮನೆಗಳು ಬೇಕೋ ಬೇಡವೋ? ಹಾಗಾದರೆ MLA grant ಏಕೆ ಬೇಕು? ನಿಮಗೆ ಆಶ್ರಯ ಮನೆ ಬೇಡವೆಂದರೆ ನಮಗೆ MLA grant ಬೇಡ (ಈ ಹಂತದಲ್ಲಿ ಮಾನ್ಯ ಶಾಸಕರು ತಮ್ಮ ಸ್ಥಾನವನ್ನು ಬಿಟ್ಟು ಬೇರೆ ಸ್ಥಾನದಲ್ಲಿ ಕುಳಿತು ಮಾತನಾಡಿದರು)

**ಅಧ್ಯಕ್ಷರು:** ಮಾನ್ಯ ವೀರುಪಾಕ್ಷಪ್ಪನವರೆ, ಅದು ನಿಮ್ಮ ಸ್ಥಾನವೇ? ನಿಮ್ಮ ಸ್ಥಾನಕ್ಕೆ ಹೋಗಿ, ನೀವು ಮುಂದುವರೆಸಿ.

(ಗೊಂದಲ)

**ಶ್ರೀ ಕೆ. ಎಂ. ವೀರುಪಾಕ್ಷಪ್ಪ:** ನೀವು ಆಶ್ರಯ ಮನೆ ಬೇಕು ಎಂದು ಹೇಳಿದರೆ, ನಾವು MLA grant ಇರಲಿ ಎಂದು ಹೇಳುತ್ತೇವೆ. ಹಾಗಾದರೆ ಆಶ್ರಯ ಮನೆ ಬೇಕು ಎಂದು ಎದ್ದು ಹೇಳಿ. ನಿಮ್ಮ ಡಾಕ್ಟರರು ಬೇಡವೆಂದು ಹೇಳುತ್ತಾರೆ.

**ಶ್ರೀ ರಮಾನಾಥ್ ರೈ:** ಆಶ್ರಯ ಮನೆ ಬೇಡವೆಂದು ಯಾರು ಹೇಳಿದ್ದಾರೆ.

(ಗೊಂದಲ)

**ಅಧ್ಯಕ್ಷರು:** ಅವರವರ ಅಭಿಪ್ರಾಯವನ್ನು ಅವರು ಹೇಳಿದ್ದಾರೆ. ನೀವು ನಿಮ್ಮ ಅಭಿಪ್ರಾಯವನ್ನು ಹೇಳಿದ್ದೀರಿ, ಅದನ್ನು ಬಿಡಿ.

ಒಬ್ಬ ಮಾನ್ಯ ಸದಸ್ಯರು: ಬಹುಶಃ ಅದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ

**ಅಧ್ಯಕ್ಷರು:** ನೀವು ಕುಳಿತುಕೊಳ್ಳಿ, ನಿಮಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡತ್ತೇವೆ. ಶ್ಯಾಮನೂರವರೆ ತಾವು ಮುಂದುವರೆಸಿ.

**ಶ್ರೀ ಕೆ. ಎಂ. ವೀರುಪಾಕ್ಷಪ್ಪ:** ಆಶ್ರಯ ಮನೆ ಬೇಕು ಎಂದು ತಾವೂ ಕೈ ಎತ್ತಿ, ನಾವು ಕೈ ಎತ್ತುತ್ತೇವೆ. ಆಶ್ರಯ ಮನೆಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಹೇಳಿ.

**ಶ್ರೀ ಶಾಮನೂರು ಶಿವಶಂಕರಪ್ಪ:** ಮಾನ್ಯ ಅಧ್ಯಕ್ಷರೆ, ತುಂಗಭದ್ರಾ ನದಿಯಿಂದ ದಾವಣಗೆರೆ, ಜಗಳೂರು ಮತ್ತು ಹರಪನಹಳ್ಳಿ ತಾಲ್ಲೂಕಿನ 22 ಕೆರೆಗಳಿಗೆ ಏತ ನೀರಾವರಿ ಯೋಜನೆಯನ್ನು ಮುಂಗಡಪತ್ರದಲ್ಲಿ ಯಾವುದೇ ಸುಳಿವನ್ನು ನೀಡಿಲ್ಲ. ಬಹಳ ದಿವಸದಿಂದ ನೆನೆಗುದಿಗೆ ಬಿದ್ದಂಥ ಕೆಲಸ, ಈ 22 ಕೆರೆಗಳಿಗೆ ನೀರಾವರಿ ಮಾಡಿ ಈ ತಾಲ್ಲೂಕಿನ ಜನಗಳಿಗೆ ಕುಡಿಯುವ ನೀರಿಗೆ ಅನುಕೂಲ ಮಾಡಿಕೊಡಬೇಕು ಎನ್ನತಕ್ಕಂಥದ್ದನ್ನು ನಾನು ಮತ್ತೊಮ್ಮೆ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಆಶ್ರಯ ಮನೆಗಳಿಗೆ ಸಾಲವನ್ನು ಮನ್ನಾ ಮಾಡಬೇಕು. ಸರ್ಕಾರ ಇದರ ಬಗ್ಗೆ ತೀವ್ರವಾಗಿ ಯೋಚನೆ ಮಾಡಿ ಸಾಲವನ್ನು ಮನ್ನಾ ಮಾಡಬೇಕೆಂದು ಹೇಳಿಬಿಟ್ಟು ನಾನು ಮನವಿಯನ್ನು ಮಾಡಿಕೊಂಡು ನನಗೂ ಎರಡು ಮಾತನಾಡಲಿಕ್ಕೆ ಆಸ್ಪದ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ಅಭಿನಂದಿಸಿ, ಈ ಎರಡು ಕೋಟಿ ರೂ.ಗಳನ್ನು MLA fund ನ್ನು ಮಾನ್ಯ ಯಡಿಯೂರಪ್ಪನವರು ಮಾಡಿಕೊಡುತ್ತಾರೆನ್ನುವ ನಂಬಿಕೆಯನ್ನು ವ್ಯಕ್ತಪಡಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ. ಜೈ ಹಿಂದ, ಜೈ ಕರ್ನಾಟಕ.

**ಶ್ರೀ ಕೆ. ಎಂ. ಶಿವಲಿಂಗೇಗೌಡ (ಅರಸೀಕೆರೆ):** ಮಾನ್ಯ ಅಧ್ಯಕ್ಷರೆ, ಹೊಸದಾಗಿ ವಿಧಾನಸಭೆ ಪ್ರವೇಶ ಮಾಡಿದಂಥ ನನಗೆ ಈ ರಾಜ್ಯದ ಮುಂಗಡ ಪತ್ರದಲ್ಲಿ ಮತ್ತು ಡಿಮಾಂಡ್ಸ್‌ನ ಬಗ್ಗೆ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ತಮಗೆ ನನ್ನ ಅಭಿನಂದನೆಗಳು. ಈ ರಾಜ್ಯದ ಬಜೆಟ್‌ನ ಬಗ್ಗೆ ಮಾತನಾಡುವುದಾದರೆ ಇಂದು ಸಂಕಲ್ಪದ ಹೆಸರಿನಲ್ಲಿ ಈ ರಾಜ್ಯದಲ್ಲಿ ಚುನಾವಣೆಗಳ ಭರವಸೆಯನ್ನು ಈ ರಾಜ್ಯದ ಜನಗಳಿಗೆ ನೀಡಿ ಇವತ್ತು ಪಕ್ಷೇತರರ ಸಹಕಾರದಿಂದ ಬಿ.ಜೆ.ಪಿ. ಸರ್ಕಾರ ಅಸ್ಥಿತ್ವದಲ್ಲಿದೆ. ಮಾನ್ಯ ಯಡಿಯೂರಪ್ಪನವರು ಅದರ ನಾಯಕತ್ವವನ್ನು ವಹಿಸಿದ್ದಾರೆ. ಆದರೆ ಈ ಪ್ರಜಾಪ್ರಭುತ್ವದ ವ್ಯವಸ್ಥೆಯೊಳಗೆ ಮುಂಗಡ ಪತ್ರವನ್ನು ಮಂಡನೆ ಮಾಡತಕ್ಕಂಥ ಕಾಲದಲ್ಲಿ ಚರ್ಚೆಯನ್ನು ಮುಂಗಡ ಪತ್ರಕ್ಕೆ ಸೀಮಿತವಾಗಿಲ್ಲದೆ ಡಿಮಾಂಡ್ಸ್‌ನ್ನು ಒಟ್ಟಿಗೆ ಇಟ್ಟಿರುವುದು ನನಗೆ ಸ್ವಲ್ಪ ವೈಯುಕ್ತಿಕ ಅಸಮಾಧಾನವನ್ನು ತಂದಿದೆ. ಕಾರಣ ಬಜೆಟ್‌ನ ಬಗ್ಗೆ ಬೇಕಾದಷ್ಟು ಚರ್ಚೆಯನ್ನು ಸದನದಲ್ಲಿ ಮಾಡಬಹುದು. ಆದರೆ ಬಹಳಷ್ಟು ಜನ ಹೊಸ ಶಾಸಕರು ಇವತ್ತು ಆಯ್ಕೆಯಾಗಿ ಬಂದಿರತಕ್ಕಂಥ ಈ ಒಂದು ಸನ್ನಿವೇಶದಲ್ಲಿ ತಮ್ಮ ಈ ಒಂದು ಕ್ಷೇತ್ರಗಳ ಅಭಿವೃದ್ಧಿಯ ಬಗ್ಗೆ ತಮ್ಮ ಕ್ಷೇತ್ರದಲ್ಲಿರುವ ಸಮಸ್ಯೆಗಳ ಬಗ್ಗೆ ಸವಿಸ್ತಾರವಾದ ಚರ್ಚೆಯನ್ನು ಮಾಡತಕ್ಕಂಥ

ಕಾಲದಲ್ಲಿ ನೀವು ಎರಡನ್ನು ಒಟ್ಟಿಗೆ ಇಟ್ಟಿರತಕ್ಕಂಥದ್ದು ಆ ಕ್ಷೇತ್ರಗಳ ಸಮಸ್ಯೆಯನ್ನು ಹೇಳಿಕೊಳ್ಳಲಿಕ್ಕೆ ಬಹಳ ತೊಂದರೆಯಾಗುತ್ತದೆ ಎನ್ನುವುದನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ಆದರೆ ಈಗಾಗಲೇ ಮುಂದುವರೆದಿದೆ ಏನು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಈ ಸಂಕಲ್ಪದ ಒಂದು ವಿಚಾರವನ್ನು ಮುಂದಿಟ್ಟು ಈ ರಾಜ್ಯದ ಅಧಿಕಾರಕ್ಕೆ ಬಂದರು ಅಧಿಕಾರಕ್ಕೆ ಬಂದ ಮೇಲೆ ಬಹುಶಃ ನಾನು ಯಾವುದೇ ಕಾರಣದಿಂದ ಯಾರನ್ನು ದ್ವೇಶಿಸತಕ್ಕಂಥ ದೃಷ್ಟಿಯಿಂದ ಈ ಮಾತನ್ನು ಆಡುತ್ತಿಲ್ಲ. ಶ್ರೀಮಾನ್ ಯಡಿಯೂರಪ್ಪನವರು 1 ಘಂಟೆ 13 ನಿಮಿಷ ಬಹಳ ಸವಿಸ್ತಾರವಾಗಿರತಕ್ಕಂಥ ಬಜೆಟ್‌ನ್ನು ಮಂಡನೆ ಮಾಡಿದರು. ಬಹಳ ಕಷ್ಟಪಟ್ಟು ಆಯಾಸಪಟ್ಟು ಓದಿದರು. ಆದರೆ ಆ ಸಂದರ್ಭದಲ್ಲಿ ಅಪ್ಪಿತಪ್ಪಿ ಒಂದು ಸಾರಿ ಎಂದು ಕಾಣುತ್ತದೆ ಬಜೆಟ್‌ನಲ್ಲಿ ಹಾಸನ ಜಿಲ್ಲೆಯ ಹೆಸರನ್ನು ಪ್ರಸ್ತಾಪ ಮಾಡಿದರು. ಅದನ್ನು ಬಿಟ್ಟರೆ ಮತ್ತೆ ಪ್ರಸ್ತಾಪ ಮಾಡಲಿಕ್ಕೆ ಪ್ರಯತ್ನವನ್ನು ಮಾಡಲಿಲ್ಲ. ಬಹುಶ ಇದರ ಹಿನ್ನಲೆ ನನಗೆ ಗೊತ್ತಿಲ್ಲ. ಆದರೂ ಸಹ ಹಾಸನ ಜಿಲ್ಲೆಯ ಶಾಸಕನಾಗಿ ಈ ಸದನದಲ್ಲಿ ಕುಳಿತಿರತಕ್ಕಂಥ ಸಂದರ್ಭದಲ್ಲಿ ಈ ಒಂದು ವಿಚಾರವನ್ನು ನೋಡಿ ನನ್ನ ಮನಸ್ಸಿಗೆ ಬಹಳ ಬೇಸರವಾಯಿತು ಅದರೂ ಕೂಡ ಚಿಂತೆಯಿಲ್ಲ. ಆದರೆ ಇವತ್ತು ರೈತರ ಹೆಸರಿನಲ್ಲಿ ಏನು ಇವತ್ತು ಒಂದು ಸಾವಿರ ರೂಪಾಯಿಗಳನ್ನು ರೈತರಿಗೆ ರಸಗೊಬ್ಬರ ಮತ್ತು ಬಿತ್ತನೆ ಬೀಜಗಳನ್ನು ಕೊಳ್ಳುವುದಕ್ಕೆ ಧನಸಹಾಯವನ್ನು ಕೊಡಬೇಕೆನ್ನುವಂಥಹ ನಿರ್ಣಯವನ್ನು ಸರ್ಕಾರ ಏನು ತೆಗೆದುಕೊಂಡಿದೆ. ಇದರ ಬಗ್ಗೆ ನಾನು ಮಾತನಾಡುವುದಾದರೆ ಏತಕ್ಕೋಸ್ಕರವಾಗಿ ರೈತರನ್ನು ಈ ರೀತಿಯ ಅಗ್ಗದ ಪ್ರಚಾರಕ್ಕಾಗಿ ಸಿಕ್ಕಿಸುತ್ತೀರಿ. ಆ ರೀತಿಯಾಗಿ ಸಿಕ್ಕಿಸಬೇಡಿ. ಇವತ್ತು ಒಂದು ವಿಚಾರವನ್ನು ನಾನು ಈ ಸಂದರ್ಭದಲ್ಲಿ ನಾನು ಸ್ಪಷ್ಟನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ನೀವು ರೈತರಿಗೆ ಭಿತ್ತನೆ ಬೀಜವನ್ನು ಕೊಡುತ್ತಿದ್ದೀರಿ. ಯಾವ ಯಾವ ಮುಖಾಂತರ ಅಂದರೆ ಕರ್ನಾಟಕ ರಾಜ್ಯ ಬೀಜ ನಿಗಮದ ಮುಖಾಂತರ ಕೆಲವೊಂದು ಸಂಸ್ಥೆಗಳ ಮುಖಾಂತರವಾಗಿ ನೀವು ಬಿತ್ತನೆ ಬೀಜವನ್ನು ಕೊಡುತ್ತಿದ್ದೀರಿ. ನೀವು ಭಿತ್ತನೆ ಬೀಜಗಳನ್ನು ಎಷ್ಟಕ್ಕೆ ಕೊಡುತ್ತಿದ್ದೀರೆಂದರೆ ಇವತ್ತು ಹೈಬ್ರೀಡ್ ತಳಿಗಳನ್ನು ನಾನು ಸೂರ್ಯಕಾಂತಿ ಬೆಳೆ ಒಂದು ಉದಾಹರಣೆಯನ್ನು ಕೊಡುತ್ತೇನೆ. 5 ಸಾವಿರ ರೂಪಾಯಿಗಳಿಗೆ ಯಾವ ರೈತ ಇವತ್ತು ಬೆಳೆಯುತ್ತಿದ್ದಾನೆ. ಆ ರೈತನಿಗೆ ಅಷ್ಟು ಹಣವನ್ನು ಕೊಟ್ಟು ತಂದು ಇವತ್ತು ಅದನ್ನು ಕೆ. ಜಿ. ಒಂದಕ್ಕೆ 50 ರೂಪಾಯಿಗಳನ್ನು ಕೊಟ್ಟು ತಂದು ಇವತ್ತು 145 ರೂಪಾಯಿಗಳಿಗೆ ಮಾರಾಟ ಮಾಡುತ್ತಿದ್ದೀರಿ. ರೈತರಿಗೆ 72 ರೂಪಾಯಿಗಳನ್ನು ಸಬ್ಸಿಡಿಯನ್ನು ಕೊಡುತ್ತಿದ್ದೀರಿ. ಒಂದು ಟನ್‌ಗೆ 5

ಸಾವಿರ ರೂಪಾಯಿಗಳನ್ನು ಕೊಟ್ಟು ಅದನ್ನು ಖರೀದಿ ಮಾಡಿ ಅದು ಯಾವುದೇ ಕಂಪನಿಗಳು ಇರಬಹುದು. ಬೀಜ ನಿಗಮ ಇರಬಹುದು ಇವತ್ತು ಅದನ್ನು ತಂದು ಆ ಬೀಜಗಳನ್ನು 72 ರೂ. ಸಬ್ಸಿಡಿ ದುಡ್ಡನ್ನು ಇವತ್ತು ಯಾರು ತಿನ್ನುತ್ತಿದ್ದಾರೆ. ಅದು ಎಲ್ಲಿ ಹೋಗಿದೆ? ರೈತನಿಗೆ ಕೊಡುತ್ತಿರುವುದು 5 ಸಾವಿರ ರೂಪಾಯಿಗಳು ಅವರ ಮೇಲ್ವಿಚಾರಣೆಯನ್ನು ಆ ಕಂಪನಿಗಳು ನೋಡಬಹುದು. ಇಲ್ಲಾ ಬೀಜ ನಿಗಮದವರು ನೋಡಬಹುದು. ಆದರೆ ಇವತ್ತು ಆ 72 ರೂಪಾಯಿ ಸಬ್ಸಿಡಿಯನ್ನು ಪ್ರಧಾನ ಮಂತ್ರಿಯವರ ಪ್ಯಾಕೇಜ್‌ನಲ್ಲಿ ಕೊಡಬಹುದು. ಇಲ್ಲಾ ರಾಜ್ಯ ಸರ್ಕಾರದ ಧನ ಸಹಾಯವನ್ನು ಕೊಡಬಹುದು. ಆದರೆ ನೀವು ಇವತ್ತು ಒಂದು ಟನ್‌ಗೆ 9.5 ಸಾವಿರ ರೂಪಾಯಿಗಳ ಲಾಭ ಬೇಕೇ? ಒಂದು ಕೆ.ಜಿ.ಗೆ 92 ರೂಪಾಯಿಗಳ ಲಾಭ ಬೇಕೆ? ಅವರು ನಿರ್ವಹಣೆಯನ್ನು ಮಾಡಿ ಅವರು ಬೀಜವನ್ನು ತಂದುಕೊಡುವುದಕ್ಕೆ. ಕಂಪನಿಗಳು, ಕೆಲವು ಅಧಿಕಾರಿಗಳು ಶಾಮೀಲಾಗಿ ಇವತ್ತು ಆ ಒಂದು ವ್ಯವಸ್ಥೆಯನ್ನು ರೈತರಿಗೆ ತಲುಪಬೇಕು. ಅದನ್ನು ಸರಿಯಾದ ರೀತಿಯಲ್ಲಿ ತಲುಪಿಸದೆ. ಇವತ್ತು ಆ ರೈತರ ಸಬ್ಸಿಡಿ ಹಣವನ್ನು ನುಂಗುತ್ತಿದ್ದಾರೆ. ಅಲ್ಲಿಯ ರೈತರ ಹಣವನ್ನು ತೆಗೆದು ಪುನಃ ರೈತರಿಗೆ ಕೊಡುವಂಥಹ ವ್ಯವಸ್ಥೆ ಇದು ಧರ್ಮವೇ ಎನ್ನುವಂತಹ ಮಾತನ್ನು ಈ ಸದನದ ಮುಖಾಂತರ ನಾನು ಕೇಳಬೇಕಾಗುತ್ತದೆ. ಕರ್ನಾಟಕ ರಾಜ್ಯ ಬೀಜ ನಿಗಮ ಇರಬಹುದು. 108 ಕಂಪನಿಗಳು ಇವತ್ತು ಹುಟ್ಟಿಕೊಂಡಿವೆ. ಆ ಕಂಪನಿಗಳಿಗೆ ಇವತ್ತು ಒಂದು ಕೆ.ಜಿ.ಗೆ 72 ರೂಪಾಯಿ ಸಬ್ಸಿಡಿಯನ್ನು ಕೊಟ್ಟರೆ ಇನ್ನು ಉಳಿದಿರುವಂತಹ ಆ ಸಬ್ಸಿಡಿ ಹಣವೆಲ್ಲವನ್ನು ಮತ್ತೆ 50 ರೂಪಾಯಿಗಳು ಮಾತ್ರ, ಯಾರು ಇವತ್ತು ಬೆಳೆಯುತ್ತಾರೆ, ರಾಣಿಬೆನ್ನೂರಿನಲ್ಲಿ ಇರಬಹುದು. ಆ ಭಾಗದ ಶಾಸಕರು ಇಲ್ಲಿ ಇರಬಹುದು. 50 ರೂಪಾಯಿಗಳನ್ನು ಮಾತ್ರ ಆ ರೈತನಿಗೆ ಕೊಡುತ್ತಿರುವುದು. ಇನ್ನು ಉಳಿದಿರುವಂತಹ ಹಣವನ್ನು ಏನು ಮಾಡುತ್ತಾರೆ? 50 ರೂಪಾಯಿಗಳನ್ನು ಕೊಟ್ಟು 145 ರೂಪಾಯಿಗಳಿಗೆ ಮಾರಿ, 72 ರೂಪಾಯಿಗಳೆಂದು ಇಲ್ಲಿ ಸರ್ಕಾರದವರು ಹೇಳುತ್ತಾರೆ. ನಾವು ರೈತರಿಗೆ 50% ಸಬ್ಸಿಡಿಯನ್ನು ಕೊಟ್ಟಿದ್ದೇವೆ. ರೈತರೆಲ್ಲರೂ ಉದ್ಧಾರವಾದರು. ಮತ್ತೇ ರೈತರಿಗೆ ಒಂದು ಸಾವಿರ ರೂಪಾಯಿಗಳ ಧನಸಹಾಯವನ್ನು ಬೀಜವನ್ನು ಕೊಂಡುಕೊಳ್ಳುವುದಕ್ಕೆ ಮಾಡುತ್ತೇವೆಂದು ಹೇಳುತ್ತೀರಿ. ಆದರೆ ಆ ರೈತನಿಗೆ ಕೊಡುವಂತಹ ಸಬ್ಸಿಡಿ ಹಣವನ್ನು ಯಾರು ನುಂಗುತ್ತಿದ್ದಾರೆ. ಅದು ಎಲ್ಲಿ ಹೋಗಿದೆ. ಇದನ್ನು ದಯಮಾಡಿ ಸಂಬಂಧಪಟ್ಟಂತಹ ಸನ್ಮಾನ್ಯ ಅಧ್ಯಕ್ಷರೆ ನಾನು ತಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ. ಇವತ್ತು ತಾವು ಆ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಬೇಕು. ಇವತ್ತು ಸರ್ಕಾರಕ್ಕೆ ತಾವು ಹೇಳಬೇಕಾಗಿದೆ, ಇಲ್ಲಿ ಏನಾಗಿದೆ,

ರೈತರಿಗೆ ಕೊಡುವಂತಹ ಒಂದು ಸಾವಿರ ರೂಪಾಯಿಗಳು ಕೊಡುವಂತಹದ್ದು ಮುಖ್ಯವಲ್ಲ. ಆ ರೈತರ ಹಣವನ್ನು ಅವರಿಗೆ ಬರುವಂತಹ ಸಬ್ಸಿಡಿ ಹಣವನ್ನು ಯಾವ ರೀತಿಯಾಗಿ ಕೆಲವು ಕಂಪನಿಗಳು ಈ ರಾಜ್ಯದ ಅಧಿಕಾರಿಗಳು ಗೋಲ್‌ಮಾಲ್ ಮಾಡುತ್ತಿದ್ದಾರೆಂದು, ಅವರು ಏನು ಮಾಡುತ್ತಿದ್ದಾರೆಂದು ನನಗೆ ತಿಳಿದಿರುವಂತಹ ಮಾಹಿತಿ ಪ್ರಕಾರ ಸಬ್ಸಿಡಿ ಹಣವನ್ನು ಕಂಪನಿಯವರು ಮತ್ತು ಅಧಿಕಾರಿಗಳು ಸೇರಿ ಲೂಟಿ ಮಾಡುತ್ತಿದ್ದಾರೆ. ಈ ಬಗ್ಗೆ ತಾವು ಹೆಚ್ಚಿನ ವಿಚಾರವನ್ನು ನಿಮ್ಮ ಮುಖಾಂತರ ನಾನು ಸರ್ಕಾರಕ್ಕೆ ತಿಳಿಸುವುದಕ್ಕೆ ಬಯಸುತ್ತೇನೆ. ರೈತರಿಗೆ ಮತ್ತೆ ದೂರದೃಷ್ಟಿ ಇರತಕ್ಕಂತಹ ಅವರ ಬದುಕು ಹಸನಾಗುವಂತಹ ಕಾರ್ಯಕ್ರಮ ಯೋಜನೆಗಳನ್ನು ಕೊಡಬೇಕು. ಒಂದು ಸಾವಿರ ರೂಪಾಯಿಗಳನ್ನು ಕೊಟ್ಟ ಮಾತ್ರಕ್ಕೆ ಆ ರೈತನ ಬಾಳು ಕನಸು ನನಸಾಗುವುದಿಲ್ಲ. ಅದನ್ನು ಮಾಡಬೇಕಾದರೆ ಇವತ್ತು ರೈತ ಬೆಳೆದಂತಹ ಕೆಲವು ಪದಾರ್ಥಗಳನ್ನು ಇಡುವುದಕ್ಕೆ Cold storage ಗಳನ್ನು ನೀವು ರೈತರಿಗೆ 500 ಕೋಟಿ ರೂಪಾಯಿಗಳನ್ನು ವಿನಿಯೋಗ ಮಾಡುತ್ತಿದ್ದೀರಿ. ಇವತ್ತು ನಾನು ಏತಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾನು ಗ್ರಾಮೀಣ ಪ್ರದೇಶದಿಂದ ಬಂದಿರುವುದರಿಂದ, ಅಲ್ಲಿರುವಂಥಹ ಜನತೆಯ ಮಾತನ್ನು ನಾನು ಈ ಸದನದಲ್ಲಿ ಮಾತನಾಡುತ್ತಿದ್ದೇನೆ. ಕೇವಲ ಒಂದು ಸಾವಿರ ರೂಪಾಯಿಗಳನ್ನು ಕೊಟ್ಟು ಅವನಿಗೆ 300–400 ರೂಪಾಯಿಗಳು ಸಿಗುವಂತಹ ಬದುಕನ್ನು ಬಿಟ್ಟು ಇವತ್ತಿನ ದಿವಸ Cold storage ಗಳನ್ನು ಕಟ್ಟಬೇಕು. ತಾಲ್ಲೂಕಿಗೆ 2–3 Cold storage ಗಳನ್ನು ಕಟ್ಟಿದ್ದರೆ ರೈತ ಬೆಳೆದಂತಹ ಪದಾರ್ಥಗಳನ್ನು ಇವತ್ತು ಟೊಮೋಟೊ ಇರಬಹುದು, ಅದನ್ನು ಹಾಕುತ್ತಾರೆ, ಅದನ್ನು ಹಾಕಬೇಕಾದರೆ 16 ರೂಪಾಯಿ ಒಂದು ಕೆ.ಜಿ.ಗೆ ಇರುತ್ತದೆ. ಆದರೆ ಅವನು ಅದನ್ನು ಮಾರುಕಟ್ಟೆಗೆ ತರಬೇಕಾದರೆ ಕೇವಲ 2–3 ರೂಪಾಯಿಗಳು ಇರುತ್ತದೆ. ಇವತ್ತಿನ ಮಾರುಕಟ್ಟೆಯ ಬೆಲೆಗಳ ಏರುಪೇರುಗಳನ್ನು ನೋಡಬೇಕಾದರೆ ಇವತ್ತು ಆ ತಾಲ್ಲೂಕಿನಲ್ಲಿ Cold storage ಗಳು ಇದ್ದರೆ ಆ ಮಾರುಕಟ್ಟೆಗೆ ಅದು ಸೂಕ್ಷ್ಮವಾದ ಪದಾರ್ಥವಾಗಿದೆ. ಅದನ್ನು ಇಟ್ಟು ಮಾರುವುದಕ್ಕಾಗುವುದಿಲ್ಲ. ಅದನ್ನು ಇಡುವಂತಹ ಒಂದು ಸಾಮರ್ಥ್ಯವನ್ನು ರೈತರಿಗೆ ಕಲ್ಪಿಸಿಕೊಟ್ಟರೆ ಇವತ್ತು ತಾವು ಏನು 500 ಕೊಟಿ ರೂಪಾಯಿಗಳ ಆವರ್ತನಿಧಿ ಏನು ಇಟ್ಟಿದ್ದೀರಿ? ಅದನ್ನು ನಾನು ಮನಸ್ಸು ಪೂರ್ತಿಯಾಗಿ ಸ್ವಾಗತ ಮಾಡುತ್ತೇನೆ. ಆ ಹಣವನ್ನು ಇಂತಹ ಸಂದರ್ಭದಲ್ಲಿ ಅವರು ಏನು ಒಂದು ಸಾವಿರ ರೂಪಾಯಿಗಳ ಟೊಮೋಟೋವನ್ನು ತಂದರೆ ಅವನಿಗೆ 200 ರೂಪಾಯಿಗಳನ್ನು ಅವನ ದರ್ದಿಗೆ ಆವತ್ತು ಅವನಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡಿದರೆ ಅವನು ಅದನ್ನು Cold

storage ನಲ್ಲಿ ಇಟ್ಟು ಹೋಗುತ್ತಾನೆ. ಪುನಃ ಮಾರುಕಟ್ಟೆಯ ಬೆಲೆಯನ್ನು ನೋಡಿ ಆ ರೈತ ಬಂದು ಅದನ್ನು ಮಾರಿ ಹೋಗುತ್ತಾನೆ. ಇಂತಹ ಮೂಲಭೂತವಾದಂತಹ ರೈತರ ಜೀವನದಲ್ಲಿ ಒಂದು ವ್ಯವಸ್ಥಿತವಾದಂತಹ ಕನಸನ್ನು ನನಸು ಮಾಡುವಂತಹ ಒಂದು ಯೋಜನೆಗಳನ್ನು ಜಾರಿಗೆ ತರುವುದನ್ನು ಬಿಟ್ಟು ಚುನಾವಣೆಯಲ್ಲಿ ನಾವು ಸಹ ದುಡ್ಡನ್ನು ಹಂಚುತ್ತೇವೆ, ಎಲ್ಲರೂ ದುಡ್ಡನ್ನು ಹಂಚುತ್ತಾರೆ. ಅದೇ ರೀತಿಯಾಗಿ Indirect ಆಗಿ, ಇದು direct ಅಲ್ಲ, ಇದು ಚುನಾವಣೆಯಲ್ಲಿ direct ಆಗಿ ಕೊಟ್ಟರೆ ಇದು Indirect ಆಗಿ ಸರ್ಕಾರದ ದುಡ್ಡನ್ನು ಕೊಡುವಂತಹ ವ್ಯವಸ್ಥೆ ಏನು ಇದೆ, ಇದು ತಪ್ಪು ಎನ್ನುವಂತಹ ಭಾವನೆಯನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಕಳೆದ ವಿಧಾನ ಸಭೆಯಲ್ಲಿ ರಸಗೊಬ್ಬರದ ಬಗ್ಗೆ ಸಂಪೂರ್ಣವಾಗಿ ಚರ್ಚೆಯಾಯಿತು. ಇವತ್ತು ನನ್ನ ಕ್ಷೇತ್ರವಾದ ಅರಸೀಕೆರೆಯಲ್ಲಿ ಲಾಟಿ ಚಾರ್ಜ್ ಆಗಿದೆ. 20% ಗೊಬ್ಬರ ಸಪ್ಲೈ ಆಗಿಲ್ಲ. ಅಪರೂಪಕ್ಕೆ ವರುಣನ ಕೃಪೆಯಾಗಿದೆ. ಇವತ್ತು ಈ ಸದನದಲ್ಲಿ ಗೊಬ್ಬರದ ಬಗ್ಗೆ ಚರ್ಚೆಯಾಗಿಲ್ಲ. ಇಲ್ಲಿ ಹೇಳುವಂತಹವರು ಯಾರು ಇಲ್ಲ, ಕೇಳುವಂತಹವರು ಯಾರು ಇಲ್ಲ. ನಾವು ಏನು ಮಾಡಬೇಕು? ಇವತ್ತಿನ ಪರಿಸ್ಥಿತಿ ಏನಿದೆ, ಇದನ್ನು ಯಾರು ಕೇಳುವವರು? ಏನಾದರೂ ಮಾಡಿ ಗೊಬ್ಬರವನ್ನು ತರಿಸುವಂತಹ ವ್ಯವಸ್ಥೆಯನ್ನು ಮಾಡದೆ ಹೋದರೆ ಅಲ್ಲಿರುವಂತಹ ಜನರಿಗೆ ಗೊತ್ತಿಲ್ಲ. ನೀನು ಎಂಎಲ್ಎ ಆಗಿದ್ದೀಯಾ, ನಿನಗೆ ನಾವು ವೋಟು ಹಾಕಿದ್ದೇವೆ. ನೀನು ಗೊಬ್ಬರವನ್ನು ತಂದುಕೊಡು ಎಂದು ಹೇಳುತ್ತಾರೆ. ಬೆಂಗಳೂರಿಗೆ ಕದ್ದು ಹೋಗಿ ಕುಳಿತ್ತಿದ್ದಾನೆಂಬ ಆಪಾದನೆಯನ್ನು ಅಲ್ಲಿ ಮಾಡುತ್ತಿದ್ದರೆ. ಇದಕ್ಕೆ ಯಾರು ಹೊಣೆ? ಈ ಬಗ್ಗೆ ದಯಮಾಡಿ ಮಾನ್ಯ ಅಧ್ಯಕ್ಷರು ಒಂದು ಮಾರ್ಗವನ್ನು ಕಂಡುಹಿಡಿದು ಎಂಎಲ್ಎಗಳ ಶಾಸಕರುಗಳಾಗಿ ನಾವುಗಳು ಏನು ಗೆದ್ದು ಬಂದಿದ್ದೇವೆ. ನಮ್ಮ ಗೌರವವನ್ನು ಉಳಿಸುವಂತಹದ್ದು ಮತ್ತು ಕಾಪಾಡಬೇಕೆಂದು ಹೇಳಿ ತಮ್ಮ ಮುಖಾಂತರ ಮನವಿಯನ್ನು ಸರ್ಕಾರಕ್ಕೆ ಮಾಡುತ್ತಿದ್ದೇನೆ. ಇನ್ನು ರೈತರ ಬಡ್ಡಿದರದ ಬಗ್ಗೆ ಹೇಳಬೇಕಾದರೆ ಕೆಲವಕ್ಕೆ 3 ರೂಪಾಯಿ ಬಡ್ಡಿಯನ್ನು ಕೊಡುತ್ತೇವೆಂದು ಹೇಳಿದ್ದೀರಿ ಅದು ನಿಜ. ಇವತ್ತು ರೈತನನ್ನು ನಿಜವಾಗಿಯೂ ನೇಣು ಹಾಕುತ್ತಿದ್ದೇವೆ. ರೈತನಿಗೆ ಹೊಸ ಸಾಲಗಳು ಇಲ್ಲ. ಕೇಂದ್ರ ಸರ್ಕಾರದವರು ಹಾಗೂ ರಾಜ್ಯ ಸರ್ಕಾರದವರು ಸಾಲವನ್ನು ಮನ್ನಾ ಮಾಡಿದರು. ಆದರೆ ರೈತರಿಗೆ ಹೊಸ ಸಾಲವನ್ನು ಕೊಡುವವರು ಯಾರು? ಇವತ್ತು ರೈತನಿಗೆ ಹೊಸ ಸಾಲಗಳು ಸಿಗದೆಯೇ ರೈತನು ನೇಣು ಹಾಕಿಕೊಳ್ಳುತ್ತಿದ್ದಾನೆ. ಈ ಹೊಸ ಸಾಲವನ್ನು ಕೊಡುವಂತಹ ವ್ಯವಸ್ಥೆಯನ್ನು ಯಾವ Co-operative Bank ಗಳು ಇವೆ, ಅದರ

ಮುಖಾಂತರ ಹೊಸ ಸಾಲವನ್ನು ಕೊಡುವಂತಹ ಬಂಡವಾಳವನ್ನು ನೀವು ಇವತ್ತಿನ ದಿವಸ ಬ್ಯಾಂಕುಗಳಲ್ಲಿ ಹೂಡಬೇಕು. Co-operative Bank ಗಳಲ್ಲಿ ಇಲ್ಲ, ಸರ್ಕಾರದ ಹಣವನ್ನು ನೀವು ಅಲ್ಲಿ ತೊಡಗಿಸುವುದರ ಮುಖಾಂತರ ನೀವು ಇವತ್ತಿನ ದಿವಸ ಸಾಲವನ್ನು, ಅದಕ್ಕೆ ಅನುದಾನ ಎನ್ನುವಂತಹ ರೀತಿಯಲ್ಲಿ ನೀವು ಅಲ್ಲಿ ಇಡಬೇಕಾಗಿದೆ. ಇಲ್ಲವೆಂದರೆ ಆ ಬ್ಯಾಂಕುಗಳಲ್ಲಿ ಸಾಲ ಸಿಗುವುದಿಲ್ಲ. ರೈತನು ಸಾಲವನ್ನು ಕಟ್ಟಿ ಇವತ್ತು 10–15 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಅವನ ದರ್ದಿಗೆ ಆಗುತ್ತಿಲ್ಲ. ಇದರಿಂದಾಗಿ ರೈತನು ಸಂಕಷ್ಟದಲ್ಲಿ ಸಿಕ್ಕಿದ್ದಾನೆ. ಅದಕ್ಕೋಸ್ಕರವಾಗಿ ದಯಮಾಡಿ ಇವತ್ತು ಸಾಲವನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಡುವಂತಹ ಒಂದು ವ್ಯವಸ್ಥೆಯನ್ನು ಇಡೀ ಕರ್ನಾಟಕ ರಾಜ್ಯದಲ್ಲಿ ಮಾಡಬೇಕು. ನನಗೆ ಬಂದಿರುವಂತಹ ಮಾಹಿತಿ ಪ್ರಕಾರ 28 ಕೋಟಿ ರೂಪಾಯಿಗಳ ಸಾಲವನ್ನು ರೈತರಿಗೆ ಕೊಟ್ಟಿದ್ದಾರೆ ಎನ್ನುವುದಾದರೆ ಇದಕ್ಕಿಂತ ನಾಚಿಕೆಗೇಡಿನ ಪ್ರಸಂಗ ಮತ್ತೊಂದು ಇದೆಯಾ? ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ದಯಮಾಡಿ ಮುಂದೆ ಹೊಸ ಸಾಲದ ಯೋಜನೆಗಳನ್ನು ಕೊಡುವ ಶಕ್ತಿಯನ್ನು ಆ ಬ್ಯಾಂಕುಗಳಿಗೆ ತುಂಬಬೇಕು ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಉದ್ಯೋಗ ಖಾತರ ಯೋಜನೆ. ಇದು ಕೇಂದ್ರ ಸರ್ಕಾರದ ಒಳ್ಳೆಯ ಯೋಜನೆಯಾಗಿದೆ. ಆದರೆ, ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಗ್ರಾಮ ಪಂಚಾಯಿತಿಯವರು ಬಹಳ ಕಷ್ಟಪಡುತ್ತಿದ್ದಾರೆ. ಕಾರ್ಮಿಕರಿಗೆ ಕೊಡತಕ್ಕಂಥ ಕೂಲಿ ಏನಿದೆ, ಅದು ಸಾಕಾಗುವುದಿಲ್ಲವೆಂದು ಮತ್ತು ಕೆಲವೊಂದು ತಾಂತ್ರಿಕ ಕಾರಣಗಳಿಂದ ಇವತ್ತು ಆ ವ್ಯವಸ್ಥೆಯನ್ನು ಜಾರಿಗೆ ತರುವುದಕ್ಕೆ ಆಗದ ಕಾರಣ ಹೋದ ಸಲ ದುಡ್ಡು ವಾಪಸು ಹೋಗಿದೆ. ಆದುದರಿಂದ, ನಿಮ್ಮ ಭಾಗದ 10 ಪರ್ಸೆಂಟ್ ಏನಿದೆ, ಅದರ ಜೊತೆಗೆ ಇವತ್ತು ಉದ್ಯೋಗ ಖಾತರಿ ಯೋಜನೆಯನ್ನು ಗ್ರಾಮ ಪಂಚಾಯಿತಿಯಲ್ಲಿ ನೀವೇನಾದರೂ ಪ್ರಾರಂಭ ಮಾಡದೇ ಹೋದರೆ ಗ್ರಾಮ ಪಂಚಾಯಿತಿಗಳು ಸತ್ತು ಹೋಗುತ್ತವೆ. ಗ್ರಾಮ ಪಂಚಾಯಿತಿಗಳು ಜೀವ ಸಹಿತ ಇರುವುದಿಲ್ಲ. ಅಲ್ಲಿ ಸಂಬಳ ಕೊಡುವುದಕ್ಕೆ ದುಡ್ಡು ಇಲ್ಲ. ಗ್ರಾಮ ಪಂಚಾಯಿತಿಯಲ್ಲಿ ಇವತ್ತು ಯಾವುದೇ ರೀತಿಯಾದ ವ್ಯವಸ್ಥೆ ಇಲ್ಲ. ಆದುದರಿಂದ, ದಯಮಾಡಿ ಕಾನೂನನ್ನು ಸಡಿಲಿಸಿ ಉದ್ಯೋಗ ಖಾತರಿ ಯೋಜನೆಗೆ ಚಾಲನೆ ಕೊಡತಕ್ಕಂಥ ವ್ಯವಸ್ಥೆಯನ್ನು ಈ ಸಂದರ್ಭದಲ್ಲಿ ಮಾಡಬೇಕೆಂದು ಈ ಸದನದ ಮೂಲಕ ನಿಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ

ಮಾಡಿಕೊಳ್ಳುತ್ತಿದ್ದೇನೆ.

ಅದರ ಜೊತೆಗೆ, ಸುವರ್ಣ ಗ್ರಾಮ ಯೋಜನೆ. ಇದು ನಿಜವಾಗಿಯೂ ಮಹಾತ್ಮ ಗಾಂಧೀಜಿಯವರು ಕಂಡಂತಹ ಕನಸಾಗಿದೆ. ಗ್ರಾಮ ಸ್ವರಾಜ್ಯ ಆಗಬೇಕು. ನಿಜವಾಗಿಯೂ ಗ್ರಾಮ ಸ್ವಚ್ಛತೆಯ ಬಗ್ಗೆ ಅವರಿಗೆ ಒಂದು ಭಾವನೆ ಏನಿತ್ತು, ಅದು ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ ನಿಜವಾಗಿಯೂ ಬರುತ್ತದೆ. ಸುವರ್ಣ ಗ್ರಾಮ ಯೋಜನೆಗೆ ಕಳೆದ ಸಲ 1,200 ಗ್ರಾಮಗಳನ್ನು ತೆಗೆದುಕೊಂಡಿದ್ದೀರಿ. ಆದರೆ, ಈ ಸಲ ನಾವು ಶಾಸಕರಾಗಿ ಬಂದಂಥಹ ಸಂದರ್ಭದಲ್ಲಿ ನೀವು ಕೈಬಿಡುತ್ತಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳೆ, ದಯಮಾಡಿ 2–2 ದೊಡ್ಡ ದೊಡ್ಡ ಗ್ರಾಮಗಳನ್ನಾದರೂ ಸುವರ್ಣ ಗ್ರಾಮ ಯೋಜನೆಯಡಿ ಸೇರಿಸಿ ಒಂದು ಕ್ಷೇತ್ರಕ್ಕೆ ಎರಡು ಗ್ರಾಮಗಳನ್ನಾದರೂ ಹೊಸದಾಗಿ ಸೇರಿಸಿ ಕೊಡಬೇಕು. ಆ ರೀತಿ ಸೇರಿಸಿ ಕೊಡುವುದರಿಮದ ನಿಜವಾಗಿಯೂ ಒಳ್ಳೆಯದಾಗುತ್ತದೆಂಬ ಭಾವನೆಯಿಂದ ಹೇಳುತ್ತೇನೆ.

ಇವತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಗ್ರಾಮ ಪಂಚಾಯಿತಿಗೆ ಒಬ್ಬರು ಮೇಲಧಿಕಾರಿಗಳನ್ನು ನೇಮಿಸುವ ನಿರ್ಣಯವನ್ನು ಏನು ತೆಗೆದುಕೊಂಡಿದ್ದೀರಿ, ಇದು ಕೂಡ ಸ್ವಾಗತಾರ್ಹವಾಗಿರುವ ವಿಚಾರವಾಗಿದೆ. ಆದರೆ, ಅವರನ್ನು ನೇಮಿಸಬೇಕಾದರೆ ಅಲ್ಲಿ ಅವರಿಗೆ ಅಕೌಂಟ್ಸ್ ಬಗ್ಗೆ ಪರಿಣತಿ ಇರತಕ್ಕಂಥ, ವ್ಯವಸ್ಥಿತವಾಗಿರುವ ಒಬ್ಬ ಅಧಿಕಾರಿಯನ್ನು ನೇಮಿಸುವುದು ಸೂಕ್ತ. ಗ್ರಾಮ ಪಂಚಾಯಿತಿಯಲ್ಲಿ ಆಡಳಿತ ವ್ಯವಸ್ಥೆ ಮತ್ತು ಅಕೌಂಟ್ಸ್ ವ್ಯವಸ್ಥೆ ಬಹಳ ಕೆಟ್ಟು ಹೋಗಿದೆ. ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಯಾರು ಬೇಕಾದರೂ ಅಧ್ಯಕ್ಷರಾಗಬಹುದೆಂಬ ಭಾವನೆ ಏನಿದೆ, ಅದರಲ್ಲಿ ಬಹಳಷ್ಟು ಜನರು ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯದ ಜ್ಞಾನಾರ್ಜನೆ ಕಡಿಮೆ ಇರುವ ವ್ಯಕ್ತಿಗಳು ಸಹ ಆ ಕುರ್ಚಿಯಲ್ಲಿ ಕುಳಿತಂತಹ ಸಂದರ್ಭದಲ್ಲಿ ಅದನ್ನು ನಿಭಾಯಿಸಬೇಕಾದರೆ ಬಹಳ ಕಷ್ಟ ಇದೆ, ಅದಕ್ಕೋಸ್ಕರ, ಒಬ್ಬ ಅಧಿಕಾರಿಯನ್ನು ಏನು ನೇಮಿಸುತ್ತೀರಿ, ಬಿ.ಕಾಂ. ಮಾಡಿದಂತಹ ಇಲ್ಲವೇ ಅಕೌಂಟ್ಸ್‌ನಲ್ಲಿ ಪರಿಣತಿ ಪಡೆದಿರುವಂತಹ ಒಬ್ಬ ಅಧಿಕಾರಿಯನ್ನು ಅಲ್ಲಿಗೆ ನೇಮಿಸುವುದು ಸೂಕ್ತ ಎನ್ನತಕ್ಕಂಥ ಮಾತನ್ನು ಈ ಸಂದರ್ಭವನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ.

ಇನ್ನು ನೀರಾವರಿ ಬಗ್ಗೆ. ಈ ರಾಜ್ಯದಲ್ಲಿ ನೀರಾವರಿ ಬಗ್ಗೆ ನಾನು ಅಂದು ನೋಡುತ್ತಿದ್ದಂತೆ 39, 32, 27 ಈ ರೀತಿ ಪರ್ಸೆಂಟೇಜ್ ಅನ್ನು ನೀರಾವರಿಯಲ್ಲಿ ತೊಡಗಿಸಿದ್ದೀರಿ, ಆದರೆ, ಇವತ್ತು ಕೇವಲ 13 ಪರ್ಸೆಂಟ್ ಹಣವನ್ನು ನೀರಾವರಿಗೋಸ್ಕರ

ನಿಮ್ಮ ಸರ್ಕಾರ ಇವತ್ತು ವಿನಿಯೋಗಿಸುತ್ತಿದೆ. 13 ಪರ್ಸೆಂಟ್‌ನಿಂದ ಏನೂ ಆಗುವುದಿಲ್ಲ. ಏಕೆಂದರೆ, ಇವತ್ತು ಹಣದುಬ್ಬರದಿಂದಾಗಿ ಎಲ್ಲಾ ಕಚ್ಚಾ ಪದಾರ್ಥಗಳ ಬೆಲೆಯೂ ಜಾಸ್ತಿಯಾಗಿ ಇವತ್ತು ಕಾಮಗಾರಿಗಳನ್ನು ಏನು ಕೈಗೊಳ್ಳಬೇಕಾಗಿದೆ, ಅದನ್ನು ಮಾಡುವುದಕ್ಕೆ ನಿಜವಾಗಿಯೂ ಹಣ ಸಾಕಾಗುವುದಿಲ್ಲ. ಆದರೆ, ಇದನ್ನು ಹೆಚ್ಚಿಸಬೇಕೆಂಬ ಮನವಿಯನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ.

*(ಈ ಹಂತದಲ್ಲಿ ಭಾಷಣ ಮುಗಿಸಬೇಕೆಂದು ಮಾನ್ಯ ಅಧ್ಯಕ್ಷರು ಬೆಲ್ ಬಾರಿಸಿದರು)*

ಸನ್ಮಾನ್ಯ ಅಧ್ಯಕ್ಷರೆ, ತಾವು ಬೆಲ್ ಹೊಡೆದರೆ, ನಾನು ಮಾತನಾಡುತ್ತಿರುವುದು ಚೆನ್ನಾಗಿಲ್ಲವೆಂದು ಅರ್ಥವಾಗುತ್ತದೆ. ಹಾಗೆ ಬೆಲ್ ಹೊಡೀಬೇಡಿ. ನಾನು ಹೊಸದಾಗಿ ಬಂದಿದ್ದೇನೆ. ಏನೋ ಖುಷಿಯಾಗಿ ಮಾತನಾಡುತ್ತಿದ್ದೇನೆ. ಸ್ವಲ್ಪ ಜಾಸ್ತಿ ಅವಕಾಶ ಕೊಡಿ. ಹೊಸಬರಿಗೆ ನೀವು ಸ್ವಲ್ಪ ಎನ್‌ಕರೇಜ್ ಮಾಡಿ. ಹೊಸ ಹೊಸ ಸಂಸಧೀಯ ಪಟುಗಳು ಜಾಸ್ತಿಯಾಗಲಿ. ಈಗ ಫ್ರಂಟ್ ಲೈನ್‌ನಲ್ಲಿ ಕುಳಿತಿದ್ದಾರೆಂದರೆ, ಅವರಿಗೆ ಇಂಟ್ರೆಸ್ಟ್ ಇಲ್ಲ. ಅಲ್ಲಿ ಒಬ್ಬರೂ ಕುಳಿತೇ ಇಲ್ಲ. ಅವರಿಗ್ಯಾಕೆ ಅವಕಾಶ ಕೊಡುತ್ತೀರಿ? ಮಾತನಾಡುವ ನಮಗೆ ಕಾಲು ಗಂಟೆ ಅರ್ಧ ಗಂಟೆ ಹೆಚ್ಚಿಗೆ ಅವಕಾಶ ಕೊಡಿ. ನಾನು ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಏನೋ ನಾವು ಹೊಸದಾಗಿ ಬಂದಿದ್ದೇವೆ. ನಾವೇನಾದರೂ ತಪ್ಪು ತಪ್ಪು ಮಾತನಾಡಿ ಇಲ್ಲವೇ ಯಾರನ್ನಾದರೂ ದೂಷಣೆ ಮಾಡಿ ಯಾರನ್ನಾದರೂ ಏನಾದರೂ ಮಾಡಿದ್ದರೆ ಬೇಡ. ಸ್ವಲ್ಪ ಅವಕಾಶ ಕೊಡಿ, ಏನೋ ವಿಚಾರ ಹೇಳುತ್ತಿದ್ದೇಂಬ ಭಾವನೆ ನನಗಿದೆ.

**ಅಧ್ಯಕ್ಷರು** :- ಆದಷ್ಟು ಬೇಗ ಮುಗಿಸಿ ಎಂದು ಹೇಳುತ್ತಿದ್ದೇನೆ.

**ಶ್ರೀ ಕೆ.ಎಂ. ಶಿವಲಿಂಗೇಗೌಡ** :- ಜೆಡಿ(ಎಸ್) ನಿಂದ ಇದುವರೆಗೂ ಒಬ್ಬರಿಗೂ ಮಾತನಾಡಲು ಅವಕಾಶ ಕೊಟ್ಟೇ ಇಲ್ಲ. ನಾನು ಹೊಸದಾಗಿ ಮಾತನಾಡುತ್ತಿದ್ದೇನೆ, ನನಗೆ ಅವಕಾಶ ಕೊಡಿ.

**ಅಧ್ಯಕ್ಷರು** :- ತಾವು ತಮ್ಮ ಮಾತನ್ನು ಮುಂದುವರೆಸಿ.

**ಶ್ರೀ ಸಿ.ಟಿ. ರವಿ** :- ಶಿವಲಿಂಗೇಗೌಡರೆ, ಬಹಳ ಚೆನ್ನಾಗಿ ಮಾತನಾಡಿಬಿಟ್ಟರೆ, ಮುಂದಿನ ಸಲ ಟಿಕೇಟ್ ಕೊಡದಿದ್ದರೆ ಕಷ್ಟ.

**ಶ್ರೀ ಕೆ.ಎಂ. ಶಿವಲಿಂಗೇಗೌಡ :–** ಟಿಕೇಟ್ ಇಲ್ಲದಿದ್ದರೆ, 29 ಗುರ್ತುಗಳಿವೆ. ಏನು ಮಾಡುವುದಕ್ಕಾಗುತ್ತದೆ? ಚುನಾವಣಾ ಆಯೋಗದಲ್ಲಿ ಬಹಳ ಗುರುತುಗಳನ್ನು ಇಟ್ಟಿದ್ದಾರೆ, ಅದಕ್ಕೇನು ಮಾಡುವುದಕ್ಕಾಗುತ್ತದೆ? ಆಮೇಲೆ ನೋಡೋಣ. ಜನರಿಂದ ಗೆದ್ದು ಬರೋಣ, ಇಲ್ಲದಿದ್ದರೆ, ಮನೆಯಲ್ಲೇ ಇರೋಣ. ಅದಕ್ಕೇನೂ ಮಾಡುವುದಕ್ಕಾಗುವುದಿಲ್ಲ. ನಮ್ಮಲ್ಲಿ ಆ ತರಹವೇನೂ ಇಲ್ಲ. ನಮ್ಮಲ್ಲಿ ಕಷ್ಟಪಟ್ಟು ಗೇಯುವವರಿಗೆ ಅವಕಾಶವುಂಟು.

ಇನ್ನು ನೀರಾವರಿ ಬಗ್ಗೆ ನಮ್ಮ ಕ್ಷೇತ್ರಕ್ಕೆ ಸೀಮಿತವಾಗಿ ಹೇಳುವುದಾದರೆ, ಇವತ್ತು ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತಿರುವ ಶ್ರೀಮಾನ್ ಯಡಿಯೂರಪ್ಪನವರು ಅರಸೀಕೆರೆ ಕ್ಷೇತ್ರದ ಬಗ್ಗೆ ಬಹಳ ಕಾಳಜಿ ಇಟ್ಟುಕೊಂಡಿರತಕ್ಕವರು. ಅವರು ಅರಸೀಕೆರೆ ಬಹಳಷ್ಟು ಸಲ ಬಂದಿದ್ದಾರೆ. ಅವರಿಗೆ ನಿಕಟವಾದ ಸಂಪರ್ಕವಿದೆ. ಅವರು ವಿರೋಧ ಪಕ್ಷದ ನಾಯಕರಾಗಿದ್ದ ಕಾಲದಲ್ಲಿ ಅರಸೀಕೆರೆಗೆ ಹೇಮಾವತಿ ನದಿ ನೀರನ್ನು ಕೊಡಬೇಕೆಂಬ ಕೂಗು ಕೇಳಿದಾಗ ಪಾದಯಾತ್ರೆ ಸಹ ಮಾಡಿದ್ದರು. ಆದರೆ, ಇವತ್ತು ಅವರೇ ಆ ಸ್ಥಾನದಲ್ಲಿ ಕುಳಿತಿದ್ದಾರೆ. ದಯಮಾಡಿ ಇವತ್ತು ಅರಸೀಕೆರೆ ಸ್ಥಿತಿ ಏನಾಗಿದೆ ಎಂದರೆ, ಅರಸೀಕೆರೆಯವರಾದ ನಾವು ಕೃಷ್ಣಾ ಬೇಸಿನ್‌ನಲ್ಲಿದ್ದೇವೆ. ಇನ್ನು ಉಳಿದಿರುವ ಹಾಸನ ಜಿಲ್ಲೆಯ ಎಲ್ಲಾ ಪ್ರದೇಶಗಳೂ ಕಾವೇರಿ ಬೇಸಿನ್‌ನಲ್ಲಿದೆ. ಅವರು ಹೇಗೇಗೋ ಒಂದೊಂದು ಸ್ವಲ್ಪ ನೀರಾವರಿ ಮಾಡಿಕೊಂಡಿದ್ದಾರೆ. ಇಲ್ಲವೇ ಹೊಳೆ ಪಕ್ಕದಲ್ಲಾದರೂ ಇದ್ದಾರೆ. ಆದರೆ, ನಮಗೆ ಯಾವ ಹೊಳೆಯೂ ಇಲ್ಲ. ಬರಡು ಪ್ರದೇಶ, ಗುಡ್ಡಗಾಡಿನಿಂದ ಕೂಡಿರುವ ಪ್ರದೇಶ. ಆ ಗುಡ್ಡದ ತಪ್ಪಲಿನಲ್ಲಿ ಎಲ್ಲೋ ಅಲ್ಪಸ್ವಲ್ಪ ತೆಂಗಿನಮರಗಳಿವೆ. ಇವತ್ತಿನ ದಿವಸ ಆ ಮರಗಳೆಲ್ಲವೂ ಒಣಗಿ ಹೋಗುತ್ತಿವೆ. ಆದ್ದರಿಂದ, ಶಾಶ್ವತ ನೀರಾವರಿ ವಿಚಾರಕ್ಕೋಸ್ಕರವೇ ಅರಸೀಕೆರೆಯಲ್ಲಿ ರಾಜಕಾರಣ ಪ್ರಾರಂಭವಾಗಿದೆ. ನೀರಾವರಿ ಸೌಲಭ್ಯವನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುವ ದೃಷ್ಟಿಯಿಂದ ಇವತ್ತು ಹೇಮಾವತಿ ನದಿಯಿಂದ ಏತ ನೀರಾವರಿ ಮೂಲಕ ನೀರಿನ ಸೌಲಭ್ಯ ಒದಗಿಸಿಕೊಡಬೇಕೆಂದು ಶ್ರೀಮಾನ್ ಯಡಿಯೂರಪ್ಪನವರು ಅಂದು ವಿರೋಧ ಪಕ್ಷದ ನಾಯಕರಾಗಿದ್ದ ಕಾಲದಲ್ಲಿ ಕೂಗು ಹಾಕಿದ್ದರು. ಅದನ್ನು ಇವತ್ತು ಯಾವುದಾದರೂ ಸ್ಕೀಮ್‌ನಲ್ಲಿ, surplus amount ನಲ್ಲಿ ಇಲ್ಲವೇ ಯಾವುದರಲ್ಲಾದರೂ ಹಾಕಿ ಆ ಯೋಜನೆಯನ್ನು ಶ್ರೀಮಾನ್ ಯಡಿಯೂರಪ್ಪನವರು ದಯಮಾಡಿ ಮಾಡಿಕೊಡಬೇಕೆಂದು ಅವರಲ್ಲಿ ಈ ಸದನದ ಮುಖಾಂತರ ಬಿನ್ನವಿಸಿಕೊಳ್ಳುತ್ತೇನೆ.

ಇವತ್ತು ಅಪ್ಪರ್ ಭದ್ರಾದಿಂದ ತರೀಕೆರೆಗೆ ನೀರನ್ನು ಕೊಡುವ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೀರಿ. ಅದರಲ್ಲಿ ಚಿತ್ರದುರ್ಗ, ತುಮಕೂರು ಎಲ್ಲವನ್ನೂ ಹಾಕಿಕೊಂಡಿದ್ದೀರಿ. ಅರಸೀಕೆರೆಯವರಾದ ನಾವು ಕೃಷ್ಣಾ ಬೇಸಿನ್‌ನಲ್ಲಿದ್ದೇವೆ. ದಯಮಾಡಿ ಅಪ್ಪರ್ ಭದ್ರಾದಿಂದ ನೀವು ಅರಸೀಕೆರೆಗೆ ನೀರನ್ನು ಕೊಡುವುದರಲ್ಲಿ ಆ ಒಂದು ತಾಲ್ಲೂಕನ್ನು ಕಡೆಗಣಿಸಬೇಡಿ. ದಯಮಾಡಿ ಆ ತಾಲ್ಲೂಕನ್ನು ಸೇರಿಸಿಕೊಳ್ಳಿ. ಆ ತಾಲ್ಲೂಕನ್ನು ಕಡೆಗಣ್ಣಿನಲ್ಲಿ ನೋಡಬೇಡಿ ಎನ್ನತಕ್ಕಂಥ ಮಾತನ್ನು ಕೂಡ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಏಕೆಂದರೆ, ನಾವು ಕೃಷ್ಣಾ ಬೇಸಿನ್‌ನಲ್ಲಿದ್ದೇವೆ. ಅದಕ್ಕೋಸ್ಕರ, ನಾವು ನಿಮ್ಮನ್ನು ಕೇಳುತ್ತೇವೆಯೇ ಹೊರತು ಇನ್ನಾವ ದೃಷ್ಟಿಯಿಂದಲೂ ನಿಮ್ಮನ್ನು ಕೇಳುವುದಿಲ್ಲ. ದಯಮಾಡಿ ಕೆರೆಗಳಿಗೆ ನೀರನ್ನು ಕೊಡುವ ಕಾರ್ಯಕ್ರಮವನ್ನು ಅಪ್ಪರ್ ಭದ್ರಾದಿಂದ ಮಾಡುತ್ತಿದ್ದೀರಿ, ತುಮಕೂರು ಜಿಲ್ಲೆವರೆಗೆ ತರುತ್ತಿದ್ದೀರಿ, ನಾವು ಪಕ್ಕದಲ್ಲಿಯೇ ಇದ್ದೇವೆ, ಕಡೂರಿನವರೆಗೂ ಬರುತ್ತಿದೆ. ನಮಗೂ ಸ್ವಲ್ಪ ಕೊಡಿ ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಇವತ್ತು ನಮ್ಮ ಅಂತರ್ಜಲದ ಮಟ್ಟ ಕುಸಿದು ಹೋಗಿದೆ. ಅಲ್ಲಿನ ಪರಿಸ್ಥಿತಿಯನ್ನು ಹೇಳಲು ಸಾಧ್ಯವಿಲ್ಲ. ಅದಕ್ಕೋಸ್ಕರ, ಅಂತರ್ಜಲದ ಮಟ್ಟವನ್ನು ಏರಿಸಬೇಕಾದರೆ, ಇವತ್ತು ಏನು ವೇಸ್ಟೇಜ್ ನೀರು ನದಿಗಳಲ್ಲಿ, ಡ್ಯಾಮ್‌ಗಳಲ್ಲಿ ಒಳ ಹರಿವಿನಿಂದ ಬರುತ್ತಿದೆ. ಸಿಲ್ಟ್ ತುಂಬಿದ್ದರೂ ಅಷ್ಟು ಟಿಎಂಸಿ, ಇಷ್ಟು ಟಿಎಂಸಿ ಎಂದು ನಿಮ್ಮ ಅಧಿಕಾರಿಗಳು ಲೆಕ್ಕ ಕೊಡುತ್ತಾರಷ್ಟೇ! ಅಲ್ಲೆಲ್ಲಾ ಸಿಲ್ಟ್ ತುಂಬಿ ಹೋಗಿದೆ. ಸಿಲ್ಟ್ ತುಂಬಿರುವುದರಿಂದ ಒಳ ಹರಿವಿನಲ್ಲಿ ನೀರು ಇಲ್ಲ. ನೀರು ಹೆಚ್ಚಿನ ಪ್ರಮಾಣದಲ್ಲಿ ಶೇಖರಣೆಯಾಗುತ್ತಿಲ್ಲ. ಯಾವುದೋ ಫ್ಲಡ್ ಬಂದ ಸಂದರ್ಭದಲ್ಲಿ ನೀರೆಲ್ಲವೂ ಸಮುದ್ರದ ಪಾಲಾಗಿ ಹೋಗುತ್ತದೆ. ಅದರ ಬದಲು ಇವತ್ತು ನಾವೇನು ಮೈದಾನ ಪ್ರದೇಶದವರಿದ್ದೇವೆ. ಇದಕ್ಕೆ ಯಾವುದೇ ಮುಖಾಂತರವಾಗಲಿ, ಶತಾಯ- ಗತಾಯವಾಗಲಿ ಹೋರಾಟ ಮಾಡಿ ಇವತ್ತು ನೀವು ಆ ನದಿಗೆ ಆ ಮೂಲದಿಂದ ಆ ವೇಸ್ಟೇಜ್ ನೀರನ್ನು ನಮ್ಮ ಕೆರೆಗಳಿಗೆ ಕೂಡತಕ್ಕಂಥ ಕಾರ್ಯಕ್ರಮವನ್ನು ನೀವು ಮಾಡದೇ ಹೋದರೆ ಬಹುಶಃ ಈ ರಾಜ್ಯಕ್ಕೆ ಗಂಡಾಂತರ ಬರುತ್ತದೆ. ವೇಸ್ಟೇಜ್ ನೀರು ಏನಿದೆ, ಇದನ್ನು ಮೇಲ್ಭಾಗಕ್ಕೆ ಎತ್ತಿ ನಮ್ಮ ಕೆರೆಗಳಿಗೆ ನೀರನ್ನು ಒದಗಿಸಿಕೊಟ್ಟರೆ ಅಂತರ್ಜಲ ಮಟ್ಟ ಹೆಚ್ಚಿ ನಾವು ಬೋರ್‌ವೆಲ್ ಮುಖಾಂತರವೋ

ಇಲ್ಲವೋ ಹೇಗೋ ಬಯಲುಸೀಮೆಯವರಾದ ನಾವು ಜೀವನ ಮಾಡಿಕೊಳ್ಳುತ್ತೇವೆ. ದಯಮಾಡಿ ನಮಗೆ ಈ ಬೋರ್‌ವೆಲ್‌ಗಳ ವೇಸ್ಟೇಜ್ ನೀರನ್ನು ನಮಗೆ ಒದಗಿಸಿಕೊಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೇಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ತಾಲ್ಲೂಕು ಕೇಂದ್ರವಾಗಿರುವ ನಮ್ಮ ಅರಸೀಕೆರೆಯಲ್ಲಿ ಮೂರೇ ಮೂರು ಕೊಳಚೆ ಪ್ರದೇಶಗಳು ಇದೆ. ಅಲ್ಲಿಗೆ ಎಲ್ಲಾ ಸವಲತ್ತುಗಳನ್ನು ಕೊಡಲಾಗಿದೆ. ಆದರೆ ಅವರಿಗೆ ಹಕ್ಕುಪತ್ರವನ್ನು ಕೊಟ್ಟಿಲ್ಲ. ಹಕ್ಕುಪತ್ರವನ್ನು ಕೊಡದಿರುವುದರಿಂದ ಅವರ ಬಾಳು ಬಹಳ ಕಷ್ಟವಾಗಿದೆ. ಸರ್ಕಾರಕ್ಕೆ ಪುಕ್ಕಟ್ಟೆಯಾಗಿ ಹೆಸರು ಬರುತ್ತದೆ. ಆದ್ದರಿಂದ ದಯಮಾಡಿ ಅಲ್ಲಿರುವವರಿಗೆ ಹಕ್ಕುಪತ್ರವನ್ನು ಕೊಡುವ ಕಾರ್ಯಕ್ರಮವನ್ನು ನೀವು ಏಕೆ ಹಾಕಿಕೊಳ್ಳಬಾರದು? ಆ ಕಾರ್ಯಕ್ರಮವನ್ನು ಹಮ್ಮಿಕೊಂಡು ಕೊಳಗೇರಿ ನಿವಾಸಿಗಳಿಗೆ ಹಕ್ಕುಪತ್ರವನ್ನು ಕೊಟ್ಟರೆ ನಿಜವಾಗಿಯೂ ಅವರುಗಳು ನಿಮ್ಮನ್ನು ನೆನಪಿಸಿಕೊಳ್ಳುತ್ತಾರೆ. ದಯಮಾಡಿ ಆ ಕೊಳಚೆ ನಿವಾಸಿಗಳಿಗೆ ಹಕ್ಕುಪತ್ರ ಕೊಡುವ ಕಾರ್ಯಕ್ರಮವನ್ನು ಜಾರಿಗೆ ತರಬೇಕು. ಇಂಧನ ಇಲಾಖೆಯಲ್ಲಿ ಕೇವಲ 9.3 ಪರ್‌ಸೆಂಟ್ ಕೊಟ್ಟಿದ್ದೀರಿ. ವಿದ್ಯುತ್ ಇಲ್ಲದೆಯೇ ಈ ದೇಶದಲ್ಲಿ ಯಾವುದೇ ನಾಡಿಯೂ ಆಡುವುದಿಲ್ಲ. ವಿದ್ಯುತ್ ಇಲ್ಲದಿದ್ದರೆ ಈ ದೇಶ, ರಾಜ್ಯ struck ಆಗಿಹೋಗುತ್ತದೆ. ಆದ್ದರಿಂದ ವಿದ್ಯುತ್‌ನ್ನು ಉತ್ಪಾದನೆ ಮಾಡಬೇಕು. ಅದಕ್ಕಾಗಿ ಬಂಡವಾಳವನ್ನು ಹೂಡಬೇಕು. ಇವತ್ತು ರೈತರ ಪಂಪುಸೆಟ್ಟುಗಳಿಗೆ ಉಚಿತವಾಗಿ ವಿದ್ಯುತ್‌ನ್ನು ಕೊಟ್ಟಿರುವುದು ಸೂಕ್ತವೆಂದು ನಾವು ಬಯಸುವುದಾದರೆ ಆದರೆ ಆ ರೈತರಿಗೆ ಎಷ್ಟು ಗಂಟೆಗಳ ಕಾಲ ನಾವು ವಿದ್ಯುತ್‌ನ್ನು ಕೊಡುತ್ತೇವೆ, ಅವನು ಯಾವ ಆಧಾರದ ಮೇಲೆ ಬೆಳೆಯನ್ನು ಬೆಳೆಯಲು ಆರಂಭ ಮಾಡುತ್ತಾನೆ, ಇವತ್ತು ನಮ್ಮಲ್ಲಿ ಬೆಳೆ ಹಾಕಿದರು, ಆದರೆ ವಿದ್ಯುತ್ ಸಿಗಲಿಲ್ಲ ಅದೆಲ್ಲಾ ಒಣಗಿಹೋಯಿತು. ಬೀಜನೂ ನಷ್ಟವಾಗಿ ಗೊಬ್ಬರವೂ ಹೋಯಿತು. ಒಂದು ಗಂಟೆ ಕರೆಂಟ್ ಕೊಡಲು ಆಗಲಿಲ್ಲ. ಎರಡು ಗಂಟೆ ಕೊಡಲು ಆಗಲಿಲ್ಲ. ಆದ್ದರಿಂದ ಉಚಿತವಾಗಿ ಕೊಡುವುದು ಎಂಬ ಪದವನ್ನು ಬಂಗಾರಪ್ಪನವರ ಕಾಲದಿಂದ ಗುಂಡೂರಾವ್‌ರವರ ಕಾಲದಿಂದ ಎತ್ತಿ ರೈತರು ಪುಕ್ಕಟ್ಟೆ ವಿಚಾರವನ್ನು ಕೇಳಿ ಕೇಳಿ ಇವತ್ತು ರೈತನ ಬಾಳು ಆ ಕಡೆ ಪುಕ್ಕಟ್ಟೆ ಈ ಕಡೆ ಏನೊ ಎಂಬುದು ಅವನಿಗೇ ಗೊತ್ತಾಗುತ್ತಿಲ್ಲ. ರೈತ ತಲೆಯ ಮೇಲೆ ಕೈಯನ್ನಿಟ್ಟುಕೊಂಡು ಕುಳಿತಿದ್ದಾನೆ ಇಂಥ ಪರಿಸ್ಥಿತಿ ರಾಜಕಾರಣಿಗಳು ತೆಗೆದುಕೊಂಡು ಹೋಗುತ್ತಿದ್ದೇವೆ. ಇದು ತಪ್ಪು. ಅವರಿಗೆ ನಾವು ಒಂದು ನಾಮಿನಲ್ ರೇಟ್‌ನಲ್ಲಿ ಕರೆಂಟ್‌ನ್ನು ಕೊಡೋಣ. ಆದರೆ, ಮೂಲಭೂತವಾದ ಗುಣಮಟ್ಟದ ಕರೆಂಟ್ ಕೊಡಲು ಬಂಡವಾಳವನ್ನು ಹೂಡತಕ್ಕ ವ್ಯವಸ್ಥೆಯನ್ನು ಎಲ್ಲರೂ

ಸೇರಿ ಈ ಸದನದಲ್ಲಿ ಮಾಡಿ. ಐದು ವರ್ಷದಲ್ಲಿ 10 ಸಾವಿರ ಮೆಗಾವ್ಯಾಟ್ ಕರೆಂಟ್‌ನ್ನು ಉತ್ಪಾದನೆ ಮಾಡುತ್ತೇವೆಂದು ಹೇಳುತ್ತೀರಿ. ಆದರೆ ಅದನ್ನು ತೆಗೆಯಬೇಕಾದರೆ ಎಷ್ಟು ಸಾವಿರ ಕೋಟಿ ಹಣಬೇಕು, ಅದನ್ನು ಒದಗಿಸುವುದು ಎಲ್ಲಿಂದ, ಇದರ ಭಾವನೆಯೇ ನಮಗೆ ಇಲ್ಲದೆ ನಾವು ಹತ್ತು ಸಾವಿರ ಮೆಗಾವ್ಯಾಟ್ ವಿದ್ಯುತ್‌ನ್ನು ತೆಗೆಯುತ್ತೇವೆಂದರೆ ಎಲ್ಲಿಂದ ಸಾಧ್ಯ? ರೈತ ಅದನ್ನು ಎಲ್ಲಿ ಕಾದುಕೊಂಡು ಕುಳಿತುಕೊಳ್ಳುತ್ತಾನೆ? ಯಾವತ್ತು ಇದು ಆಗತಕ್ಕದ್ದು? ಇವೆಲ್ಲಾ ಪರಿಸ್ಥಿತಿಯನ್ನು ನೋಡಿದಾಗ ನಾವು ಎಲ್ಲೋ ಒಂದು ಕಡೆ ರೈತನನ್ನು ಸಂಕಷ್ಟಕ್ಕೆ ಸಿಕ್ಕಿಹಾಕಿಸುತ್ತಿದ್ದೇವೆ ಎಂಬ ಭಾವನೆ ನಮ್ಮ ಮನಸ್ಸಿನಲ್ಲಿ ಬರುತ್ತದೆ. ಆದ್ದರಿಂದ ಇವತ್ತಿನ ದಿವಸ ನಾವು ಯೋಚನೆ ಮಾಡಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಯಾರು ಬಡವರಿದ್ದರು ಅವರಿಗೆ ರಾಜೀವ್‌ಗಾಂಧಿ ವಿದ್ಯುತ್‌ಚ್ಛಕ್ತಿ ಎಂಬ ಸ್ಕೀಮ್‌ನ್ನು ತಂದು ಅದರ ಅಡಿಯಲ್ಲಿ ಲಕ್ಷಾಂತರ ಕುಟುಂಬಗಳಿಗೆ ಕೇಂದ್ರ ಸರ್ಕಾರದ ನೆರವಿನಲ್ಲಿ ಕಾರ್ಯಕ್ರಮ ನಡೆಯುತ್ತಿದೆ. ಅದಕ್ಕೆ ಈ ಸಲ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿಲ್ಲ. ಹಣವನ್ನೂ ತೊಡಗಿಸಿದಂತೆ ಕಾಣುವುದಿಲ್ಲ. ದಯಮಾಡಿ ಈ ಕಾರ್ಯಕ್ರಮಕ್ಕೆ ಚಾಲನೆ ಕೊಟ್ಟು ಇದನ್ನು ನಿಲ್ಲಿಸಬೇಡಿ ಎಂದು ಸಲಹೆಯನ್ನು ಕೊಡಬಯಸುತ್ತೇನೆ. ಸಿದ್ಧ ಉಡುಪುಗಳಿಗೆ ಪ್ರಾಧಾನ್ಯತೆಯನ್ನು ಕೊಟ್ಟಿದ್ದೀರಿ. ನಮ್ಮ ಜಿಲ್ಲೆಯನ್ನು ಬಿಟ್ಟಿದ್ದೀರಿ, ಪರವಾಗಿಲ್ಲ. ಆದರೆ, ಸಿದ್ಧ ಉಡುಪನ್ನು ತಯಾರು ಮಾಡುವುದಕ್ಕೆ ಗ್ರಾಮಾಂತರ ಪ್ರದೇಶಕ್ಕೆ, ಜಿಲ್ಲಾ ಪ್ರದೇಶಕ್ಕೆ ಹೋಗಬೇಕೆಂದು ತಾವೇನು ಹೇಳಿದ್ದೀರಿ ಅದು ಬಹಳ ಸ್ವಾಗತಾರ್ಹವಾಗಿರುವ ವಿಚಾರ. ಕಾರಣ ಇವತ್ತು 33 ಸಾವಿರ ಜನ ಆ ಸಿದ್ಧ ಉಡುಪುಗಳನ್ನು ಹೊಲಿಯವುದಕೋಸ್ಕರ ನನ್ನ ಕ್ಷೇತ್ರದ ಜನ ಇವತ್ತು ಬೆಂಗಳೂರಿಗೆ ಬಂದಿದ್ದಾರೆ. ಬೆಂಗಳೂರಿನಲ್ಲಿ ಬಂದಿರುವ ಅವರ ಕಷ್ಟಸುಖಗಳನ್ನು ನೋಡಲು ಆಗುವುದಿಲ್ಲ. ಯಾವುದೋ ಮೂಲೆಯಲ್ಲಿ ಅವರುಗಳು ಇದ್ದು ಪಡುತ್ತಿರುವ ಕಷ್ಟವನ್ನು ನೋಡಿದರೆ ನಿಜವಾಗಿಯೂ ವ್ಯತೆಯಾಗುತ್ತದೆ. ಅವರಿಗೆ ಮೂರು ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಆದರೆ ಅದು ಅವರ ಊಟಕ್ಕೂ ಸಾಕಾಗುವುದಿಲ್ಲ. ಅವರ ಜೀವನಕ್ಕೆ ಸಾಕಾಗುವುದಿಲ್ಲ. ಅದೇ ಗ್ರಾಮಾಂತರ ಪ್ರದೇಶದಲ್ಲಿ, ತಾಲ್ಲೂಕು ಮಟ್ಟದಲ್ಲಿ ಇಂಥ ಕೇಂದ್ರಗಳನ್ನು ತೆರೆಯುವುದಾದರೆ ಆ ಮೂರು ಸಾವಿರ ರೂಪಾಯಿಗಳನ್ನು ಕೊಟ್ಟರೆ ಅವರ ಕುಟುಂಬಕ್ಕೆ ಅದು ಆರ್ಥಿಕ ಬಂಡವಾಳವಾಗುತ್ತದೆ. ಆ ಮಗಳು ಬೆಳಿಗ್ಗೆ ಎದ್ದು ಮನೆಯಲ್ಲಿ ಊಟ ಮಾಡಿಕೊಂಡು ಬಂದು ಆ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡಿಕೊಂಡು ಮನೆಗೆ ಹೋಗಿ ಆ ಮೂರು ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಅದು ಆ ಕುಟುಂಬದ ಆರ್ಥಿಕತೆಯ ಮಟ್ಟವನ್ನು ಹೆಚ್ಚುಮಾಡುತ್ತದೆ.

ಅದಕ್ಕೋಸ್ಕರವಾಗಿ ಇನ್ನು ಮುಂದೆ ಬೆಂಗಳೂರು ಮಹಾನಗರದಲ್ಲಿ ಈ ಸಿದ್ಧ ಉಡುಪುಗಳನ್ನು ತಯಾರು ಮಾಡತಕ್ಕಂಥ ಕಾರ್ಖಾನೆಗಳ್ಯಾವುದಕ್ಕು ಲೈಸೆನ್ಸ್ ಕೊಡದೆಯೆ ಎಲ್ಲವನ್ನು ತಾಲ್ಲೂಕು, ಹೋಬಳಿ ಮಟ್ಟಕ್ಕೆ ಎಲ್ಲಿ ಮಾನವ ಸಂಪನ್ಮೂಲ ಇದೆ, Labour oriented ಎಲ್ಲಿ ಸಿಗುತ್ತದೆ ಅಲ್ಲಿಗೆ ಹಸ್ತಾಂತರ ಮಾಡತಕ್ಕ ಕಾನೂನನ್ನು ಜಾರಿಗೆ ತರಬೇಕು. ಆ ರೈತರ ಭವಣೆ ನೀಗಿಸಲು ರೈತರ ಮಕ್ಕಳಿಗೆ ನೀವು ಸಹಕಾರ ಮಾಡಬೇಕು ಎನ್ನತಕ್ಕ ಮಾತನ್ನು ಹೇಳಬಯಸುತ್ತೇನೆ. ವೃದ್ಧರಿಗೆ ಸಂಧ್ಯಾ ಸುರಕ್ಷತಾ ಎನ್ನತಕ್ಕ ಕಾನೂನನ್ನು ಏನು ಜಾರಿಗೆ ತಂದಿದ್ದೀರಿ ಇದು ಬಹಳ ಉತ್ತಮವಾದದ್ದು. ವೃದ್ಯಾಪ್ಯ ಜೀವನದಲ್ಲಿ ತಂದೆ, ಮಕ್ಕಳು, ಸೊಸೆಯರು ಅವರನ್ನು ನೋಡದೇ ಇರತಕ್ಕ ಕಾಲದಲ್ಲಿ ಈ 400 ರೂಪಾಯಿ ದುಡ್ಡು ಬಂದರೆ ನಿಜವಾಗಿಯೂ ಅವರು ಕೊನೆಯ ಘಳಿಗೆಯಲ್ಲಿ ನೆಮ್ಮದಿಯ ಜೀವನವನ್ನು ಮಾಡಿ ತಮ್ಮ ಕೊನೆಯ ಉಸಿರನ್ನು ಎಳೆಯುತ್ತಾರೆ. ಅದಕ್ಕೋಸ್ಕರ ಆ ಕಾನೂನನ್ನು ಇನ್ನು ಸ್ವಲ್ಪ ಸಡಿಲಿಸಿ ಉತ್ತಮವಾಗಿ ಆ ಕಾರ್ಯಕ್ರಮದ ಅಡಿಯಲ್ಲಿ ವ್ಯವಸ್ಥಿತವಾಗಿರತಕ್ಕ ಕಾರ್ಯವನ್ನು ಇನ್ನು ಹೆಚ್ಚಿನ ಕ್ರಾಂತಿಕಾರಿಯಾದ ರೀತಿಯಲ್ಲಿ ಜಾರಿಗೆ ತರಬೇಕು. ಕೆ.ಜಿ.ಗೆ ಎರಡು ರೂಪಾಯಿಯಂತೆ ಅಕ್ಕಿ ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಅದನ್ನು ಮಾಡಲು ನೀವು ಮರೆತಿದ್ದೀರಿ. ಅದರಿಂದ ನಿಮಗೇ ನಷ್ಟ ಮುಂದೆ ನೀವು ಯಾವುದಾದರು ಚುನಾವಣೆಗೆ ಹೋದರೆ ನಾವು ಅದನ್ನು ಅಸ್ತ್ರವಾಗಿ ಮಾಡಿಕೊಳ್ಳುತ್ತೇವೆ. ಬಿ.ಜೆ.ಪಿ. ಯವರು 2 ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡುತ್ತೇವೆಂದು ಹೇಳಿದ್ದರು. ಆದರೆ ಅವರು ಆ ರೀತಿ ಕೊಡದೇ ಮಾತಿಗೆ ತಪ್ಪಿದ್ದಾರೆಂದು ಹೇಳುತ್ತೇವೆ. ನಮಗೂ ಭಾಷಣ ಮಾಡಲು ವಿಚಾರ ಬೇಡವೇ. ನೀವು ಅದನ್ನು ಈಡೇರಿಸಿದರೆ ನಾವು ಏನೆಂದು ಭಾಷಣ ಮಾಡೋದು? ಈಗ ನೀವು ಮಾತಿಗೆ ತಪ್ಪಿದ್ದೀರಿ ಅದನ್ನು ನಾವು ಜನರ ಹತ್ತಿರ ಹೇಳುತ್ತೇವೆ. ನೀವು ಮಾತಿಗೆ ತಪ್ಪಿದ್ದೇ ನಮಗೆ ಒಳ್ಳೆಯದಾಯಿತು. ಆದಾಯದ ಮಿತಿಯನ್ನು ಹತ್ತು ಸಾವಿರದಿಂದ ಮೂವತ್ತು ಸಾವಿರಕ್ಕೆ ಹೆಚ್ಚು ಮಾಡುತ್ತೇವೆಂದು ಹೇಳಿದ್ದೀರಿ. ಅದನ್ನು ಏನು ಮಾಡಿದ್ದೀರಿ? ಇವತ್ತು ಹತ್ತು ಸಾವಿರ ಅಲ್ಲ ಅದಕ್ಕೆ ಕೊಡತಕ್ಕ ಕಾರ್ಡೆ ಇಲ್ಲ. ಬಿ.ಪಿ.ಎಲ್. ಕಾರ್ಡ್‌ನ್ನು ಯಾರು ಶಾಸಕರು ಈ ಸದನದಲ್ಲಿ ಕುಳಿತಿದ್ದಾರೋ ಅವರೆಲ್ಲರಿಗೂ ಜನರು ಜಗ್ಗುತ್ತಿದ್ದಾರೆ. ದಯಮಾಡಿ ಬೇಗ ಕೊಡಿ. ಇಲ್ಲದಿದ್ದರೆ ಜುಬ್ಬವನ್ನು ಹರಿದುಹಾಕುತ್ತಾರೆ. ಮೊನ್ನೆ ದಿವಸ ನಮ್ಮ ಊರಿನಲ್ಲಿ ಗ್ರಾಮಸಭೆಯಲ್ಲಿ ನನಗೆ ಕಾರ್ಡ್ ಕೊಟ್ಟು ಮುಂದೆ ಹೋಗು ಎಂದು ಹಿಡಿದುಕೊಂಡುಬಿಟ್ಟಿದ್ದರು. ಆದ್ದರಿಂದ ತಾವು ಜಿ–9 ಎಂದು ಏನು ಯಡಿಯೂರಪ್ಪನವರು ಅಧಿಕಾರಕ್ಕೆ ಬಂದ 7 ದಿವಸದಲ್ಲಿ ಕ್ಯಾಬಿನೆಟ್‌ನಲ್ಲಿ ಮಂಜೂರಾತಿ ಕೊಟ್ಟಿದ್ದರು ಆ

ಕಾರ್ಡ್‌ಗಳನ್ನು ಪುನಹ ಕೊಡಿಸುವ ವ್ಯವಸ್ಥೆಯಾಗಬೇಕು. ಅಬ್ಕಾರಿ ಇಲಾಖೆ ಬಗ್ಗೆ ಹೇಳುವುದಾದರೆ, ಗ್ರಾಮೀಣ ಪ್ರದೇಶದಲ್ಲಿ ಸ್ತ್ರೀ ಶಕ್ತಿ ಸಂಘದವರು ಮಾತನಾಡಿಕೊಳ್ಳುವುದನ್ನು ಹೇಳುತ್ತೇನೆ. ದಯಮಾಡಿ ಕೇಳಬೇಕು. ಏನು ಹಿಂದೆ ಸಾರಾಯಿಯನ್ನು ರದ್ಧತಿ ಮಾಡಿದಿರಿ. ನಮ್ಮ ನಾಯಕರೂ ಇದ್ದರು. ನಮ್ಮ ಪಕ್ಷದ ಹೆಮ್ಮೆ ಎಂದು ಹೇಳಿಕೊಂಡೇ ಚುನಾವಣೆಯಲ್ಲಿ ನಾವು ಗೆದ್ದು ಬಂದದ್ದು, ಆದರೆ, ಇವತ್ತು ಎಲ್ಲಾ ಕಡೆ ಬ್ರಾಂಡಿ ಶಾಪ್‌ನ್ನು ತೆರೆಯುತ್ತೇವೆಂದು ಹೇಳುತ್ತಿದ್ದೀರಿ. ನೀವು ಅದನ್ನು ಪಟ್ಟಣ ಪ್ರದೇಶಗಲ್ಲಿ ತೆರೆದುಕೊಂಡುಬಿಡಿ. ಆದರೆ, ಗ್ರಾಮಾಂತರ ಪ್ರದೇಶಕ್ಕೆ ತರಬೇಡಿ. ಅಲ್ಲಿ ಸ್ತ್ರಿ ಶಕ್ತಿ ಸಂಘದವರು ಕಾದುಕೊಂಡು ಕುಳಿತಿದ್ದಾರೆ. ಯಾವುದೆ ಕಾರಣದಿಂದ ಅದನ್ನು ತಂದರೆ ಅವರು ಅವತ್ತು ಸಾರಾಯಿಯನ್ನು ವಿರೋಧ ಮಾಡಲಿಲ್ಲ. ಊರೂರಿನಲ್ಲಿ ಬೇಡ, ಎಕ್ಸೈಸ್ ಗುತ್ತಿಗೆದಾರರು ಜನತಾದಳಕ್ಕೆ ಒಂದು, ಕಾಂಗ್ರೇಸ್‌ಗೆ ಒಂದು ಬಿ.ಜೆ.ಪಿ.ಗೆ ಒಂದು ಅಂಗಡಿಯನ್ನು ಕೊಡಲು ಪ್ರಾರಂಭ ಮಾಡಿದರು. ಆದ್ದರಿಂದ ಗ್ರಾಮಾಂತರ ಪ್ರದೇಶದಲ್ಲಿ, ಊರೂರಿನಲ್ಲಿ ಮೂರು ಮೂರು ಪಾರ್ಟಿ ಮಾಡಿಕೊಂಡು ಕುಡಿಯಲು ಶುರುಮಾಡಿದರು. ಆಗ ಇದನ್ನು ಸ್ತ್ರಿ ಶಕ್ತಿ ಸಂಘದವರು ವಿರೋಧ ಮಾಡಿದರು. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಆ ಅಂಗಡಿಗಳು ಬೇಡ. ನೀವು ಏನಾದರು ಮಾಡುವುದಾದರೆ ಹತ್ತು, ಹದಿನೈದು ಕಿಲೋಮೀಟರ್ ದೂರದಲ್ಲಿ ಮಾಡಿ. ತೀರಾ ಕುಡುಕನಾದರೆ ಅವನು ಅರಸೀಕೆರೆಯಲ್ಲಿ ಹೋಗಿ ಕುಡಿದುಕೊಂಡು ಬರುತ್ತಾರೆ, ಏನೂ ಮಾಡಲು ಆಗುವುದಿಲ್ಲ. ಆದರೆ, ಆ ಊರಿನಲ್ಲಿ ಸಿಕ್ಕಿದರೆ ಅವನು ಕುಡಿಯುತ್ತಾನೆ. ಇದನ್ನು ಕ್ವಾರ್ಟರ್‌ಗೆ 40 ರೂಪಾಯಿ ಮಾಡಿರುವುದು ತಪ್ಪು. ಇದರಿಂದ ರೈತರಿಗೆ ಒಳ್ಳೆಯದಾಗಿದೆಯೆಂದು ನಾವು ತಿಳಿದುಕೊಳ್ಳುವುದಿಲ್ಲ. ಆದರೆ ಪುನಹ ಆ 40 ರೂಪಾಯಿಯದನ್ನು ಊರೂರಿಗೆ ಕೊಟ್ಟರೆ ಊರೂರೇ ಕೆಟ್ಟುಹೋಗುತ್ತದೆ. ಇವತ್ತು ಆಡಳಿತದ ವ್ಯವಸ್ಥೆ ಹೇಗಿದೆಯೊ ಗೊತ್ತಿಲ್ಲ. ಎಲ್ಲಾ ಊರಿನಲ್ಲು thirds, seconds ಇದೆ. ಊರೂರಿನಲ್ಲಿ ಐದೈದು ಬ್ರಾಂಡಿ ಅಂಗಡಿಗಳು ಪ್ರಾರಂಭವಾಗಿದೆ. ಒಬ್ಬ ಹತ್ತು ಕಾಯಿಗೆ ಒಂದು ಕ್ವಾರ್ಟರ್ ಕೊಟ್ಟರೆ ಇನ್ನೊಬ್ಬ ಎಂಟು ಕಾಯಿಗೆ ಒಂದು ಕ್ವಾರ್ಟರ್ ಕೊಡುತ್ತಾರೆ. ಅವನು ಕಾಯಿ ಕೆಡವಿಕೊಂಡು ಬಂದು ಮನೆಯಲ್ಲಿ ಎಸೆದು ಕುಡಿದು ಹೋಗುತ್ತಾನೆ.

ಇನ್ನು ಆರೋಗ್ಯ ಇಲಾಖೆ ಬಗ್ಗೆ ಮಾತನಾಡುವುದಾದರೆ, 5 ಸಾವಿರ ಜನ ಡಾಕ್ಟರ್ಸ್ ಮತ್ತು ನರ್ಸ್‌ಗಳನ್ನು ನೇಮಕಾತಿ ಮಾಡಿಕೊಳ್ಳುತ್ತೇವೆಂದು ಹೇಳಿದ್ದೀರಿ. ಮೊದಲು ಅವರನ್ನು ತೆಗೆದುಕೊಳ್ಳಿ. ಇಲ್ಲದಿದ್ದರೆ ಆಸ್ಪತ್ರೆಗಳೆಲ್ಲಾ ಬಾಗಿಲು ಹಾಕಿಕೊಳ್ಳುತ್ತವೆ. ಇವತ್ತು ನಮ್ಮ ಕ್ಷೇತ್ರದಲ್ಲಿರುವ ಆಸ್ಪತ್ರೆಯಲ್ಲಿ 4 ಜನ MBBS ಡಾಕ್ಟರ್ಸ್ ಇರಬೇಕಾಗಿತ್ತು, ಆದರೆ ಅವರಲ್ಲಿ

3 ಜನರಿಲ್ಲ. ಅರಸೀಕೆರೆಯಂತಹ ಹೋಬಳಿ Head quarters ನಲ್ಲೇ ಈ ರೀತಿ ಡಾಕ್ಟರ್ ಇಲ್ಲವೆಂದರೆ ಹೇಗೆ? ಅದರಲ್ಲಿ ನಮ್ಮದೂ ಒಂದು ತಪ್ಪಿದೆ. ಲಕ್ಷಾಂತರ ಅಥವಾ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ, ಓದಿಕೊಂಡು ಬಂದಿರುವ ಡಾಕ್ಟರಿಗೆ contract basis ನಲ್ಲಿ 15 ಸಾವಿರ ರೂ.ಗಳಿಗೆ ನೀವು ಕೆಲಸ ಮಾಡಿ ಎಂದರೆ, ಅವರು ಯಾವ ಆಧಾರದ ಮೇಲೆ ಮಾಡುತ್ತಾರೆ? ಒಬ್ಬ Second Division Clerk 15 ಸಾವಿರ ರೂ.ಗಳ ಸಂಬಳವನ್ನು ತೆಗೆದುಕೊಳ್ಳುತ್ತಾನೆ. ಇವತ್ತು MBBS ಓದಿರುವ ಡಾಕ್ಟರಿಗೆ 15 ಸಾವಿರ ರೂ.ಗಳಿಗೆ contract basis ನಲ್ಲಿ ಕೆಲಸ ಮಾಡಿ ಎಂದರೆ, ಅದು ಪ್ರಾಮಾಣಿಕತನ ಆಗುವುದಿಲ್ಲ. ಅದಲ್ಲದೆ, ಅವರನ್ನು ಲೋಕಸೇವಾ ಆಯೋಗದ ಮುಖಾಂತರ ಪ್ರಾಮಾಣಿಕತೆಯಿಂದ ತೆಗೆದುಕೊಳ್ಳಿ ರಾತ್ರಿ ಹೊತ್ತು ಮತ್ತು ಸಂಜೆ ಹೊತ್ತು ಏನು ಅವರು private ಡಾಕ್ಟರ್ ಕೆಲಸ ಮಾಡುತ್ತಾರೋ ಅದನ್ನು ನಿಲ್ಲಿಸಿ. ಯಾವುದಾದರೂ ಸರ್ಕಾರಿ ಆಸ್ಪತ್ರೆಗೆ ಜನರು ಹೋದರೆ, ಅವರಿಗೆ 'ಸಾಯಂಕಾಲ ಶಾಪ್ ಹತ್ತಿರ ಬನ್ನಿ' ಎಂದು ಹೇಳಲಾಗುತ್ತದೆ. ಅಲ್ಲಿ 200–300 ರೂ.ಗಳನ್ನು charge ಮಾಡುತ್ತಾರೆ. ಇಂತಹದ್ದನ್ನು ಏತಕ್ಕೋಸ್ಕರ ಮಾಡಲಿಕ್ಕೆ ಬಿಟ್ಟಿದ್ದೀರಿ. ಸಾಯಂಕಾಲದ ಹೊತ್ತು duty ಮುಗಿದ ತಕ್ಷಣ, ಅವರು ಹೋಗಿ ಏನು private shop ಗಳನ್ನು ತೆರೆದಿದ್ದಾರೆ, ಅದನ್ನು ದಯಮಾಡಿ ನಿಲ್ಲಿಸಿ. ಅದರಿಂದ ಈ ದೇಶದ ಜನತೆಗೆ ಒಳ್ಳೆಯದಾಗುತ್ತಿಲ್ಲ, ಈ ರೈತರಿಗೆ ಒಳ್ಳೆಯದಾಗುತ್ತಿಲ್ಲ. ಇದನ್ನು ದಯಮಾಡಿ ನಿಲ್ಲಿಸಿ. ನಮಗೆ ಒಳ್ಳೆಯ ವೇತನವನ್ನು ಕೊಡಲಿ, ನಮ್ಮ conditions ಗೆ ಒಪ್ಪಿಕೊಳ್ಳಲಿ, ನಾವು private shop ಮಾಡುವುದಿಲ್ಲ ಎಂದು ಅವರು ಹೇಳುತ್ತಾರೆ. ದಯಮಾಡಿ ಅದನ್ನು ನಿಲ್ಲಿಸಿ, ಅವರಿಗೆ ಒಳ್ಳೆಯ ವ್ಯವಸ್ಥೆಯನ್ನು ಮಾಡಿಕೊಡಿ. ಡಾಕ್ಟರ್ ಅನ್ನು ನಾವು ಉತ್ತಮವಾದ ಸ್ಥಿತಿಯಲ್ಲಿ ಸಮಾಜದಲ್ಲಿ ನೋಡುವಂತಾಗಬೇಕು. MBBS ಓದಿ ಬಂದಿರುವಂತಹ ಡಾಕ್ಟರ್ ಅನ್ನು Second Division Clerk ತರಹ treat ಮಾಡಿದರೆ, ಅದು ಸೂಕ್ತವಾದುದಲ್ಲ. ದಯಮಾಡಿ ಅದನ್ನು ಬದಲಾಯಿಸಿ. Government Hospital ನಲ್ಲಿ injection ತೆಗೆದುಕೊಂಡರೆ ಹುಷಾರಾಗುವುದಕ್ಕೆ ಒಂದು ವಾರ ಬೇಕು, ಖಾಸಗಿ ಕ್ಲಿನಿಕ್‌ಗೆ ಹೋದರೆ ಎರಡು injection ನಲ್ಲೇ ಹುಷಾರಾಗುತ್ತದೆ ಎಂದು ಹಳ್ಳಿಗಳಲ್ಲಿ ಜನ ಮಾತನಾಡಿಕೊಳ್ಳುತ್ತಾರೆ. ಅದಕ್ಕೆ ಕಾರಣ Drug supply ಮಾಡತಕ್ಕಂಥ company ಗಳಲ್ಲಿ ಇರತಕ್ಕಂಥ ವೈಫಲ್ಯತೆ, ಅಧಿಕಾರಿಗಳ ವೈಫಲ್ಯತೆ. ಕೆಟ್ಟ ಹೆಸರು ಇರತಕ್ಕಂಥ drugs company ಗಳಿಗೆ supply ಮಾಡುವುದಕ್ಕೆ order ಕೊಡುವುದರಿಂದ ನಿಜವಾಗಿಯೂ ಆ ಮಟ್ಟ ತಲುಪಿದೆ ಎಂದು ಕೆಲವೊಂದು ಡಾಕ್ಟರ್‌ಗಳು ನಮ್ಮ ಹತ್ತಿರ ವಿಶ್ಲೇಷಣೆ ಮಾಡುತ್ತಾರೆ.

ಏನು ಚುಚ್ಚಿದರೂ ಅದು ನಾಟುವುದಿಲ್ಲ. ಆ ಪ್ರಮಾಣದ ಕಡಿಮೆ ಗುಣಮಟ್ಟದ ಔಷಧಿಗಳನ್ನು ತಂದು supply ಮಾಡುತ್ತಾರೆ ಎನ್ನುವ ಮಾತಿದೆ. ಆ ವಿಷಯದಲ್ಲಿ ನಾವೇನೂ ಪರಿಣಿತರಲ್ಲ. ಆದರೆ ಜನ ಹೇಳುವುದನ್ನು ನಾವು ಕೇಳಿದ್ದೇವೆ. ದಯಮಾಡಿ ಅದರ ಬಗ್ಗೆ ಸೂಕ್ತವಾದಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ.

**ಅಧ್ಯಕ್ಷರು** :- ಮಾನ್ಯ ಶಿವಲಿಂಗೇಗೌಡರೆ, ತಮ್ಮ ಭಾಷಣ conclude ಮಾಡಿ.

**ಶ್ರೀ ಕೆ.ಎಂ. ಶಿವಲಿಂಗೇಗೌಡ** :- ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ನನ್ನ ಕ್ಷೇತ್ರದ ಸಮಸ್ಯೆಯೊಂದನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಡ್ಯಾಂಗಳಿಂದ ಕಷ್ಟ ಇರುವಂತಹ ಗ್ರಾಮಗಳಿಗೆ, ನಗರಗಳಿಗೆ ನೀರನ್ನು ಕೊಡುತ್ತೇವೆ ಎನ್ನುವುದನ್ನು ಬಜೆಟ್‌ನಲ್ಲಿ ಹೇಳಿದ್ದೀರಿ. ಆದರೆ ಇವತ್ತಿನ ದಿವಸ ನನ್ನ ಅರಸೀಕೆರೆ ಕ್ಷೇತ್ರದಲ್ಲಿ 271 ಗ್ರಾಮಗಳ ನೀರಿನಲ್ಲಿ ಫ್ಲೋರೈಡ್ ಅಂಶ ಕಾಡುತ್ತಿದೆ. 2.2 ರಿಂದ 2.8 ರವರೆಗೆ ಇವತ್ತು ಫ್ಲೋರೈಡ್‌ನ ಅಂಶ ಬಂದಿದೆ. ಇವತ್ತಿನ ದಿವಸ ಫ್ಲೋರೈಡ್‌ನ ಜಾಸ್ತಿಯಾಗಲಿಕ್ಕೆ ಕಾರಣ ಅಲ್ಲಿ ಅಂತರ್ಜಲದ ಮಟ್ಟ ಕುಸಿದು ಹೋಗಿದೆ. ನೀರಿಗಾಗಿ 300–500 ಅಡಿಗಳವರೆಗೆ ಆಳಕ್ಕೆ ಹೋಗಬೇಕು. ಆಳಕ್ಕೆ ಹೋದಂತಹ ಸಂದರ್ಭದಲ್ಲಿ ಖನಿಜಾಂಶಗಳು ಮೇಲಕ್ಕೆ ಬಂದು, ಇವತ್ತು ಆ ರೀತಿಯಾಗಿದೆ. ಬೆಂಗಳೂರಿಗೆ ಬಂದು ನಾಲ್ಕು ದಿವಸ ಸ್ನಾನ ಮಾಡಿದರೆ ನಾವು ಬೆಳ್ಳಗಾಗುತ್ತೇವೆ. ಅರಸೀಕೆರೆಯಲ್ಲಿ ಮತ್ತೆ ವಾಪಸ್ ಹೋಗಿ ಸ್ನಾನ ಮಾಡಿದರೆ ಕಪ್ಪಗಾಗುತ್ತೇವೆ. ನನ್ನ ಕೈ ಕಾಲುಗಳೇ ಹಿಡಿದುಕೊಳ್ಳುತ್ತವೆ. ಆ ಫ್ಲೋರೈಡ್ ಅಂಶ ಅಷ್ಟೊಂದು ಇದೆ. ಒಂದು ಹಂಡೆ ನೀರನ್ನು ಕಾಯಿಸಿದರೆ, ಒಂದು ಬಕೆಟ್ ಅನ್ನು ಎತ್ತಿ ಆಚೆಗೆ ಎಸೆದು, ನಂತರವೇ ಸ್ನಾನ ಮಾಡಬೇಕು. ನಾನು ಮುಂದಿನ ಸಲದ assembly ಗೆ ಬರುವಾಗ ಅದನ್ನು ಹೊತ್ತುಕೊಂಡು ಬರುತ್ತೇನೆ. ಈ ರಾಜ್ಯದಲ್ಲೇ ಅತಿ ಸೂಕ್ಷ್ಮವಾದಂತಹ ಕುಡಿಯುವ ನೀರಿನ ಸಮಸ್ಯೆ ಇರುವ ತಾಲ್ಲೂಕು ಯಾವುದಾದರೂ ಇದೆ ಎನ್ನುವುದಾದರೆ, ಅದು 'ಅರಸೀಕೆರೆ ತಾಲ್ಲೂಕು' ಎನ್ನುವುದನ್ನು ಇವತ್ತು ನಾನು ಈ ಸದನದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಯಾವುದೇ ಕಾರಣದಿಂದ ಈ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಗಮನ ಹರಿಸದೇ ಇರಬೇಡಿ. ಹಿಂದೆ ನಮ್ಮ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಕುಮಾರ ಸ್ವಾಮಿಯವರು 50 ಲಕ್ಷ ರೂ.ಗಳನ್ನು ರಾಜೀವ್‌ಗಾಂಧಿ ಸಬ್ ಮಿಷನ್‌ನಲ್ಲಿ ಕೊಟ್ಟಿದ್ದರು. ಅದರಲ್ಲಿ 18 ಲಕ್ಷ ರೂ.ಗಳು ಮಾತ್ರ ಮಂಜೂರಾಗಿದೆ. ಒಂದು ಹೋಬಳಿಗೆ ಮಾತ್ರ ಆ ಹಣ ಸಾಕಾಗುತ್ತದೆ. ಉಳಿದಿರತಕ್ಕಂಥ ಇಡೀ ತಾಲ್ಲೂಕಿನ ಎಲ್ಲಾ ಭಾಗಕ್ಕೆ ಅದು

ಸಾಕಾಗುತ್ತಿಲ್ಲ. ರಾಜೀವ್‌ಗಾಂಧಿ ಸಬ್ ಮಿಷನ್‌ನಲ್ಲಿ ಬೇಕಾದಷ್ಟು ದುಡ್ಡಿದೆ, ಕೊಡುತ್ತಾರೆ. ನೀವು ಆ estimate ಅನ್ನು ಮಾಡಿಸಿ, ಕಳುಹಿಸಿಕೊಡಿ. ತಾಲ್ಲೂಕನ್ನು ಕುಡಿಯುವ ನೀರಿನ ಗಂಡಾಂತರದಿಂದ ಪಾರು ಮಾಡಿ. ನಿಮಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ, ದಯಮಾಡಿ ಶಾಶ್ವತವಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕೆ ಸರ್ಕಾರ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ನಿಮಗೆ ಹೆಚ್ಚಿಗೆ ತೊಂದರೆ ಕೊಡುವುದಕ್ಕೆ ಹೋಗುವುದಿಲ್ಲ, ಬೇಗನೆ ಮುಗಿಸುತ್ತೇನೆ. ಇನ್ನು ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಹೇಳುವುದಾದರೆ,...

**ಅಧ್ಯಕ್ಷರು** :– ಮಾತು ಮುಗಿಸುತ್ತೇನೆ ಎಂದು ಹೇಳುತ್ತಲೇ ಸಮಾಜ ಕಲ್ಯಾಣ ಇಲಾಖೆ ವಿಷಯ ಪ್ರಸ್ತಾಪಿಸುತ್ತಿದ್ದೀರಲ್ಲಾ?

**ಶ್ರೀ ಕೆ.ಎಂ. ಶಿವಲಿಂಗೇಗೌಡ** :– ಮಾನ್ಯ ಅಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆಯಲ್ಲಿ ಏನಾಗಿದೆ ಎಂದರೆ, ಇವತ್ತು ಅವರು SC/ST ಗಳಿಗೆ ಬೋರ್‌ವೆಲ್ ಕೊರೆಸುತ್ತಿದ್ದಾರೆ. 2–3 ವರ್ಷಗಳಾದರೂ ಅದಕ್ಕೆ ಕರೆಂಟ್ ಕೊಡುವುದಿಲ್ಲ. ಆದರೆ first bore well ಕೊರೆದ ತಕ್ಷಣ ಅವನ ಮನೆಗೆ ಒಂದು starter, ಒಂದು motor, 4-5 GI pipes supply ಆಗುತ್ತದೆ. ಏತಕ್ಕಾಗಿ ಅವುಗಳನ್ನು ಕೊಡುತ್ತೀರಾ? ಕರೆಂಟ್ ಇಲ್ಲದೆ ಬೋರ್‌ವೆಲ್‌ಗಳನ್ನು ಏತಕ್ಕಾಗಿ ಕೊರೆಸುತ್ತೀರಿ? ಅಲ್ಲಿ ಕರೆಂಟೇ ಇಲ್ಲ. ಕರೆಂಟ್‌ಗೆ ಇವರು ಮೊದಲು ದುಡ್ಡು ಕಟ್ಟುವುದಿಲ್ಲ, ಕರೆಂಟ್‌ಗೆ ಮೊದಲು estimate ಮಾಡುವುದಿಲ್ಲ. ಕಂಬವೇ ಇರುವುದಿಲ್ಲ, ಅವನಿಗೆ 30 ಕಂಬಗಳು ಬೇಕಾಗಿರುತ್ತವೆ. ಎಲ್ಲಾ ಶಾಸಕರಿಗೂ ಇದರ ಅನುಭವವಾಗಿದೆ. ಎಲ್ಲರ ಮನೆ ಬಾಗಿಲಿಗೂ ಕೂಡ ಅವರು ಬರುತ್ತಾರೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಇದಕ್ಕಾಗಿ ಇಷ್ಟೊಂದು ದುಡ್ಡನ್ನು ಪರಿಶಿಷ್ಟ ವರ್ಗ ಮತ್ತು ಜನಾಂಗದವರಿಗೆ ಖರ್ಚು ಮಾಡುತ್ತಿದ್ದೀರಿ, ಅಲ್ಪಸಂಖ್ಯಾತರಿಗೂ ಕೂಡ ಖರ್ಚು ಮಾಡುತ್ತಿದ್ದೀರಿ. ಇದೆಲ್ಲದರ ಒಟ್ಟು ಸಾರಾಂಶ ಏನೆಂದರೆ, ಇವತ್ತು ಇಲ್ಲಿ ಕುಳಿತುಕೊಂಡು ಪ್ಯಾಕೇಜ್‌ನಲ್ಲಿ ಟೆಂಡರ್ ಕರೆದು ಬಿಡುವುದು. Starter ಗಳನ್ನು ಖರೀದಿ ಮಾಡುವುದು, motor ತೆಗೆದುಕೊಳ್ಳುವುದು, pipes ತೆಗೆದುಕೊಳ್ಳುವುದು, ಕಮಿಷನ್ ಹೊಡೆಯುವುದು. ಇದು ಇವತ್ತು ಆಗುತ್ತಿದೆ. ಅವನು ದಿವಸ ಅಲ್ಲಿ ಕರೆಂಟ್ ಅಧಿಕಾರಿಗಳ ಹತ್ತಿರ ಬಂದು, ನನಗೆ ಕರೆಂಟ್ ಕೊಡಿ ಎಂದು ಹೇಳುತ್ತಲೇ ಇರುತ್ತಾನೆ. ಆ ಕರೆಂಟ್‌ಗೆ ದುಡ್ಡು ಅನ್ನು ಕಟ್ಟುವುದೇ ಇಲ್ಲ. ಇವರು

ಅದಕ್ಕಾಗಿ ಇಟ್ಟಿರುವುದು 70 ಸಾವಿರ ರೂಪಾಯಿಗಳು. ಆದರೆ ಅವನಿಗೆ ಅದಕ್ಕಾಗಿ ಎರಡೂವರೆ ಲಕ್ಷ ರೂಪಾಯಿಗಳ estimate ಆಗಿರುತ್ತದೆ. ಅದನ್ನು ಯಾರು ತುಂಬುತ್ತಾರೆ? ಅದನ್ನು ತುಂಬಿ ಎಂದು ಅವನಿಗೆ ನೋಟಿಸ್ ಅನ್ನು ಕೊಡಲಾಗುತ್ತದೆ. ಅವನು ಎಲ್ಲಿಂದ ದುಡ್ಡು ತಂದು ತುಂಬುತ್ತಾನೆ? ನಾವು ಇಲ್ಲಿ ಕುಳಿತುಕೊಂಡು SC/ST ಗಳಿಗೆ 75–90% ಗಳವರೆಗೆ ಹಣ ಕೊಟ್ಟಿದ್ದೇವೆಂದು ಹೇಳಿಕೊಳ್ಳುತ್ತೇವೆ. ಆದರೆ ಅವರಿಗೆ ತಲುಪುವುದು ಎಷ್ಟು? ಎಷ್ಟು ಜನ ನೀರು ಬಳಸಿಕೊಳ್ಳುತ್ತಿದ್ದಾರೆ? ಎಷ್ಟು ಜನ ಬೆಳೆ ಬೆಳೆಯುತ್ತಿದ್ದಾರೆ? ಎಷ್ಟು ಜನ ಅದರಿಂದ ಸಮೃದ್ಧಿಯಾಗಿದ್ದಾರೆ ಎನ್ನುವಂತಹ ಮಾಹಿತಿ ಏನಾದರೂ ಸರ್ಕಾರಕ್ಕೆ ಇದೆಯೇ? ನಾವು ಅಲ್ಲಿ ದಿನನಿತ್ಯ ನೋಡುತ್ತೇವೆ. ಬಾವಿ ಕೊರೆದು 3–4 ವರ್ಷಗಳಾದರೂ ಕೂಡ ಅವರಿಗೆ ಕರೆಂಟ್ ಕೊಡಲಿಕ್ಕೆ ಆಗಿಲ್ಲ. ಇದು ಇವತ್ತಿನ ಪರಿಸ್ಥಿತಿ ಆಗಿದೆ. ಇದನ್ನೆಲ್ಲಾ ನಾವು ಏಕೆ ಹೇಳುತ್ತಿದ್ದೇವೆ ಎಂದರೆ, ಗ್ರಾಮೀಣ ಪ್ರದೇಶದಲ್ಲಿ ನೇರವಾಗಿ ಅವರ ಸಂಪರ್ಕದಲ್ಲಿ ಇರುವುದರಿಂದ ಅವರ ಕಷ್ಟ ಸುಖಗಳು ಗೊತ್ತಿರುವುದರಿಂದ, ಇದನ್ನು ಈ ಸದನದಲ್ಲಿ ಒತ್ತಿ ಒತ್ತಿ ಹೇಳಿದರೆ, ಬಹುಶಃ ಇದಕ್ಕೊಂದು ರೂಪ ಸಿಗಬಹುದು, ನಿಜವಾಗಿಯೂ ಈ ಸಮಸ್ಯೆ ಬಗೆಹರಿದು ಒಳ್ಳೆಯದಾಗಬಹುದು ಎಂಬ ದೃಷ್ಟಿಯಿಂದ ಇವತ್ತು ನಾನು ಈ ಸಂದರ್ಭದಲ್ಲಿ ಇದನ್ನು ಹೇಳಲಿಕ್ಕೆ ಬಯಸುತ್ತೇನೆ. ಕೊನೆಯದಾಗಿ, ನಮ್ಮ ಎಲ್ಲಾ ಶಾಸಕರು 'ಶಾಸಕರ ನಿಧಿ ಬಗ್ಗೆ ಮಾತನಾಡಿ' ಎಂದು ನನಗೊಂದು ಚೀಟಿಯನ್ನು ಕಳುಹಿಸುತ್ತಿದ್ದಾರೆ. ಶಾಸಕರ ನಿಧಿ ನೀವು ಏನಾದರೂ ನಮಗೆ ಕೊಡದಿದ್ದರೆ, ನಾವು ಗ್ರಾಮ ಪಂಚಾಯಿತಿ ಮೆಂಬರ್‌ಗಿಂತ ಕಡೆಯಾಗುತ್ತೇವೆ. ನಮ್ಮನ್ನು ಯಾರೂ ಏನೂ ಕೇಳುವುದಿಲ್ಲ. ನೀವು ದಯಮಾಡಿ ಆ ಪಕ್ಷ, ಈ ಪಕ್ಷ, ಅದು ಇದು ಎಂದು ಏನನ್ನೂ ನೋಡುವುದಕ್ಕೆ ಹೋಗಬೇಡಿ. ರಾಜಕಾರಣ ಹೀಗೆಯೇ ಇರುವುದಿಲ್ಲ, ಚಕ್ರ ಉರುಳುತ್ತಲೇ ಇರುತ್ತದೆ. ಅದು ಹೇಗೇಗೆ ಬರುತ್ತದೋ ಹಾಗೆ ಹೋಗುತ್ತಿರುತ್ತದೆ. ಶಾಸಕರ ಪರವಾಗಿ ನಾನು ಇವತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಮಾಡುತ್ತಿದ್ದೇನೆ. ಶಾಸಕರ ನಿಧಿಗೆ 1 ಕೋಟಿ ರೂ.ಗಳು ಸಾಕಾಗುವುದಿಲ್ಲ. Estimate cost ಜಾಸ್ತಿಯಾಗಿದೆ. ಹಿಂದೆ 5 ಲಕ್ಷ ರೂ.ಗಳಿಗೆ ಆಗುತ್ತಿದ್ದ ಕೆಲಸಕ್ಕೆ ಇವತ್ತು 10 ಲಕ್ಷ ರೂ.ಗಳು ಬೇಕಾಗುತ್ತಿದೆ. ಆದ್ದರಿಂದ ದಯಮಾಡಿ ಶಾಸಕರ ಗೌರವ ಏನಾದರೂ ಉಳಿಸಬೇಕೆಂದರೆ, ಶಾಸಕರ ನಿಧಿಗೆ 2 ಕೋಟಿ ರೂ.ಗಳನ್ನು ಕೊಟಿ. ನಿಮ್ಮ ಶಾಸಕರೂ ಇದ್ದಾರೆ, ನಮ್ಮ ಶಾಸಕರೂ ಇದ್ದಾರೆ, ನೀವೂ ಇದ್ದೀರಿ. ದಯಮಾಡಿ ಮುಖ್ಯಮಂತ್ರಿಗಳು ಈ ಕಡೆಗೆ ಗಮನ ಕೊಡಬೇಕೆಂದು ಕೈ ಮುಗಿಯುತ್ತೇನೆ. 2 ಕೋಟಿ ರೂ.ಗಳನ್ನು ಏನಾದರೂ ಮಾಡಿ ನೀವು ಕೊಟ್ಟರೆ, 'ಮಾನ್ಯ

ಯಡಿಯೂರಪ್ಪನವರಿಗೆ ಜಿಂದಾಬಾದ್' ಎಂದು ನಾವೆಲ್ಲಾ ಶಾಸಕರೂ ಹೇಳುತ್ತೇವೆ. ಮಾನ್ಯ ಮುಖ್ಯಮಂತ್ರಿಗಳು ಶಾಸಕರಿಗೆ 2 ಕೋಟಿ ರೂ.ಗಳನ್ನು ಕೊಡಬೇಕು. ಇದರಲ್ಲಿ ಯಾವುದೇ ವಿಧವಾದಂತಹ ಭಿನ್ನಾಭಿಪ್ರಾಯ ಮಾಡಬೇಡಿ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

**ಶ್ರೀ ಸಿ.ಟಿ. ರವಿ** :– ಶಾಸಕರಿಗೆ 2 ಕೋಟಿ ರೂ.ಗಳನ್ನು ಕೊಡಬೇಕೇ?

**ಶ್ರೀ ಕೆ.ಎಂ. ಶಿವಲಿಂಗೇಗೌಡ** :– ಶಾಸಕರ ನಿಧಿಗೆ ಕೊಡಿ ಎಂದು ಕೇಳುತ್ತಿದ್ದೇನೆ. ಶಾಸಕರಿಗೆ ಕೊಡಿ ಎಂದು ಕೇಳುತ್ತಿಲ್ಲ. ಇದೇನು ವ್ಯಾಪಾರವೇ? ಸರ್ಕಾರದ ಹಣ 2 ಕೋಟಿ ರೂ.ಗಳನ್ನು ಶಾಸಕರ ನಿಧಿಗೆ ಕೊಡಿ ಎಂದು ಕೇಳುತ್ತಿದ್ದೇನೆ. ಅದನ್ನು ಶಾಸಕರಿಗೆ ಕೊಡಿ ಎಂದು ಕೇಳುತ್ತಿದ್ದೇನೆಂದು ತಿಳಿದುಕೊಳ್ಳಬೇಡಿ.

**ಒಬ್ಬ ಮಾನ್ಯ ಸದಸ್ಯರು** :– ಮಾನ್ಯ ಸಿ.ಟಿ. ರವಿಯವರೆ, ಈಗಾಗಲೇ 2 ಕೋಟಿ ರೂ.ಗಳನ್ನು ಎಷ್ಟು ಜನರಿಗೆ ಕೊಟ್ಟಿದ್ದೀರಿ?

[ಗೊಂದಲ]

**ಒಬ್ಬ ಮಾನ್ಯ ಸದಸ್ಯರು** :– ಲೋಕಸಭೆಯಲ್ಲಿ ಆರು ಜನರನ್ನು ತೆಗೆದುಕೊಂಡಿರಲ್ಲಾ, ಅವರಿಗೆ ತಲಾ 3 ಕೋಟಿ ರೂ.ಗಳನ್ನು ಕೊಟ್ಟಿದ್ದೀರಾ?

[ಗೊಂದಲ]

**ಶ್ರೀ ಡಿ.ಕೆ. ಶಿವಕುಮಾರ್** :– ನಿಮಗೆಲ್ಲಾ ಏನಾಗಿದೆ ಎಂದರೆ, ಅವರು ಪಾಪ, 'ಶಾಸಕರ ನಿಧಿಗೆ 2 ಕೋಟಿ ರೂ.ಗಳನ್ನು ಕೊಡಿ' ಎಂದು ಕೇಳಿದರು. ಆದರೆ ನಿಮಗೆ 2 ಕೋಟಿ ರೂ.ಗಳು ಎಂದಾಕ್ಷಣ, ಸದಾಶಿವನಿಗೆ ಅದೇ ಧ್ಯಾನ ಎನ್ನುವಂತೆ ಅದು ನಮಗೇ ಎಂದುಕೊಂಡು ಲೆಕ್ಕ ಹಾಕಿಕೊಂಡು ನೀವು ಕುಳಿತಿದ್ದೀರಾ?

**ಶ್ರೀ ಸಿ.ಟಿ. ರವಿ** :– ಅದೆಲ್ಲಾ ರೇಟ್ ಬೇರೆಯೇ ಇದೆ.

**ಶ್ರೀ ಡಿ.ಕೆ. ಶಿವಕುಮಾರ್** :– ಆ ರೇಟ್ ಏನು? ಎಂಬುದನ್ನು ದಯವಿಟ್ಟು ಹೇಳಿ. ಇವರ ಬೆಲೆ ಎಷ್ಟು ಎಂಬುದು ಸ್ವಲ್ಪ ನಮಗೆ ಗೊತ್ತಾಗಬೇಕು.

**ಅಧ್ಯಕ್ಷರು** :– ಮಾನ್ಯ ಶಿವಲಿಂಗೇಗೌಡರೆ, ತಮ್ಮ ಭಾಷಣ ಮುಗಿಸಿದಿರಾ?

**ಶ್ರೀ ಕೆ.ಎಂ. ಶಿವಲಿಂಗೇಗೌಡ** :- ಕೊನೆಯದಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದೇನೆಂದರೆ, ಯಾವುದೇ ದ್ವೇಷ ಬೇಡಿ ನಾವು ಶಾಸಕರಾಗಿದ್ದೇವೆ. ಈಗ ನಮ್ಮ ಕ್ಷೇತ್ರದಲ್ಲಿ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಇದ್ದರು ಅವರಿಗೆ ಇನ್ನು 6 ತಿಂಗಳ ಅವಧಿ ಇತ್ತು ಅವರನ್ನು ವರ್ಗಾವಣೆ ಮಾಡಿದ್ದೀರಿ. ಹಿಂದೆ ಇದ್ದ ಬಿಜೆಪಿ ಶಾಸಕರೆ ಅವರನ್ನು ಹಾಕಿಸಿಕೊಂಡಿದ್ದರು, ಇನ್ನು 6 ತಿಂಗಳ ಅವಧಿ ಇದೆ, ನೀನು ಒಳ್ಳೆಯ ಕೆಲಸವನ್ನು ಮಾಡಿಕೊಂಡು ಹೋಗಪ್ಪವೆಂದು ಹೇಳಿ, ಒಂದು ಪತ್ರ ಬೇಕೆಂದರು, ಕೊಟ್ಟಿದ್ದೇವೆ, ಆದರೆ ನೀವು ಅವರನ್ನು ವರ್ಗಾವಣೆ ಮಾಡಿದ್ದೀರಿ. ದಯಮಾಡಿ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ವರ್ಗಾವಣೆ ಮಾಡಬೇಕಾದರೆ, ಶಾಸಕರ ಭಾವನೆಗಳಿಗೆ ಸ್ಪಂದಿಸದೆ ಹೋದರೆ ಮಾನ್ಯ ಮುಖ್ಯಮಂತ್ರಿಗಳೆ, ನಿಮಗೆ ಕೆಟ್ಟ ಹೆಸರು, ಏಕೆಂದರೆ ವಿರುದ್ಧವಾದ ಶಾಸಕರು ಬಂದರೆ ನಾವೇನು ಸುಮ್ಮನೆ ಕೂರುವವರಲ್ಲ, ನಮಗು ಅವರಿಗು ಲಟಾಪಟಿ ನಡೆದಾಗ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಬಹುದು, ಘರ್ಷಣೆಗಳಾಗಬಹುದು. ಆಗ ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರ ಕಾಲದಲ್ಲಿ ಬಹಳ ಧಾಂದಲೆಯಾಯಿತು ಎಂಬ ಕೆಟ್ಟ ಹೆಸರು ನಿಮಗೆ ಬರುತ್ತದೆ. ಆದುದರಿಂದ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅವರನ್ನು ಪ್ರೀತಿ, ವಿಶ್ವಾಸಕ್ಕೆ ತೆಗೆದುಕೊಂಡು ಆಡಳಿತ ನಡೆಸಿದರೆ ನಿಜವಾಗಲು ನಿಮಗೆ ಒಳ್ಳೆಯದಾಗುತ್ತದೆ. ಆ ಒಂದು ಭಾವನೆಯಲ್ಲಿ ಆಡಳಿತ ಮಾಡಬೇಕು ದ್ವೇಷದ ರಾಜಕಾರಣ ಮಾಡಬೇಡಿ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನೇನು ನಿಮಗೆ ಸೂಚನೆಯನ್ನು ಕೊಡುವುದಿಲ್ಲ, ಆದೇಶ ಕೊಡುವುದಿಲ್ಲ, ಕೈ ಮುಗಿದು ಮನವಿ ಮಾಡುತ್ತೇನೆ, ಎಲ್ಲರನ್ನು ಒಂದೇ ಭಾವನೆಯಿಂದ ನೋಡಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸರ್ಕಾರ ಮಂಡಿಸಿರುವ ಬಜೆಟ್ ಬಗ್ಗೆ ನನ್ನ ಸಂಪೂರ್ಣವಾದ ವಿರೋಧವಿದೆ, ನಿಮ್ಮ ಚುನಾವಣೆ ಭರವಸೆಗಳನ್ನು ಈಡೇರಿಸಿಕೊಳ್ಳುವುದಕ್ಕೋಸ್ಕರ ಈ ರಾಜ್ಯದ ರೈತರನ್ನು ಹಾಗು ರಾಜ್ಯವನ್ನು ಬಲಿಕೊಟ್ಟಿದ್ದೀರೆಂದು ನಾನು ಅಂತಿಮವಾಗಿ ಹೇಳಬಯಸುತ್ತೇನೆ, ನನಗೆ ಮಾತನಾಡಲು ಇಷ್ಟೊಂದು ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

**ಅಧ್ಯಕ್ಷರು** :- ಮಾನ್ಯ ಮುಖ್ಯಮಂತ್ರಿಗಳು, ದಿ: ಎ.ಪಿ.ಬಾಬು, ಅಧ್ಯಕ್ಷರು, ಮಧ್ಯಪಾನ ವಿರೋಧಿ ಅಂದೋಳನ ಇವರ ಕೊಲೆಯ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತಾರೆ.